
ಬುಧವಾರ, ಜೂನ್ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 181 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಲಸಿಕೆ ಅಜ್ಞಾನ ಹಿಂಜರಿಕೆಗೆ ಕಾರಣ
ಅ. 17ರಿಂದ ಯುಎಇಯಲ್ಲಿ ಟಿ20 ವಿಶ್ವಕಪ್ ಟೂರ್ನಿ 12
ಎಸ್‌ಬಿಐ ಎಟಿಎಂ: ನಾಳೆಯಿಂದ ಹೊಸ ಶುಲ್ಕ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,550	15,748	₹48,450 (ಬೆಂಗಳೂರು)	₹70,200 (ಬೆಂಗಳೂರು)	74.23

ಮತ್ತೊಂದು ಲಸಿಕೆಗೆ ಒಪ್ಪಿಗೆ

ಮೊಡೆರ್ನಾಗೆ ಅನುಮೋದನೆ: ಫೈಝರ್, ಜಾನ್ಸನ್ ಎಂಡ್ ಜಾನ್ಸನ್ ಸಂಸ್ಥೆ ಜೊತೆಗೂ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ತಡೆ ಲಸಿಕೆಯ ತೀವ್ರ ಕೊರತೆಯ ನಡುವೆಯೇ ಮತ್ತೊಂದು ಲಸಿಕೆ ಭಾರತದಲ್ಲಿ ಬಳಕೆಗೆ ಲಭ್ಯವಾಗಲಿದೆ.



ಕೋವಿಡ್-19 ವಿರುದ್ಧದ ಲಸಿಕೆ 'ಮೊಡೆರ್ನಾ'ದ ತುರ್ತು ಬಳಕೆಗೆ ಕೇಂದ್ರ ಸರ್ಕಾರವು ಮಂಗಳವಾರ ಅನುಮತಿ ನೀಡಿದೆ. ಲಸಿಕೆ ಲಭ್ಯತೆಯನ್ನು ಹೆಚ್ಚಿಸುವುದಕ್ಕಾಗಿ, ಫೈಝರ್ ಮತ್ತು ಜಾನ್ಸನ್ ಎಂಡ್ ಜಾನ್ಸನ್ ಕಂಪನಿಗಳ ಜತೆಗೂ ಸರ್ಕಾರ ಮಾತುಕತೆ ನಡೆಸುತ್ತಿದೆ.

ಮೊಡೆರ್ನಾ ಲಸಿಕೆಯನ್ನು ಸಿಪ್ಲಾ ಕಂಪನಿಯು ಭಾರತಕ್ಕೆ ಆಮದು ಮಾಡಿಕೊಳ್ಳಲು ಭಾರತದ ಔಷಧ ನಿಯಂತ್ರಕರು ಒಪ್ಪಿಗೆ ಕೊಟ್ಟಿದ್ದಾರೆ. ಭಾರತದಲ್ಲಿಯೇ ತಯಾರಾಗುತ್ತಿರುವ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಜತೆಗೆ ರಷ್ಯಾದ ಸ್ಪುಟ್ನಿಕ್-ವಿ ಈಗ ಲಭ್ಯ ಇವೆ. ಮೊಡೆರ್ನಾ ಈ ಸಾಲಿಗೆ ಸೇರ್ಪಡೆಯಾದ ನಾಲ್ಕನೆಯ ಲಸಿಕೆಯಾಗಿದೆ.

'ಈ ಸೇರ್ಪಡೆಯೊಂದಿಗೆ ನಮ್ಮ ಲಸಿಕೆ ಬುಟ್ಟಿಯು ಇನ್ನಷ್ಟು ಸಮೃದ್ಧವಾಗಿದೆ' ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ಹೇಳಿದ್ದಾರೆ.

ಮೊಡೆರ್ನಾ ಲಸಿಕೆಯ ಬಳಕೆಗೆ ಔಷಧ ನಿಯಂತ್ರಕರ ಅನುಮೋದನೆಯು ದೊರೆತಿದೆ. ಆದರೆ, ಆಮದು ಮಾಡಿಕೊಳ್ಳಲು ಅಗತ್ಯವಾದ ಇತರ ಪ್ರಕ್ರಿಯೆಗಳನ್ನು ಪೂರೈಸಬೇಕು ಎಂದು ಪಾಲ್ ತಿಳಿಸಿದ್ದಾರೆ.

ಕೋವ್ಯಾಕ್ಸ್ ಕಾರ್ಯಕ್ರಮದ ಭಾಗವಾಗಿ, ಮೊಡೆರ್ನಾ ಲಸಿಕೆಯ ನಿರ್ದಿಷ್ಟ ಸಂಖ್ಯೆಯ ಡೋಸ್‌ಗಳನ್ನು ಭಾರತಕ್ಕೆ ನೀಡಲು ಅಮೆರಿಕ ಸರ್ಕಾರ ನಿರ್ಧರಿಸಿದೆ.

5ನೇ ಪುಟ ನೋಡಿ

ಲಸಿಕೆ: 2.24 ಕೋಟಿ ಡೋಸ್ ವಿತರಣೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ ಒಂದೇ ದಿನ 2.53 ಲಕ್ಷ ಡೋಸ್ ಕೋವಿಡ್ ಲಸಿಕೆಯನ್ನು ವಿತರಿಸಲಾಗಿದೆ. ಈವರೆಗೆ 2.24 ಕೋಟಿ ಡೋಸ್ ಲಸಿಕೆಯನ್ನು 18 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ನೀಡಲಾಗಿದೆ.ರಾಜ್ಯದಲ್ಲಿ ಕಳೆದ ಜ.16ರಂದು ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಲಾಗಿತ್ತು. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಯ ಬೇಡಿಕೆ ಮತ್ತು ಪೂರೈಕೆ ನಡುವೆ ವ್ಯತ್ಯಯ ಉಂಟಾದ ಕಾರಣ ಅಭಿಯಾನಕ್ಕೆ ಹಿನ್ನಡೆಯಾಗಿತ್ತು. ಕಳೆದ ಎರಡು ವಾರದಿಂದ ಅಭಿಯಾನಕ್ಕೆ ವೇಗ ದೊರೆತಿದ್ದು, ಪ್ರತಿ ನಿತ್ಯ ಎರಡು ಲಕ್ಷಕ್ಕೂ ಅಧಿಕ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ರಾಜ್ಯದಲ್ಲಿ 1.87 ಕೋಟಿ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ 36.82 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

5ನೇ ಪುಟ ನೋಡಿ

ಗರ್ಭಿಣಿಯರಿಗೆ ಲಸಿಕೆ ಮಾರ್ಗಸೂಚಿ

ಗರ್ಭಿಣಿಯರು ಕೋವಿಡ್–19 ಲಸಿಕೆ ಹಾಕಿಸಿಕೊಳ್ಳುವುದರ ಮಹತ್ವ ಮತ್ತು ಅವರ ಆಪ್ತಸಮಾಲೋಚನೆಗಾಗಿ ಮುಂಚೂಣಿ ಕಾರ್ಯಕರ್ತರು ಹಾಗೂ ಲಸಿಕೆ ಹಾಕುವವರಿಗೆ ಮಾರ್ಗಸೂಚಿಯನ್ನು ಕೇಂದ್ರ ಆರೋಗ್ಯ ಸಚಿವಾಲಯವು ಮಂಗಳವಾರ ಪ್ರಕಟಿಸಿದೆ. ಆಪ್ತಸಮಾಲೋಚನೆ ಮತ್ತು ಜಾಗೃತಿಯಿಂದಾಗಿ ಗರ್ಭಿಣಿಯರು ಮಾಹಿತಿಯುಕ್ತ ನಿರ್ಧಾರ ಕೈಗೊಳ್ಳುವುದು ಸಾಧ್ಯವಾಗುತ್ತದೆ ಎಂದು ಹೇಳಲಾಗಿದೆ.

ಕೊರೊನಾ ಸೋಂಕಿಗೆ ಒಳಗಾದ ಶೇ 90ಕ್ಕೂ ಹೆಚ್ಚು ಗರ್ಭಿಣಿಯರು ಆಸ್ಪತ್ರೆಗೆ ದಾಖಲಾಗದೆಯೇ ಗುಣಮುಖರಾಗಿದ್ದಾರೆ. ಕೆಲವು ಪ್ರಕರಣಗಳಲ್ಲಿ ಮಾತ್ರ ಆರೋಗ್ಯ ದಿಢೀರ್ ಹದಗೆಟ್ಟಿದೆ. ಭ್ರೂಣವನ್ನು ಕೂಡ ಬಾಧಿಸಿದ ಉದಾಹರಣೆ ಇದೆ. ಹಾಗಾಗಿ ಗರ್ಭಿಣಿಯರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

5ನೇ ಪುಟ ನೋಡಿ

ಲಸಿಕೆ ಕೊರತೆ ಆಗಿಲ್ಲ: ಸುಧಾಕರ್

ಮೈಸೂರು: 'ರಾಜ್ಯದಲ್ಲಿ ಕೋವಿಡ್ ಲಸಿಕೆಯೇ ಇಲ್ಲ ಎಂಬಂತಹ ಪರಿಸ್ಥಿತಿ ಒಮ್ಮೆಯೂ ನಿರ್ಮಾಣವಾಗಿಲ್ಲ. ರಾಜ್ಯದಲ್ಲಿ ಲಸಿಕೆ ಕೊರತೆಯಿಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಮೈಸೂರಿನಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈಗಲೂ ಪ್ರತಿನಿತ್ಯ 2 ರಿಂದ 3 ಲಕ್ಷ ಡೋಸ್ ಲಸಿಕೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಸದ್ಯ 5 ಲಕ್ಷ ಡೋಸ್ ಲಸಿಕೆ ದಾಸ್ತಾನು ಇದೆ. ಕೇಂದ್ರ ಆರೋಗ್ಯ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ರಾಜೇಶ್ ಭೂಷಣ್ ಜತೆ ಮಾತನಾಡಿದ್ದು, ಬುಧವಾರ ಇನ್ನಷ್ಟು ಲಸಿಕೆ ಕಳುಹಿಸಿಕೊಡುವುದಾಗಿ ಹೇಳಿದ್ದಾರೆ' ಎಂದರು.

ಡಿಎಚ್‌ಒಗೆ ಸೂಚನೆ: ಇದಕ್ಕೂ ಮುನ್ನ ಕೋವಿಡ್ ಸ್ಥಿತಿಗತಿ ಪರಿಶೀಲನೆ ಸಭೆಯಲ್ಲಿ ಪಾಲ್ಗೊಂಡ ಸಚಿವರು, 'ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ನೀವು ಯಾವುದೇ ಮಾಹಿತಿಯನ್ನು ಮಾಧ್ಯಮಗಳಿಗೆ ನೀಡಬೇಡಿ. ಎಲ್ಲವನ್ನೂ ಜಿಲ್ಲಾಧಿಕಾರಿ ಅವರೇ ನೀಡುತ್ತಾರೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್ ಅವರಿಗೆ ಸೂಚಿಸಿದರು.

ಮೈಸೂರಿನಲ್ಲಿ ಸಾರ್ವಜನಿಕರಿಗೆ ಲಸಿಕೆ ನೀಡುವ ಪ್ರಕ್ರಿಯೆಯನ್ನು ನಿಲ್ಲಿಸಲಾಗಿದೆ ಎಂದು ಪ್ರಸಾದ್ ಅವರು ಸೋಮವಾರವಷ್ಟೇ ಪ್ರಕಟಣೆ ನೀಡಿದ್ದರು.



ರಾಜ್ಯಕ್ಕೆ, ಬುಧವಾರ ಮತ್ತೊಂದು ಸುತ್ತಿನ ಲಸಿಕೆ ಹಂಚಿಕೆ ಆಗಲಿದೆ. ಲಸಿಕೆ ಬಂದ ಕೂಡಲೇ ಎಲ್ಲ ಜಿಲ್ಲೆಗಳಿಗೂ ವಿತರಿಸಲಾಗುವುದು
ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ಕೇಂದ್ರ ಗೃಹ ಸಚಿವಾಲಯದಿಂದ ಆದೇಶ

ಡ್ರೋನ್ ದಾಳಿ: ತನಿಖೆ ಹೊಣೆ ಎನ್‌ಐಎಗೆ

ಜಮ್ಮು/ನವದೆಹಲಿ (ಪಿಟಿಐ): ಜಮ್ಮು ವಿಮಾನ ನಿಲ್ದಾಣದಲ್ಲಿನ ವಾಯುಪಡೆ ನೆಲೆಯ ಮೇಲೆ ಬಾಂಬ್ ದಾಳಿ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಿ ಕೇಂದ್ರ ಗೃಹ ಸಚಿವಾಲಯವು ಮಂಗಳವಾರ ಆದೇಶಿಸಿದೆ.

ಪಾಕಿಸ್ತಾನದ ಉಗ್ರ ಸಂಘಟನೆಗಳು ಭಯೋತ್ಪಾದನಾ ದಾಳಿ ನಡೆಸಲು ಇದೇ ಮೊದಲ ಬಾರಿ ಡ್ರೋನ್ ಬಳಸಿವೆ. ಹೀಗಾಗಿ ತನಿಖೆಯನ್ನು ಎನ್‌ಐಎಗೆ ವರ್ಗಾಯಿಸುವ ನಿರ್ಧಾರವನ್ನು ಕೇಂದ್ರ ಗೃಹ ಸಚಿವಾಲಯವು ತೆಗೆದುಕೊಂಡಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಈ ದಾಳಿ ನಡೆಸಿದ ಡ್ರೋನ್‌ಗಳು ಪಾಕಿಸ್ತಾನದಿಂದ ಬಂದಿರಬಹುದು. ಈ ದಾಳಿಯ ಹಿಂದೆ ಲಷ್ಕರ್ ಎ ತಯಬಾ (ಎಲ್‌ಇಟಿ) ಉಗ್ರ ಸಂಘಟನೆ ಇರುವ ಸಾಧ್ಯತೆ ಇದೆ' ಎಂದು ಜಮ್ಮು-ಕಾಶ್ಮೀರ ಪೊಲೀಸ್ ಮಹಾನಿರ್ದೇಶಕ ದಿಲ್‌ಬಾಗ್ ಸಿಂಗ್ ಹೇಳಿದ್ದಾರೆ.

ಜಮ್ಮುವಿನಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ. 'ಡ್ರೋನ್‌ಗಳು ಗಡಿ ಯಾಚೆಯಿಂದ ಬಂದು ಈ ದಾಳಿ ನಡೆಸಿ, ವಾಪಸ್ ಆಗಿರುವ ಸಾಧ್ಯತೆ ಅಧಿಕವಾಗಿದೆ. ಡ್ರೋನ್‌ಗಳು ಬಂದುಹೋದ ಪಥವನ್ನು ಪತ್ತೆ ಮಾಡಲು ಯತ್ನಿಸಲಾಗುತ್ತಿದೆ. ದಾಳಿ ನಡೆದ ಸ್ಥಳದ ಸಮೀಪದಲ್ಲಿ ಇರುವ ಎಲ್ಲಾ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಸೇನಾಠಾಣೆಯ ಆವರಣದ ಮೇಲಿರುವ ಎಲ್ಲಾ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಆದರೆ ಎಲ್ಲಾ ಕ್ಯಾಮೆರಾಗಳು ರಸ್ತೆಯ ಕಡೆ ಮುಖ ಮಾಡಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಆರ್‌ಡಿಎಕ್ಸ್ ಮತ್ತಿತರ ಹಲವು ಕಚ್ಚಾವಸ್ತುಗಳನ್ನು ಮಿಶ್ರಮಾಡಿ ಈ ಬಾಂಬ್‌ಗಳನ್ನು ತಯಾರಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಆದರೆ ಬಾಂಬ್‌ನ ವಿವರ ಪೂರ್ಣವಾಗಿ ದೊರೆತಿಲ್ಲ. ವಿಧಿವಿಜ್ಞಾನ ಪರೀಕ್ಷೆಯ ವರದಿಗಾಗಿ ಕಾಯುತ್ತಿದ್ದೇವೆ. ತನಿಖೆಯಲ್ಲಿ ಎನ್‌ಐಎಗೆ ಪೂರ್ಣ ಸಹಕಾರ ನೀಡುತ್ತೇವೆ' ಎಂದು ದಿಲ್‌ಬಾಗ್ ಸಿಂಗ್ ಮಾಹಿತಿ ನೀಡಿದ್ದಾರೆ.

ಜಮ್ಮು-ಕಾಶ್ಮೀರದ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಎಚ್ಚರಿಕೆ ವಹಿಸಲಾಗಿದೆ. ಸಾರ್ವಜನಿಕರು ಡ್ರೋನ್ ಹಾರಿಸದಂತೆ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಧಾನಿ ಸಭೆ

ಡ್ರೋನ್ ದಾಳಿಯಂತಹ ಸವಾಲುಗಳನ್ನು ಎದುರಿಸುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊವಲ್ ಅವರ ಜತೆ ಮಂಗಳವಾರ ಸಭೆ ನಡೆಸಿದ್ದಾರೆ.

'ಇಂತಹ ದಾಳಿಯನ್ನು ತಡೆಗಟ್ಟಲು ಅಗತ್ಯವಿರುವ ಸಲಕರಣೆಗಳನ್ನು ಭದ್ರತಾ ಪಡೆಗಳಿಗೆ ಒದಗಿಸುವ, ದೇಶದ ಯುವಜನರು ಮತ್ತು ನವೋದ್ಯಮಗಳನ್ನು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರ ಬಗ್ಗೆ ಚರ್ಚೆ ನಡೆದಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಮುಖ್ಯಾಂಶಗಳು

- ದಾಳಿ ನಡೆಸಿರುವ ಡ್ರೋನ್‌ಗಳು ಪಾಕಿಸ್ತಾನದಿಂದ ಬಂದಿರುವ ಶಂಕೆ
- ದಾಳಿಯ ಹಿಂದೆ ಎಲ್‌ಇಟಿ ಸಂಘಟನೆಯ ಕೈವಾಡದ ಶಂಕೆ

ಕೇರಳದ ಗ್ರಾಮಗಳ ಹೆಸರು ಬದಲಾವಣೆ ಇಲ್ಲ: ಶಾಸಕ ಅಶ್ರಫ್

ಮಂಗಳೂರು: 'ಕಾಸರಗೋಡು ಜಿಲ್ಲೆಯ ವಿವಿಧ ಸ್ಥಳಗಳ ಹೆಸರುಗಳನ್ನು ಬದಲಾಯಿಸಲಾಗಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಇದು ಸುಳ್ಳು. ಇಂತಹ ಯಾವುದೇ ಸುತ್ತೋಲೆ ಕೇರಳ ಸರ್ಕಾರ ಹೊರಡಿಸಿಲ್ಲ' ಎಂದು ಮಂಜೇಶ್ವರ ಶಾಸಕ ಎ.ಕೆ.ಎಂ. ಅಶ್ರಫ್ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿರುವ ಅವರು, 'ಕಾಸರಗೋಡು ಮತ್ತು ಮಂಜೇಶ್ವರ ತಾಲ್ಲೂಕಿನಲ್ಲಿ ಕನ್ನಡದ ಹೆಸರು ಹೊಂದಿರುವ ಕೆಲವು ಗ್ರಾಮಗಳ ಹೆಸರುಗಳನ್ನು ಮಲಯಾಳೀಕರಣ ಮಾಡಲು ಸರ್ಕಾರ ಆದೇಶಿಸಿದೆ ಎಂಬ ವಿಚಾರ ಹಬ್ಬಿದೆ. ಇದು ಕಳೆದ ಕೆಲ ದಿನಗಳಿಂದ ವ್ಯಾಪಕ ಚರ್ಚೆಗೆ ಕಾರಣವಾಗಿದೆ' ಎಂದು ತಿಳಿಸಿದ್ದಾರೆ.

5ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

28,40,428	ಒಟ್ಟು ಸೋಂಕಿತರು (28,37,206 ನಿನ್ನೆಯ ವಿವರ)
85,997	ಸಕ್ರಿಯ ಪ್ರಕರಣಗಳು
27,19,479	ಗುಣಮುಖರಾದವರು
34,929	ಒಟ್ಟು ಸಾವು

ದಿನದ ಏರಿಕೆ	
ಹೊಸ ಪ್ರಕರಣ	3,222
ಗುಣಮುಖ	14,724
ಸಾವು	93

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝಣ ಝಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಹಾರಾಷ್ಟ್ರ ಗಡಿ ಉದ್ದಕ್ಕೂ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದಲ್ಲಿ ಕೊರೊನಾ ವೈರಾಣುವಿನ ರೂಪಾಂತರವಾಗಿರುವ ಡೆಲ್ಟಾ ಪ್ಲಸ್ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವುದು ಹಾಗೂ ಸಂಭಾವ್ಯ ಮೂರನೇ ಅಲೆ ಅಲ್ಲಿ ಸದ್ಯದಲ್ಲೇ ಕಾಣಿಸಿಕೊಳ್ಳುವ ಕಾರಣಕ್ಕೆ ಆ ರಾಜ್ಯದಿಂದ ಬರುವ ವ್ಯಕ್ತಿಗಳ ಮೇಲೆ ಕಟ್ಟುನಿಟ್ಟಾಗಿ ಕಣ್ಗಾವಲು ಇಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲೂ ವಿಶೇಷ ಕಣ್ಗಾವಲು ಇಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ಅವರು ಈ ಸಂಬಂಧ ಹೊರಡಿಸಿದ ಆದೇಶದಲ್ಲಿ ತಿಳಿಸಿದ್ದಾರೆ.

ಕ್ರಮಗಳೇನು?

- ವಿಮಾನ, ಬಸ್ಸು, ಟ್ಯಾಕ್ಸಿ ಮತ್ತು ಸ್ವಂತ ವಾಹನಗಳ ಮೂಲಕ ರಾಜ್ಯಕ್ಕೆ ಬರುವ ಪ್ರಯಾಣಿಕರು 72 ಗಂಟೆಗಳ ಹಿಂದೆ ಮಾಡಿಸಿದ ಆರ್‌ಟಿಪಿಸಿಆರ್ ನೆಗೆಟಿವ್ ಪರೀಕ್ಷಾ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರ ಹೊಂದಿರಬೇಕು.
- ವಿಮಾನಯಾನ ಸಂಸ್ಥೆಗಳು 72 ಗಂಟೆಗಳ ಹಿಂದೆ ಮಾಡಿಸಿದ ಆರ್‌ಟಿಪಿಸಿಆರ್ ನೆಗೆಟಿವ್ ಪರೀಕ್ಷಾ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರ ಹೊಂದಿರುವವರಿಗೆ ಮಾತ್ರ ಬೋರ್ಡಿಂಗ್ ಪಾಸ್ ನೀಡಬೇಕು.
- ರೈಲ್ವೆ ಪ್ರಾಧಿಕಾರವು ರೈಲಿನಲ್ಲಿ ಪ್ರಯಾಣಿಸುವ ಎಲ್ಲಾ ಪ್ರಯಾಣಿಕರು ಆರ್‌ಟಿಪಿಸಿಆರ್ ನೆಗೆಟಿವ್ ಪರೀಕ್ಷಾ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಕುರಿತು ಪ್ರಮಾಣ ಪತ್ರ ಹೊಂದಿರುವುದನ್ನು ಖಚಿತಪಡಿಸಬೇಕು.
- ಬಸ್‌ಗಳಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಮೊದಲೇ ಆರ್‌ಟಿಪಿಸಿಆರ್ ನೆಗೆಟಿವ್ ಪರೀಕ್ಷಾ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

3B ಪುಟ ನೋಡಿ

'ಮಾಲ್ ಪುನರಾರಂಭ: ಶೀಘ್ರ ತೀರ್ಮಾನ'

'ಕೆಲವು ಕಟ್ಟುಪಾಡುಗಳನ್ನು ವಿಧಿಸಿ ಮಾಲ್‌ಗಳ ಪುನರಾರಂಭಕ್ಕೆ ಅನುಮತಿ ನೀಡಲು ಶೀಘ್ರವೇ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹೇಳಿದ್ದಾರೆ. ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಮಾಲ್ ಅಸೋಸಿಯೇಷನ್‌ನವರು ಭೇಟಿ ಮಾಡಿ ಪುನರಾರಂಭಕ್ಕೆ ಮನವಿ ಮಾಡಿದ್ದು, ಕೆಲವು ರಿಯಾಯ್ತಿಗಳನ್ನೂ ಕೇಳಿದ್ದಾರೆ ಎಂದರು.

'ಈ ಕುರಿತು ಸಚಿವ ಸಂಪುಟದ ಸಹೋದ್ಯೋಗಿಗಳ ಜತೆ ಚರ್ಚಿಸಿ, ಆದಷ್ಟು ಬೇಗ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ತಿಳಿಸಿದರು.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಮತ್ತು ಸಾವಿನ ಸಂಖ್ಯೆ ಇಳಿಕೆಯಾಗಿರುವುದರಿಂದ ಮಾಲ್, ಚಿತ್ರಮಂದಿರ, ಕ್ಲಬ್, ಪಬ್‌ಗಳಿಗೆ ಇದ್ದ ನಿರ್ಬಂಧಗಳನ್ನು ಜುಲೈ 5 ರ ಬಳಿಕ ಸಡಿಲಿಸುವ ಸಾಧ್ಯತೆ ಇದೆ. ಮೂರನೇ ಅಲೆಯನ್ನು ಗಮನದಲ್ಲಿ ಇಟ್ಟುಕೊಂಡು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಮೂಲಗಳು ಹೇಳಿವೆ.

ನಂದಿನಿ ತುಪ್ಪ, ಹಾಲಿನ ಪುಡಿ ದರ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳಿ ನಿಯಮಿತವು (ಕೆಎಂಎಫ್) ಗ್ರಾಹಕರ ಹಿತ ಗಮನದಲ್ಲಿಟ್ಟುಕೊಂಡು ನಂದಿನಿ ತುಪ್ಪ, ಬೆಣ್ಣೆ ಹಾಗೂ ಹಾಲಿನ ಪುಡಿ ಉತ್ಪನ್ನಗಳ ಮಾರಾಟ ದರವನ್ನು ಇಳಿಕೆ ಮಾಡಿದೆ.

ನಂದಿನಿ ತುಪ್ಪದ ದರವನ್ನು ಪ್ರತಿ ಕೆಜಿಗೆ ₹20 ಕಡಿಮೆ ಮಾಡಲಾಗಿದೆ. ಈ ಮೊದಲು ₹470ಕ್ಕೆ ಮಾರಾಟವಾಗುತ್ತಿದ್ದ ಒಂದು ಕೆಜಿ ತುಪ್ಪವು ಈಗ ₹450ಕ್ಕೆ ಗ್ರಾಹಕರ ಕೈಸೇರಲಿದೆ. ₹440ಕ್ಕೆ ಮಾರಾಟವಾಗುತ್ತಿದ್ದ ಒಂದು ಕೆಜಿ ಬೆಣ್ಣೆಯು ₹420ಕ್ಕೆ ಸಿಗಲಿದೆ. ನಂದಿನಿ ಕೆನೆರಹಿತ ಹಾಲಿನ ಪುಡಿಯ ದರವನ್ನು ₹300ರಿಂದ ₹270ಕ್ಕೆ ತಗ್ಗಿಸಲಾಗಿದೆ.

'ಕೋವಿಡ್ ಸಮಯದಲ್ಲಿ ಕೆಎಂಎಫ್, ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಮೊದಲ ಅಲೆಯ ವೇಳೆ ನಂದಿನಿ ತುಪ್ಪ, ಬೆಣ್ಣೆಯ ಉತ್ಪನ್ನಗಳ ಮಾರಾಟ ದರ ಕಡಿತಗೊಳಿಸಲಾಗಿತ್ತು. ನಂದಿನಿ ಪನ್ನೀರ್ ಜೊತೆ ಚೀಸ್ ಅನ್ನು ಉಚಿತವಾಗಿ ನೀಡಲಾಗಿತ್ತು. ಈಗ ಮತ್ತೊಮ್ಮೆ ದರ ಇಳಿಸಲಾಗಿದೆ. ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ಕೆಎಂಎಫ್ ಪ್ರಕಟಣೆ ತಿಳಿಸಿದೆ.

ಸೆಂಟ್ರಲ್ ವಿಸ್ತಾ: ದೆಹಲಿ ಹೈಕೋರ್ಟ್ ತೀರ್ಪು ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ(ಪಿಟಿಐ): ಕೋವಿಡ್ ಸಾಂಕ್ರಾಮಿಕದಿಂದಾಗಿ, ಸೆಂಟ್ರಲ್ ವಿಸ್ತಾ ನಿರ್ಮಾಣ ಯೋಜನೆ ಸ್ಥಗಿತಗೊಳಿಸುವಂತೆ ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಿರಸ್ಕರಿಸಿರುವ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ.



ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ದಿನೇಶ್ ಮಾಹೇಶ್ವರಿ ಮತ್ತು ಅನಿರುದ್ಧ ಬೋಸ್ ಅವರನ್ನೊಳಗೊಂಡ ಪೀಠ, 'ಅರ್ಜಿದಾರರು ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ರಾಜಧಾನಿಯಲ್ಲಿ ನಡೆಯುತ್ತಿರುವ ಇತರೆ ಯೋಜನೆಗಳ ಕುರಿತು ಅಧ್ಯಯನ ನಡೆಸದೇ, ಕೇವಲ ಸೆಂಟ್ರಲ್ ವಿಸ್ತಾ ಯೋಜನೆಯನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದ ಬಗ್ಗೆ ಹೈಕೋರ್ಟ್ ನೀಡಿರುವ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದೆ.

'ಈ ಪಿಐಎಲ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಇಲ್ಲ. ಇದೊಂದು ಪ್ರಚೋದಿತ ಅರ್ಜಿಯಾಗಿದ್ದು, ಇದರಲ್ಲಿ ವಿಶ್ವಾಸಾರ್ಹ ಮಾಹಿತಿಯ ಕೊರತೆ ಇದೆ' ಎಂದು ಹೈಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯ ಒಪ್ಪಬಹುದಾಗಿದೆ ಎಂದು ನ್ಯಾಯಪೀಠ ಹೇಳಿದೆ.

ಇದೇ ವೇಳೆ ಪಿಐಎಲ್ ಸಲ್ಲಿಸಿರುವ ಅರ್ಜಿದಾರರಿಗೆ ₹1 ಲಕ್ಷ ದಂಡ ವಿಧಿಸಿರುವ ಹೈಕೋರ್ಟ್ ಆದೇಶದಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಪೀಠ ಹೇಳಿದೆ.

ಈ ಅರ್ಜಿಯ ವಿಚಾರಣೆಯ ಸಮಯದಲ್ಲಿ 'ಇದು ನಿಮ್ಮ ನಡವಳಿಕೆಯಾಗಿದ್ದರೆ, ₹1 ಲಕ್ಷ ದಂಡ ವಿಧಿಸಿರುವುದೂ ಕಡಿಮೆಯೇ' ಎಂದು ಹೇಳಿದ ನ್ಯಾಯಪೀಠ, 'ಕೋವಿಡ್ ಮಾರ್ಗಸೂಚಿಗಳನ್ನು ಸಂಪೂರ್ಣ ಅನುಸರಿಸುತ್ತಾ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿದ ನಂತರವೂ, ಈ ಪ್ರಕರಣದ ವಿಚಾರಣೆಯನ್ನು ಮುಂದುವರಿಸಲು ಏಕೆ ಬಯಸಿದ್ದೀರಿ' ಎಂದು ಪ್ರಶ್ನಿಸಿದೆ.

ಹೈಕೋರ್ಟ್‌ಗೆ ಕಾನೂನು ಸೇವಾ ಪ್ರಾಧಿಕಾರದ ವರದಿ

ಸೇವಾ ಸಿಂಧು ಕೇಂದ್ರ: ಕಮಿಷನ್ ಹಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಘೋಷಿಸಿರುವ ₹ 2,000 ಕೋವಿಡ್ ಪರಿಹಾರ ಪಡೆಯುವುದಕ್ಕೆ ಅರ್ಜಿ ಸಲ್ಲಿಸಲು ಬರುವ ಅಸಂಘಟಿತ ವಲಯದ ಕಾರ್ಮಿಕರಿಂದ ರಾಜ್ಯದ ಬಹುತೇಕ ಸೇವಾ ಸಿಂಧು ಕೇಂದ್ರಗಳಲ್ಲಿ 'ಕಮಿಷನ್ ಶುಲ್ಕ'ದ ಹೆಸರಿನಲ್ಲಿ ₹ 150ರಿಂದ ₹ 250ರವರೆಗೂ ವಸೂಲಿ ಮಾಡಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹೈಕೋರ್ಟ್‌ಗೆ ವರದಿ ಸಲ್ಲಿಸಿದೆ.

ಸೇವಾ ಸಿಂಧು ತಂತ್ರಾಂಶದಲ್ಲಿ ನೋಂದಣಿ ಇರಲಿ ಅಥವಾ ಅರ್ಜಿಗಳು ನೋಂದಣಿಗೆ ಬಾಕಿ ಇರಲಿ, ಎಲ್ಲ ಮನೆಗೆಲಸದ ಕಾರ್ಮಿಕರಿಗೂ ಕೋವಿಡ್ ಪರಿಹಾರ ಪಾವತಿಗೆ ಆದೇಶಿಸಬೇಕು ಎಂದು ಕೋರಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಮಂಗಳವಾರ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ನಡೆಯಿತು. ಆಗ ಪ್ರಾಧಿಕಾರವು ಈ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತು.

ವರದಿಯನ್ನು ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ, 'ಈ ವರದಿಯು ಕಾರ್ಮಿಕ ಇಲಾಖೆಯ ಕಣ್ತೆರೆಸುವ ಕೆಲಸ ಮಾಡಬೇಕಿದೆ' ಎಂದು ಹೇಳಿತು.

'ಸೇವಾ ಸಿಂಧು ಕೇಂದ್ರಗಳಲ್ಲಿ ಕಮಿಷನ್ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವ ಕುರಿತು ಪ್ರಾಧಿಕಾರಕ್ಕೆ ಹಲವು ದೂರುಗಳು ಬಂದಿವೆ. ಮೈಸೂರು, ಬೆಳಗಾವಿ, ದಕ್ಷಿಣ ಕನ್ನಡ, ಹಾಸನ, ರಾಮನಗರ, ಬೀದರ್ ಮತ್ತು ಶಿವಮೊಗ್ಗ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳಿಗೆ ಈ ಕುರಿತು ವಿಚಾರಣೆ ನಡೆಸಿ, ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಅವರು ನೀಡಿರುವ ಮಾಹಿತಿ ಆಧರಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ. ಅಸಂಘಟಿತ ವಲಯದ ಕಾರ್ಮಿಕರು ಪರಿಹಾರಕ್ಕೆ ಅರ್ಜಿ ಸಲ್ಲಿಸಲು ನೆರವಾಗುವುದಕ್ಕೆ ಕಾರ್ಮಿಕ ಇಲಾಖೆಯು ಸೂಕ್ತವಾದ ವ್ಯವಸ್ಥೆಯೊಂದನ್ನು ರೂಪಿಸಬೇಕು' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

5ನೇ ಪುಟ ನೋಡಿ

ಬುಧವಾರದ ಉಷ್ಣಾಂಶ
30° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಸಾಧಾರಣ ಮಳೆ ಆಗುವ ಸಾಧ್ಯತೆ

ಮುನ್ಸೂಚನೆ
ಗುರುವಾರ 29° 20°
ಶುಕ್ರವಾರ 28° 20°
ಶನಿವಾರ 29° 20°

ಸೂರ್ಯೋದಯ: 5:56 ಸೂರ್ಯಾಸ್ತ : 6:49 ಚಂದ್ರೋದಯ: ರಾ. 11:00 ಚಂದ್ರಾಸ್ತ: ಬೆ. 10:14
ಮಂಗಳವಾರದ ಹವಾಮಾನ : ಗರಿಷ್ಠ 31° ಕನಿಷ್ಠ 20°

ನಗರದಲ್ಲಿ ಇಂದು


ಭಾಸ್ಕರ್ ರಾವ್

ಪ್ರಿಪೇಯ್ಡ್ ಆಟೊ ಕೌಂಟರ್ ಉದ್ಘಾಟನೆ: ರೈಲ್ವೆ ಎಡಿಜಿಪಿ ಭಾಸ್ಕರ್ ರಾವ್, ಸ್ಥಳ–ಯಶವಂತಪುರ ರೈಲ್ವೆ ನಿಲ್ದಾಣ, ತುಮಕೂರು ರಸ್ತೆ ಕಡೆ, ಬೆಳಿಗ್ಗೆ 11

ಕಾಡುಗೋಡಿ ವೃಕ್ಷೋದ್ಯಾನ ಉದ್ಘಾಟನೆ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅರಣ್ಯ ಸಚಿವ ಅರವಿಂದ ಲಿಂಬಾವಳಿ, ಆಯೋಜನೆ–ಅರಣ್ಯ ಇಲಾಖೆ, ಸ್ಥಳ–ಕಾಡುಗೋಡಿ ಹೋಪ್ ಫಾರಂ, ಬೆಳಿಗ್ಗೆ 11.30

'ರಾಷ್ಟ್ರೀಯ ಶಿಕ್ಷಣ ನೀತಿ: ಕನ್ನಡ ಮತ್ತು ಭಾಷಾ ವಿಷಯಗಳು' ಕುರಿತು ವೆಬಿನಾರ್: ಉದ್ಘಾಟನೆ–ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ, ಆಶಯನುಡಿ–ಬರಗೂರು ರಾಮಚಂದ್ರಪ್ಪ, ಅತಿಥಿ–ಪ್ರೊ.ದೊಡ್ಡರಂಗೇಗೌಡ, ಅಧ್ಯಕ್ಷತೆ–ಪ್ರೊ.ಬಿ.ತಿಮ್ಮೇಗೌಡ, ಸಂವಾದ–ಸಬಿತಾ ಬನ್ನಾಡಿ, ಎಚ್.ಆರ್.ತಿಮ್ಮೇಗೌಡ, ಶೋಭಾ ನಾಯಕ, ವೈ.ಬಿ.ಹಿಮ್ಮಡಿ, ಆಯೋಜನೆ–ಬೆಂಗಳೂರು ನಗರ ವಿಶ್ವವಿದ್ಯಾಲಯ ಕಾಲೇಜು ಕನ್ನಡ ಅಧ್ಯಾಪಕರ ಸಂಘ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)


ಬರಗೂರು ರಾಮಚಂದ್ರಪ್ಪ

ವಿಚಾರ ಕಲರವ ಉಪನ್ಯಾಸ ಮಾಲಿಕೆ: 'ರಂಗಭೂಮಿ–ದೇಶದ ಏಕತೆ' ಕುರಿತು ಉಪನ್ಯಾಸ–ಶ್ರೀನಿವಾಸ ಜಿ.ಕಪ್ಪಣ್ಣ, ಭಾಗವಹಿಸುವವರು–ಕೆ.ಆರ್. ವೇಣುಗೋಪಾಲ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

'ನವ ಪಿತೃಪ್ರಧಾನ: ಲಿಂಗ ಸಮಾನತೆಯ ಪ್ರಶ್ನೆಗಳು' ವಿಚಾರ ಸಂಕಿರಣ: ಭಾಗವಹಿಸುವವರು–ಚಿಂತಕಿ ಎಂ.ಉಷಾ, ಅಧ್ಯಕ್ಷತೆ–ಎ.ಎಸ್.ವಿಜಯಕುಮಾರ್, ಸಂಯೋಜನೆ–ಎಚ್.ಕೃಷ್ಣಮೂರ್ತಿ, ಶಶಿಕಿರಣ್, ಆಯೋಜನೆ–ಕೆಎಲ್‌ಇ ಪದವಿ ಕಾಲೇಜು, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಭರವಸೆ

ಹೂ ಮಾರುವ ವಿದ್ಯಾರ್ಥಿನಿಗೆ ಲ್ಯಾಪ್‌ಟಾಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆ ಆವರಣದ ಆದಿಶಕ್ತಿ ದೇವಸ್ಥಾನದ ಬಳಿ ಹೂವು ಮಾರುತ್ತಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಗೆ ಪಾಲಿಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಲ್ಯಾಪ್‌ಟಾಪ್ ಕೊಡಿಸುವ ಭರವಸೆ ನೀಡಿದ್ದಾರೆ.

16 ವರ್ಷದ ಬನಶಂಕರಿ ಎಂಬ ವಿದ್ಯಾರ್ಥಿನಿ ತನ್ನ ಶಿಕ್ಷಣದೊಂದಿಗೆ ಜೀವನ ನಿರ್ವಹಣೆಗಾಗಿ ಐದು ವರ್ಷಗಳಿಂದ ಹೂವು ಮಾರುತ್ತಿದ್ದಳು. ಈ ವಿಚಾರ ತಿಳಿದ ಆಯುಕ್ತರು ದೇವಸ್ಥಾನದ ಬಳಿಗೆ ತೆರಳಿ, ವಿದ್ಯಾರ್ಥಿನಿಯನ್ನು ಮಾತನಾಡಿಸಿದರು.

ಜೀವನ ನಿರ್ವಹಣೆಗಾಗಿ ಹೂವು ಮಾರಾಟ ಮಾಡುತ್ತಿದ್ದೇನೆ ಹಾಗೂ ಜೊತೆಯಲ್ಲೇ ಶಿಕ್ಷಣ ಮುಂದುವರಿಸುತ್ತಿದ್ದೇನೆ. ಬಡ ಕುಟುಂಬ ಆಗಿರುವುದರಿಂದ ಆನ್‌ಲೈನ್ ಶಿಕ್ಷಣಕ್ಕೆ ಆರ್ಥಿಕ ಸಮಸ್ಯೆ ಇರುವುದಾಗಿ ವಿದ್ಯಾರ್ಥಿನಿ ಅಳಲು ತೋಡಿಕೊಂಡಿದ್ದಳು.

ವಿದ್ಯಾರ್ಥಿನಿಯ ಸಂಕಷ್ಟ ಆಲಿಸಿದ ಮುಖ್ಯ ಆಯುಕ್ತರು, ಆನ್‌ಲೈನ್ ಶಿಕ್ಷಣಕ್ಕೆ ಅನುಕೂಲವಾಗಲು ಲ್ಯಾಪ್‌ಟಾಪ್ ಕೊಡಿಸುವ ಹಾಗೂ ಶಿಕ್ಷಣಕ್ಕೆ ಬೇಕಾದ ಅಗತ್ಯ ಸಹಾಯ ಮಾಡುವ ಭರವಸೆ ನೀಡಿದರು.


ವಿದ್ಯಾರ್ಥಿನಿಯ ಸಮಸ್ಯೆ ಆಲಿಸಿದ ಗೌರವ್ ಗುಪ್ತ

ಈ ಕುರಿತು ಮಾತನಾಡಿದ ವಿದ್ಯಾರ್ಥಿನಿ ಬನಶಂಕರಿ,'ತಂದೆ ಮಗ್ಗ ನೇಯುವ ಕೆಲಸ ಮಾಡುತ್ತಿದ್ದಾರೆ. ತಾಯಿ ನನ್ನ ಕೆಲಸಕ್ಕೆ ಸಹಾಯ ಮಾಡುತ್ತಿದ್ದು, ಮಾರುಕಟ್ಟೆಯಿಂದ ಹೂವು ತಂದು ಕೊಡುತ್ತಾರೆ. ಜುಲೈ 19ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭವಾಗಲಿವೆ. ಮಧ್ಯಾಹ್ನದವರೆಗೆ ಹೂವು ಮಾರಾಟ ಮಾಡಿ, ನಂತರ ಪರೀಕ್ಷೆಗೆ ತಯಾರಾಗುತ್ತಿದ್ದೇನೆ. ಮೊಬೈಲ್‌ನಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಸಮಸ್ಯೆಯಾಗಿತ್ತು. ಆಯುಕ್ತರು ಲ್ಯಾಪ್‌ಟಾಪ್ ಕೊಡಿಸುವುದಾಗಿ ತಿಳಿಸಿದ್ದಾರೆ. ಅವರಿಗೆ ಧನ್ಯವಾದ' ಎಂದು ಸಂತಸ ವ್ಯಕ್ತಪಡಿಸಿದಳು.

'ಈ ಉತ್ತಮ ಕಾರ್ಯ ಮಾಡಿರುವ ಪಾಲಿಕೆ ಆಯುಕ್ತರಿಗೆ ಧನ್ಯವಾದಗಳು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ತಮ್ಮ ಫೇಸ್‌ಬುಕ್ ಪುಟದಲ್ಲಿ ಬರೆದುಕೊಂಡಿದ್ದಾರೆ.

ಆಕರ್ಷ್ ಶ್ರಾಫ್‌ಗೆ 'ಡಯಾನ' ಗೌರವ


ಆಕರ್ಷ್ ಶ್ರಾಫ್

ಬೆಂಗಳೂರು: ಮಾನವೀಯ ಕಾರ್ಯಗಳ ಮೂಲಕ ಸಮಾಜಕ್ಕೆ ಮಾದರಿಯಾಗಿರುವ ಬೆಂಗಳೂರಿನ ಆಕರ್ಷ್ ಶ್ರಾಫ್ ಅವರಿಗೆ 2021ನೇ ಸಾಲಿನ 'ಡಯಾನ' ಗೌರವ ಒಲಿದಿದೆ.

ವೇಲ್ಸ್‌ನ ರಾಣಿ ಡಯಾನ ಅವರ ನೆನಪಾರ್ಥಕವಾಗಿ ಈ ಪುರಸ್ಕಾರ ನೀಡಲಾಗುತ್ತದೆ.

ಎಸ್.ಪಿ.ಎ.ಆರ್.ಕೆ. ಸ್ವಯಂ ಸೇವಾ ಸಂಸ್ಥೆಯ (ಎನ್‌ಜಿಒ) ಸಹ ಸ್ಥಾಪಕರಾಗಿರುವ 20ರ ಹರೆಯದ ಆಕರ್ಷ್, ಸಮಾಜಮುಖಿ ಕಾರ್ಯಗಳ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.

ಇವರ ತಂಡವು ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಬಡ ವಿದ್ಯಾರ್ಥಿಗಳಿಗೆ ನೆರವಿನ ಹಸ್ತ ಚಾಚಿದೆ. ಅವರು ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳಲು ಅಗತ್ಯವಿರುವ ವ್ಯವಸ್ಥೆಯನ್ನೂ ಮಾಡಿದೆ. ಮೊದಲ ಅಲೆಯ ವೇಳೆ ಆಕರ್ಷ್ ಹಾಗೂ ಅವರ ತಂಡದ ಸದಸ್ಯರು 11 ಸಾವಿರ ಮಂದಿಗೆ ಪಡಿತರ ಕಿಟ್ ವಿತರಿಸಿದ್ದರು.

ಸಂಕ್ಷಿಪ್ತ ಸುದ್ದಿ

ಸುತ್ತೂರು ಶ್ರೀಗಳ ಜತೆ ಡಿಸಿಎಂ ಚರ್ಚೆ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುತ್ತಿರುವ ಕಾರಣ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಜಯನಗರದಲ್ಲಿರುವ ಮಠದ ಶಾಖಾ ಕೇಂದ್ರದಲ್ಲಿ ಅಶ್ವತ್ಥನಾರಾಯಣ ಅವರು ಶಿಕ್ಷಣ ನೀತಿಯಲ್ಲಿ ಅಡಕವಾಗಿರುವ ಅಂಶಗಳ ಬಗ್ಗೆ ಸ್ವಾಮೀಜಿಯವರಿಗೆ ವಿವರಿಸಿದರು.

ನೀತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸ್ವಾಮೀಜಿಯವರು, ಈ ವರ್ಷದಿಂದಲೇ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ನೂತನ ಶಿಕ್ಷಣ ನೀತಿಯನ್ನು ಜಾರಿ ಮಾಡುತ್ತೇವೆ' ಎಂದೂ ಹೇಳಿದರು.

'ಎನ್‌ಇಪಿ: ಶಿಕ್ಷಣ ವ್ಯವಸ್ಥೆಯ ಪುನರುಜ್ಜೀವನ'

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಶಿಕ್ಷಣ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುತ್ತದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ರಾಜಾಜಿನಗರ ಶಿಕ್ಷಣ ಸಂಸ್ಥೆಯ ಅರಬಿಂದೊ ಪದವಿ ಕಾಲೇಜು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಕರ ವಾಣಿಜ್ಯ ಮತ್ತು ನಿರ್ವಹಣಾ ಮಂಡಳಿ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ 'ಎನ್‌ಇಪಿ-ಶಿಕ್ಷಣದ ಬದಲಾದ ಸನ್ನಿವೇಶದಲ್ಲಿ ಪಾಲುದಾರರ ಜವಾಬ್ದಾರಿಗಳು' ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

ಸಂಸ್ಥೆಯ ಕಾರ್ಯದರ್ಶಿ ಟಿ.ಎನ್. ರವಿಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು.

ನಿರುದ್ಯೋಗಿಗಳಿಗೆ ತರಬೇತಿ

ಬೆಂಗಳೂರು: ನಗರದ ಉನ್ನತಿ ಸೆಂಟರ್ 18ರಿಂದ 25 ವರ್ಷದವರೆಗಿನ ನಿರುದ್ಯೋಗಿಗಳಿಗೆ 35 ದಿನಗಳ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ತರಬೇತಿಗೆ ಯಾವುದೇ ವಿದ್ಯಾರ್ಹತೆ ನಿಗದಿಪಡಿಸಿಲ್ಲ. ಕನಿಷ್ಠ ಶುಲ್ಕ ಇರಲಿದ್ದು, ಜು.1ರಿಂದ ಪ್ರವೇಶ ಪ್ರಾರಂಭವಾಗಲಿದೆ. ಸ್ಪೋಕನ್ ಇಂಗ್ಲಿಷ್, ಬೇಸಿಕ್ ಕಂಪ್ಯೂಟರ್ ಸೇರಿದಂತೆ ಕೌಶಲ ವೃದ್ಧಿಗೆ ಸಂಬಂಧಿಸಿದ ತರಬೇತಿಗಳನ್ನು ನೀಡಲಾಗುತ್ತದೆ. ವಿಳಾಸ: ಉನ್ನತಿ ಸೆಂಟರ್, ನಂ.1, ದೇವಸ್ಥಾನದ ರಸ್ತೆ, ಎನ್‌ಜಿಇಎಫ್ ಬಡಾವಣೆ, (ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಬಳಿ), ಸದಾನಂದನಗರ, ಬೆಂಗಳೂರು
ಸಂಪರ್ಕಕ್ಕೆ: 080 25384642 ಅಥವಾ 9900146423

ಬಿಬಿಎಂಪಿ ವ್ಯಾಪ್ತಿಯ 47 ಕಂಟೈನ್‌ಮೆಂಟ್ ಪ್ರದೇಶಗಳು ಈಗಲೂ ಸಕ್ರಿಯ

24 ವಾರ್ಡ್‌ಗಳಲ್ಲಿ 100ಕ್ಕೂ ಅಧಿಕ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 24 ವಾರ್ಡ್‌ಗಳಲ್ಲಿ ಈಗಲೂ 100ಕ್ಕೂ ಅಧಿಕ ಕೋವಿಡ್ ಸಕ್ರಿಯ ಪ್ರಕರಣಗಳಿವೆ. ಮಹದೇವಪುರ ವಲಯದಲ್ಲಿ ಸೋಂಕು ಹರಡುವಿಕೆ ಉಳಿದೆಲ್ಲ ವಲಯಗಳಿಗಿಂತ ಜಾಸ್ತಿ ಇದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ಹರಡುವಿಕೆ ತಡೆಯಲು ಗುರುತಿಸಿರುವ ಮೈಕ್ರೊ ಕಂಟೈನ್‌ಮೆಂಟ್ ಪ್ರದೇಶಗಳಲ್ಲಿ ಒಟ್ಟು 47 ಕಂಟೈನ್‌ಮೆಂಟ್ ಪ್ರದೇಶಗಳು ಈಗಲೂ ಸಕ್ರಿಯವಾಗಿವೆ. ಅವುಗಳಲ್ಲಿ 20 ಮೈಕ್ರೊ ಕಂಟೈನ್‌ಮೆಂಟ್ ಪ್ರದೇಶಗಳು ಮಹದೇವಪುರ ವಲಯವೊಂದರಲ್ಲೇ ಇವೆ.

ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಒಟ್ಟು 573 ಕಡೆ ಮೈಕ್ರೋ ಕಂಟೈನ್‌ಮೆಂಟ್ ಪ್ರದೇಶಗಳನ್ನು ಗುರುತಿಸಲಾಗಿತ್ತು. ಅವುಗಳಲ್ಲಿ 526 ಕಂಟೈನ್‌ಮೆಂಟ್ ಪ್ರದೇಶಗಳಲ್ಲಿ ನಿರ್ಬಂಧಗಳನ್ನು ತೆರವುಗೊಳಿಸಲಾಗಿದ್ದು, ಅವು ಸಹಜ ಸ್ಥಿತಿಗೆ ಮರಳಿವೆ. 100ಕ್ಕಿಂತ ಜಾಸ್ತಿ ಕೋವಿಡ್ ಸಕ್ರಿಯ ಪ್ರಕರಣಗಳು ವರದಿಯಾದ ವಾರ್ಡ್‌ಗಳ ಸಂಖ್ಯೆಯೂ ಮಹದೇವಪುರ ವಲಯದಲ್ಲೇ ಹೆಚ್ಚು ಇದೆ.

'ಸೋಂಕು ಪತ್ತೆ ಪ್ರಮಾಣ ಹೆಚ್ಚು ಇರುವ ವಾರ್ಡ್‌ಗಳಲ್ಲಿ ಮೈಕ್ರೋ ಪ್ಲಾನ್ ರೂಪಿಸುತ್ತಿದ್ದೇವೆ. ಇಂತಹ ಕಡೆ ಕಂಟೈನ್‌ಮೆಂಟ್ ಪ್ರದೇಶಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಲಭ್ಯ ಮಾಹಿತಿ ಪ್ರಕಾರ, ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಕೋವಿಡ್ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಇಲ್ಲಿ ಕೋವಿಡ್ ಪರೀಕ್ಷೆ ಪ್ರಮಾಣವೂ ಜಾಸ್ತಿ ಇರುವುದೂ ಇದಕ್ಕೆ ಕಾರಣವಿರಬಹುದು. ಪರವೂರುಗಳಿಗೆ ಪ್ರಯಾಣ ಬೆಳೆಸಿ ಮರಳಿದವರ ಸಂಖ್ಯೆಯೂ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಹೆಚ್ಚು ಇದೆ. ಇದು ಕೂಡಾ ಸೋಂಕು ಹೆಚ್ಚಳಕ್ಕೆ ಕಾರಣ ಇರಬಹುದು. ಅಕ್ಕಪಕ್ಕದ ಫ್ಲ್ಯಾಟ್‌ಗಳ ನಿವಾಸಿಗಳು ಸಂಜೆ ಹೊತ್ತಿನಲ್ಲಿ ಒಂದೆಡೆ ಸೇರಿ ಹರಟೆ ಹೊಡೆಯುತ್ತಾರೆ ಎಂಬ ದೂರುಗಳು ಇವೆ. ಇದನ್ನು ನಿಯಂತ್ರಿಸುವಂತೆ ಹಾಗೂ ಪರಸ್ಪರ ಅಂತರ ಕಾಪಾಡಲು ಕ್ರಮ ಕೈಗೊಳ್ಳುವಂತೆ ಅಪಾರ್ಟ್‌ಮೆಂಟ್ ಸಮುಚ್ಚಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಟನೆಗಳಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಕೋವಿಡ್: ಗರಿಷ್ಠ ಸಂಖ್ಯೆಯಲ್ಲಿ ಪ್ರಕರಣಗಳಿರುವ ವಾರ್ಡ್‌ಗಳು
ಶಾಂತಲಾನಗರ
ಬೆಳ್ಳಂದೂರು
ಹೊರಮಾವು
ರಾಮಮೂರ್ತಿನಗರ
ಹಗದೂರು
ವರ್ತೂರು
ಹೂಡಿ
ಕಾಡುಗೋಡಿ
ಆರ್.ಆರ್.ನಗರ
ಅರಕೆರೆ

2ನೇ ಅಲೆ: ಮೈಕ್ರೊ ಕಂಟೈನ್‌ಮೆಂಟ್ ಪ್ರದೇಶಗಳು

ವಲಯ	ಒಟ್ಟು ಸಂಖ್ಯೆ	ಕೈ ಬಿಟ್ಟವು	ಸಕ್ರಿಯ ವಾಗಿರುವವು
ಮಹದೇವಪುರ	119	99	20
ಯಲಹಂಕ	74	65	9
ಬೊಮ್ಮನಹಳ್ಳಿ	112	105	7
ದಕ್ಷಿಣ	93	88	5
ಪೂರ್ವ	113	110	3
ಆರ್.ಆರ್.ನಗರ	14	12	2
ಪಶ್ಚಿಮ	30	29	1
ದಾಸರಹಳ್ಳಿ	18	18	0

ನಗರದ ಕೋವಿಡ್ ಅಂಕಿ–ಅಂಶ

- 12,12,746 ▲ ಒಟ್ಟು ಪ್ರಕರಣಗಳು (12,11,993 ನಿನ್ನೆಯ ವಿವರ)
- 52,445 ▼ ಸಕ್ರಿಯ ಪ್ರಕರಣಗಳು
- 11,44,685 ▲ ಗುಣಮುಖರಾದವರು
- 15,615 ▲ ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	753	▲
ಗುಣಮುಖ	10,722	▲
ಸಾವು	16	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್


ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ		ಭಾರತ	
ಒಟ್ಟು ಪ್ರಕರಣ	18.23 ಕೋಟಿ	▲	3.03 ಕೋಟಿ	
ಸಕ್ರಿಯ ಪ್ರಕರಣ	1.15 ಕೋಟಿ		5.31 ಲಕ್ಷ	▼
ಗುಣಮುಖ	16.69 ಕೋಟಿ	▲	2.94 ಕೋಟಿ	▲
ಸಾವು	39.49 ಲಕ್ಷ	▲	3.98 ಲಕ್ಷ	▲

ದಿನದ ಮಾಹಿತಿ

	ವಿಶ್ವ		ಭಾರತ	
ಹೊಸ ಪ್ರಕರಣ	3.17 ಲಕ್ಷ	▲	45,641	▲
ಗುಣಮುಖ	3.58 ಲಕ್ಷ	▲	60,258	▲
ಸಾವು	6,291	▼	816	▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)



ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)



(* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

- 1.21 ಲಕ್ಷ ಮಹಾರಾಷ್ಟ್ರ
- 24,971 ▲ ದೆಹಲಿ
- 32,506 ▲ ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

- 60.51 ಮಹಾರಾಷ್ಟ್ರ ▲
- 29.10 ಕೇರಳ ▲
- 24.75 ತಮಿಳುನಾಡು ▲

ಭಾರತದಲ್ಲಿ ಅಮೆರಿಕದ ಹಂಗಾಮಿ ರಾಯಭಾರಿ ಕಶ್ಯಪ್

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅತುಲ್ ಕಶ್ಯಪ್ ಅವರನ್ನು ಭಾರತದಲ್ಲಿನ ಅಮೆರಿಕದ ಹಂಗಾಮಿ ರಾಯಭಾರಿಯಾಗಿ ನೇಮಕ ಮಾಡಲಾಗಿದೆ.

ಕಶ್ಯಪ್ ಅವರ ನೇಮಕವು ಭಾರತ ಮತ್ತು ಅಮೆರಿಕ ನಡುವಣ ಬಾಂಧವ್ಯ ವೃದ್ಧಿ ಹಾಗೂ ಕೋವಿಡ್ ಸಂದರ್ಭದಲ್ಲಿ ವಿಶ್ವದ ಸವಾಲು ಎದುರಿಸಲು ಸಹಕಾರಿಯಾಗಲಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ.

ಅಮೆರಿಕ ವಿದೇಶಾಂಗ ಸೇವೆ ಇಲಾಖೆಯ ಹಿರಿಯ ಅಧಿಕಾರಿಯಾಗಿರುವ 50 ವರ್ಷದ ಕಶ್ಯಪ್ ಅವರು ನವದೆಹಲಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ರಾಯಭಾರಿಯಾಗಿದ್ದ ಡೇನಿಯಲ್ ಸ್ಮಿತ್ ಅವರ ನಿವೃತ್ತಿಯಿಂದಾಗಿ ಈ ನೇಮಕವಾಗಿದೆ.

ತೃತೀಯ ಲಿಂಗಿಗಳಿಗೆ ಕೋವಿಡ್ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ಹಳೆ ವಿಮಾನ ನಿಲ್ದಾಣ ರಸ್ತೆಯ ಆಸ್ಪತ್ರೆಯಲ್ಲಿ ತೃತೀಯ ಲಿಂಗಿಗಳಿಗೆ ಹಮ್ಮಿಕೊಂಡಿದ್ದ ಕೋವಿಡ್ ಲಸಿಕಾ ಅಭಿಯಾನಕ್ಕೆ ಮಂಗಳವಾರ ಚಾಲನೆ ದೊರೆಯಿತು.

ಪ್ರತ್ಯೇಕ ಕೌಂಟರ್‌ಗಳನ್ನು ನಿರ್ಮಿಸಿ, 'ಸ್ಪುಟ್ನಿಕ್ ವಿ', 'ಕೋವ್ಯಾಕ್ಸಿನ್' ಹಾಗೂ 'ಕೋವಿಶೀಲ್ಡ್' ಲಸಿಕೆಯನ್ನು ವಿತರಿಸಲಾಯಿತು. 'ಸ್ಪುಟ್ನಿಕ್ ವಿ' ಲಸಿಕೆಯ ಮೊದಲ ಡೋಸ್ ಅನ್ನು ತೃತೀಯ ಲಿಂಗಿ ಆಲಿಯಾ ಖಾನ್ ಪಡೆದುಕೊಂಡರು. ಅಭಿಯಾನದ ಮೊದಲ ದಿನ 155 ತೃತೀಯ ಲಿಂಗಿಗಳಿಗೆ ಲಸಿಕೆ ನೀಡಲಾಗಿದೆ. ಜು.3ರವರೆಗೂ ಈ ಅಭಿಯಾನ ನಡೆಯಲಿದೆ.



ತೃತೀಯ ಲಿಂಗಿಗಳು ಲಸಿಕೆ ಪಡೆದುಕೊಂಡರು

ಜನಸಾಮಾನ್ಯರಿಗೆ ಸಹ ಮಂಗಳವಾರದಿಂದ 'ಸ್ಪುಟ್ನಿಕ್ ವಿ' ಲಸಿಕೆ ನೀಡಲು ಪ್ರಾರಂಭಿಸಲಾಗಿದೆ. ಒಂದು ಡೋಸ್ ಲಸಿಕೆಗೆ ಆಸ್ಪತ್ರೆ ₹ 1,145 ನಿಗದಿಪಡಿಸಿದೆ.

ಲಾಕಡೌನ್ ಇನ್ನಷ್ಟು ಸಡಿಲ: ಬಿಬಿಎಂಪಿ ಚಿಂತನೆ

ಫುಡ್‌ಕೋರ್ಟ್ ವಿಳಂಬ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ತೆರವಿನ ಮುಂದಿನ ಹಂತದಲ್ಲಿ ಮಾಲ್‌ಗಳಲ್ಲಿನ ಮಳಿಗೆಗಳು ವಹಿವಾಟು ನಡೆಸುವುದಕ್ಕೆ ಅನುಮತಿ ನೀಡಲು ಬಿಬಿಎಂಪಿ ಚಿಂತನೆ ನಡೆಸಿದೆ. ಆದರೆ, ಮಾಲ್‌ಗಳಲ್ಲಿರುವ ಫುಡ್ ಕೋರ್ಟ್‌ಗಳಲ್ಲಿ ಜನಜಂಗುಳಿ ಉಂಟಾಗುವ ಸಾಧ್ಯತೆ ಇರುವುದರಿಂದ ಅವುಗಳ ಮೇಲಿನ ನಿರ್ಬಂಧ ಮುಂದುವರಿಸಲು ಮುಂದಾಗಿದೆ.

'ಮಾಲ್‌ಗಳನ್ನು ತೆರೆಯಲು ಅನುಮತಿ ನೀಡಬಹುದು. ಆದರೆ, ಅಲ್ಲಿಗೆ ಬರುವ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕಾಗುತ್ತದೆ ಹಾಗೂ ಅಂತರ ಕಾಪಾಡಬೇಕಾಗುತ್ತದೆ. ಕಳೆದ ವರ್ಷ ಲಾಕ್‌ಡೌನ್ ಸಡಿಲಗೊಳಿಸುವಾಗ ಮಾಲ್‌ಗಳ ಮೇಲಿನ ನಿರ್ಬಂಧ ತೆರವುಗೊಳಿಸಿದ ಬಳಿಕವೂ ಫುಡ್ ಕೋರ್ಟ್‌ಗಳು ಹಾಗೂ ತಿನಿಸಿನ ಮಳಿಗೆಗಳಿಗೆ ಹಂತ ಹಂತವಾಗಿ ಅನುಮತಿ ನೀಡಲಾಯಿತು. ಈ ಬಾರಿಯೂ ಫುಡ್‌ಕೋರ್ಟ್‌ಗಳಲ್ಲಿ ಜನಜಂಗುಳಿ ಸೇರುವುದನ್ನು ತಡೆಯುವ ಬಗ್ಗೆ ಹೆಚ್ಚಿನ ಕಳಜಿ ವಹಿಸಬೇಕಾಗುತ್ತದೆ. ಊಟ ತಿನಿಸು ಟೀ ಕಾಫಿ ಹಂಚಿಕೊಳ್ಳುವುದಕ್ಕೆ ಇದು ಸಮಯವಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಕೊರೊನಾದ ರೂಪಾಂತರಿ ತಳಿಯಾದ ಡೆಲ್ಟಾ ವೈರಾಣು ವೇಗವಾಗಿ ಹರಡುತ್ತದೆ. ಭಾರತದಲ್ಲಿ ಗುರುತಿಸಲಾದ ಈ ತಳಿಯ ವೈರಾಣು ಬೇರೆ ರಾಷ್ಟ್ರಗಳಿಗೂ ಹರಡಿ ಹಾನಿ ಉಂಟು ಮಾಡುತ್ತಿದೆ. ಆಸ್ಟ್ರೇಲಿಯಾ, ತೈವಾನ್, ಇಸ್ರೇಲ್‌ನಂತಹ ದೇಶಗಳಲ್ಲೂ ಸಮಸ್ಯೆ ಉಲ್ಬಣ ಆಗುತ್ತಿದೆ. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಏಪ್ರಿಲ್ ತಿಂಗಳಿನಲ್ಲಿ ಸೋಂಕು ಇಷ್ಟು ವೇಗವಾಗಿ ಹರಡುತ್ತದೆ ಎಂದು ಯಾರೂ ಭಾವಿಸಿರಲಿಲ್ಲ. ಇದರ ಹರಡುವಿಕೆ ತಡೆಯಲು ಸಿದ್ಧತೆ ಮಾಡಿಕೊಳ್ಳುವುದಕ್ಕೂ ಸಾಧ್ಯವಾಗದಷ್ಟು ವೇಗವಾಗಿ ಸೋಂಕು ಹರಡಿತ್ತು. ಹಾಗಾಗಿ ಲಾಕ್‌ಡೌನ್ ಅನ್ನು ಸಂಪೂರ್ಣ ತೆರವುಗೊಳಿಸುವ ಮುನ್ನ ಮುನ್ನೆಚ್ಚರಿಕೆ ವಹಿಸುವ ಅಗತ್ಯ ಇದೆ' ಎಂದು ಅಭಿಪ್ರಾಯಪಟ್ಟರು.

'ಹೊರರಾಜ್ಯಗಳಿಂದ ನಗರಕ್ಕೆ ಬರುವ ಪ್ರಯಾಣಿಕರ ಮೇಲೆ ಹೇಗೆ ನಿಗಾ ಇಡಲಾಗುತ್ತಿದೆ ಎಂಬುದನ್ನು ನಾನೇ ಖುದ್ದಾಗಿ ಪರಿಶೀಲನೆ ನಡೆಸುತ್ತೇನೆ. ಅಧಿಕಾರಿಗಳಿಗೂ ಈ ಬಗ್ಗೆ ಸೂಚನೆ ನೀಡುತ್ತೇನೆ' ಎಂದು ತಿಳಿಸಿದರು.

'10 ದಿನಗಳಲ್ಲಿ ಎಲ್ಲ ಕಾಲೇಜು ವಿದ್ಯಾರ್ಥಿಗಳಿಗೂ ಲಸಿಕೆ'

ಬೆಂಗಳೂರು: ಮುಂದಿನ 10 ದಿನಗಳಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲ ಕಾಲೇಜು ವಿದ್ಯಾರ್ಥಿಗಳಿಗೂ ಕೋವಿಡ್ ಲಸಿಕೆ ನೀಡಲಾಗುವುದು ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ, ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ರಾಜ್ಯದಲ್ಲಿನ ಆಮ್ಲಜನಕ ವ್ಯವಸ್ಥೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆ ಹಾಕಿಸುವ ಸಂಬಂಧ ಆರೋಗ್ಯ, ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ನಂತರ ಸುದ್ದಿಗಾರರಿಗೆ ತಿಳಿಸಿದರು.

ಸೋಮವಾರ 94 ಸಾವಿರ ವಿದ್ಯಾರ್ಥಿಗಳಿಗೆ ಲಸಿಕೆ ಕೊಡಲಾಯಿತು. ರಾಜ್ಯದೆಲ್ಲೆಡೆ ಆಯಾ ಕಾಲೇಜುಗಳ ಪ್ರಾಂಶುಪಾಲರಿಗೆ ಜವಾಬ್ದಾರಿ ವಹಿಸಲಾಗಿತ್ತು ಎಂದರು.

ಹೆರಿಗೆ ಭತ್ಯೆ ₹10 ಸಾವಿರ, ವೈದ್ಯಕೀಯ ನೆರವು ₹25 ಸಾವಿರಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾರ್ಮಿಕ ಕಲ್ಯಾಣ ಮಂಡಳಿಯು ಸಂಘಟಿತ ಕಾರ್ಮಿಕರ ವಿವಿಧ ಕಲ್ಯಾಣ ಯೋಜನೆಗಳ ಧನ ಸಹಾಯದ ಮೊತ್ತವನ್ನು ಪರಿಷ್ಕರಿಸಿ ಆದೇಶ ಹೊರಡಿಸಿದ್ದು, ಇದೇ ಮೊದಲ ಬಾರಿಗೆ ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ₹10 ಸಾವಿರ ನೀಡಲು ನಿರ್ಧರಿಸಲಾಗಿದೆ.

ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಕಲ್ಯಾಣ ಯೋಜನೆಯ ಸೌಲಭ್ಯಗಳ ಸಹಾಯಧನವನ್ನು ಹೆಚ್ಚಿಸುವಂತೆ ಕಾರ್ಮಿಕ ಸಂಘಟನೆಗಳು ಮತ್ತು ಕಾರ್ಮಿಕ ಪ್ರತಿನಿಧಿಗಳು ಸಭೆಯಲ್ಲಿ ಪ್ರಸ್ತಾವನೆ ಸಲ್ಲಿಸಿದ್ದರು.

ಪರಿಷ್ಕೃತ ಸಹಾಯಧನ: ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ ₹15,000 ದಿಂದ ₹21,000, ಕಾರ್ಮಿಕರಿಗೆ ವೈದ್ಯಕೀಯ ನೆರವು ₹10,000 ದಿಂದ ₹25,000, ಕಾರ್ಮಿಕರಿಗೆ ಅಪಘಾತ ಧನ ಸಹಾಯ ₹3,000 ದಿಂದ ₹10,000, ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ ₹5,000 ದಿಂದ ₹10,000 ಹೆಚ್ಚಿಸಲಾಗಿದೆ.

ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗಳಿಗೆ ಧನ ಸಹಾಯ ₹30 ಸಾವಿರ ದಿಂದ ₹1ಲಕ್ಷ, ವಾರ್ಷಿಕ ಕ್ರೀಡಾಕೂಟಕ್ಕೆ ಧನ ಸಹಾಯ ₹50 ಸಾವಿರದಿಂದ ₹ 1 ಲಕ್ಷ, ಸಂಘಟಿತ ಮಹಿಳಾ ಕಾರ್ಮಿಕರಿಗೆ ಮೊದಲ ಎರಡು ಮಕ್ಕಳಿಗೆ ಹೆರಿಗೆ ಭತ್ಯೆ ₹10 ಸಾವಿರ ನೀಡಲಾಗುವುದು. ಪರಿಷ್ಕರಿಸಿದ ಮೊತ್ತ ಮತ್ತು ಹೊಸದಾಗಿ ಅನುಷ್ಠಾನಗೊಳಿಸಿದ ಯೋಜನೆ ವೆಚ್ಚವನ್ನು ಮಂಡಳಿಯಲ್ಲಿ ಕಾರ್ಮಿಕರಿಂದ ಮತ್ತು ಸಂಸ್ಥೆ/ಕಾರ್ಖಾನೆ/ಮಾಲೀಕರಿಂದ ಸಂಗ್ರಹವಾಗಿರುವ ಮೊತ್ತದಲ್ಲಿ 20:40 ಅನುಪಾತದಲ್ಲಿ ಭರಿಸಲಾಗುವುದು ಎಂದು ಆದೇಶ ತಿಳಿಸಿದೆ.

ಸಿ.ಡಿ. ಪ್ರಕರಣ: ಎಸ್ಐಟಿ ಮುಖ್ಯಸ್ಥ ರಜೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸೇರಿದ್ದು ಎನ್ನಲಾದ ಸಿ.ಡಿ. ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ಮುಖ್ಯಸ್ಥ ಸೌಮೇಂದು ಮುಖರ್ಜಿ ಅವರ ರಜೆ ಅವಧಿಯನ್ನು ಮತ್ತೊಂದು ತಿಂಗಳು ವಿಸ್ತರಿಸಲಾಗಿದೆ.

ನಗರದ ಹೆಚ್ಚುವರಿ ಪೊಲೀಸ್ ಕಮಿಷನರ್ ಸಹ ಆಗಿರುವ ಸೌಮೇಂದು, ಕಬ್ಬನ್ ಪಾರ್ಕ್ ಹಾಗೂ ಸದಾಶಿವನಗರ ಠಾಣೆಗಳಲ್ಲಿ ಪ್ರಕರಣ ದಾಖಲಾದ ದಿನದಿಂದಲೂ ತನಿಖೆ ಹೊಣೆ ಹೊತ್ತಿದ್ದರು. ಪ್ರಕರಣದಲ್ಲಿ ಹಲವು ತಿರುವುಗಳು ಸಿಕ್ಕಿದ್ದವು.

ಇದರ ನಡುವೆಯೇ, ಕುಟುಂಬದವರ ಆರೋಗ್ಯ ಸಮಸ್ಯೆ ಕಾರಣ ನೀಡಿ ಸೌಮೇಂದು ರಜೆ ಪಡೆದಿದ್ದರು. ಇದೀಗ ಪುನಃ ರಜೆ ಅವಧಿಯನ್ನು ವಿಸ್ತರಿಸಿಕೊಂಡಿದ್ದಾರೆ. ಹೀಗಾಗಿ, ತನಿಖೆಯ ಜವಾಬ್ದಾರಿಯನ್ನು ಸಿಸಿಬಿಯ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಅವರಿಗೆ ನೀಡಲಾಗಿದೆ.

ಮಾರುಕಟ್ಟೆಗಳಿಗೆ 15 ದಿನಗಳಿಂದ ಭಾರಿ ಪ್ರಮಾಣದಲ್ಲಿ ಆವಕವಾಗುತ್ತಿರುವ ಸೊಪ್ಪು–ತರಕಾರಿ

ತರಕಾರಿಗಳ ದರ ದಿಢೀರ್ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರುಕಟ್ಟೆಗಳಿಗೆ ತರಕಾರಿಗಳ ಆವಕ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಹಲವು ತರಕಾರಿಗಳ ದರ ಕುಸಿದಿದೆ.

ಹತ್ತು ದಿನಗಳ ಹಿಂದೆ ಬೀನ್ಸ್ ದರ ಕೆ.ಜಿ.ಗೆ ₹80ಕ್ಕಿಂತ ಹೆಚ್ಚು ದಾಟಿತ್ತು. ಈಗ ₹40ರಿಂದ ₹60ರವರೆಗೆ ಮಾರಾಟವಾಗುತ್ತಿದೆ. ಬೆಳ್ಳುಳ್ಳಿ, ಕ್ಯಾರೆಟ್, ಶುಂಠಿ ದರಗಳು ತುಸು ಏರಿಕೆ ಕಂಡಿವೆ. ಈರುಳ್ಳಿ, ಆಲೂಗಡ್ಡೆ, ಬೆಂಡೆಕಾಯಿ, ಬದನೆ, ಹೂಕೋಸು, ಎಲೆಕೋಸು, ಮೂಲಂಗಿ, ಟೊಮೆಟೊ ದರಗಳು ಕುಸಿತ ಕಂಡಿವೆ.

‘ಜೂನ್ ಮೊದಲ ವಾರದಲ್ಲಿ ರಾಜ್ಯದಲ್ಲಿ ಮಳೆ ಹೆಚ್ಚಾಗಿತ್ತು. ಆಗ ಮಾತ್ರ ಕೆಲ ತರಕಾರಿ ದರಗಳು ಏರಿದ್ದವು. ತರಕಾರಿಗಳಲ್ಲಿ ಮಳೆಯಿಂದ ಕೆಲವು ಹಾನಿಗೊಂಡರೆ, ಹಲವು ತರಕಾರಿಗಳಿಗೆ ಮಳೆಯೇ ವರದಾನ. ಹಾಗಾಗಿ, 15 ದಿನಗಳಿಂದ ಭಾರಿ ಪ್ರಮಾಣದಲ್ಲಿ ತರಕಾರಿಗಳು ಆವಕವಾಗುತ್ತಿವೆ. ಇದರಿಂದ ಬೇಡಿಕೆ ಕಡಿಮೆಯಾಗಿ, ದರಗಳು ಕಡಿಮೆಯಾಗಿವೆ’ ಎಂದು ತರಕಾರಿ ವ್ಯಾಪಾರಿ ಮದನ್ ತಿಳಿಸಿದರು.



‘ಕೋವಿಡ್ ಎರಡನೇ ಅಲೆಯಿಂದ ಲಾಕ್‌ಡೌನ್ ಜಾರಿಯಾದ ಸಂದರ್ಭದಲ್ಲೂ ತರಕಾರಿ ದರಗಳು ಸ್ಥಿರವಾಗಿದ್ದವು. ಮಾರುಕಟ್ಟೆಗಳಿಗೆ ಬರಲು ಹಿಂದೇಟು ಹಾಕುತ್ತಿದ್ದ ಗ್ರಾಹಕರ ಮನೆ ಬಾಗಿಲಿಗೆ ತರಕಾರಿಗಳು ಪೂರೈಕೆಯಾಗುತ್ತಿದ್ದವು. ಹಾಗಾಗಿ, ವ್ಯಾಪಾರ ತಕ್ಕಮಟ್ಟಿಗೆ ನಡೆಯುತ್ತಿತ್ತು. ಆಗ ಮುಚ್ಚಿದ್ದ ಹೋಟೆಲ್‌ಗಳು ಕಾರ್ಯಾರಂಭ ಮಾಡಿವೆ. ಇದರಿಂದ ತರಕಾರಿ ಸರಬರಾಜು ಚೇತರಿಸಿಕೊಳ್ಳುವ ನಿರೀಕ್ಷೆಯಲ್ಲಿದ್ದೇವೆ’ ಎಂದರು.

ನೆಲಕಚ್ಚಿದ ಸೊಪ್ಪಿನ ದರ: ತಿಂಗಳ ಹಿಂದೆ ದುಬಾರಿಯಾಗಿದ್ದ ಸೊಪ್ಪುಗಳು ವಾರದಿಂದ ಅಗ್ಗವಾಗಿವೆ. ಸದ್ಯ ಕೊತ್ತಂಬರಿ ದರ ಹೆಚ್ಚಾಗಿದೆ. ಪಾಲಕ್, ಸಬ್ಬಕ್ಕಿ, ದಂಟಿನ ಸೊಪ್ಪುಗಳು ಪ್ರತಿ ಕಟ್ಟಿಗೆ ₹15ರಿಂದ ₹20ರಂತೆ ಮಾರಾಟ ಆಗುತ್ತಿತ್ತು. ಈಗ ಚಿಲ್ಲರೆ ದರ ಒಂದು ಕಟ್ಟಿಗೆ ₹10ರೊಳಗೆ ಇದೆ.

‘ಮುಂಗಾರು ಆರಂಭಕ್ಕೂ ಮುನ್ನವೇ ಸೊಪ್ಪುಗಳ ಬಿತ್ತನೆ ನಡೆದಿತ್ತು. ಮಳೆ ಬಿದ್ದಿದ್ದರಿಂದ ಸೊಪ್ಪುಗಳು ಉತ್ತಮವಾಗಿ ಬೆಳೆದು ಮಾರುಕಟ್ಟೆಗೆ ಬಂದಿವೆ. ಆದರೆ, ಕೇಳುವವರಿಲ್ಲದೆ ದರಗಳೆಲ್ಲ ಕುಸಿದಿವೆ. ಈ ಅವಧಿಯಲ್ಲಿ ಸೊಪ್ಪಿನ ದರಗಳಲ್ಲಿ ಏರುಪೇರು ಸಾಮಾನ್ಯ’ ಎನ್ನುತ್ತಾರೆ ದಾಸನಪುರ ಎಪಿಎಂಸಿ ಮಾರುಕಟ್ಟೆಯ ತರಕಾರಿ ವ್ಯಾಪಾರಿ ಕುಮಾರ್.

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಸೊಪ್ಪು	ಸಗಟು (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಕೊತ್ತಂಬರಿ	20	70
ಸಬ್ಬಕ್ಕಿ	10	46
ಮೆಂತ್ಯೆ	10	60
ದಂಟು	8	32
ಪಾಲಕ್	8	32

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಹಣ್ಣುಗಳು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಸೇಬು	150	180
ಮೂಸಂಬಿ	100	125
ಕಿತ್ತಳೆ	80	100
ದ್ರಾಕ್ಷಿ	120	138
ಮಾವು	70	86
ಸಪೋಟ	50	58
ಪಪ್ಪಾಯ	25	40
ಕಲ್ಲಂಗಡಿ	15	18

ದರ ಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಸಗಟು ದರ	ಹಾಪ್‌ಕಾಮ್ಸ್ ದರ
ಬೆಳ್ಳುಳ್ಳಿ	80	158
ಶುಂಠಿ	60	58
ಕ್ಯಾರೆಟ್	50	42
ಬೀನ್ಸ್	40	65
ಈರುಳ್ಳಿ	30	37
ಆಲೂಗಡ್ಡೆ	30	32
ಬೆಂಡೆಕಾಯಿ	20	38
ಬದನೆ	20	48
ಹೂಕೋಸು	20	45
ಎಲೆಕೋಸು	10	26
ಮೂಲಂಗಿ	10	36
ಟೊಮೆಟೊ	10	15

ಸುದ್ದಿ 2 ನಿಮಿಷ

ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್ಐಆರ್

ಬೆಂಗಳೂರು: ತಪ್ಪು ಮಾಹಿತಿ ನೀಡಿ ಜನರ ದಿಕ್ಕು ತಪ್ಪಿಸಿ ನ್ಯಾಯಾಂಗ ನಿಂದನೆ ಮಾಡಿದ ಆರೋಪದಡಿ ರೈತರ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.



‘ಬಿಡಿಎ ಎಂಜಿನಿಯರ್ ಆರ್. ಕೆ. ಮೋಹನ್ ದೂರು ನೀಡಿದ್ದರು. ಅದರನ್ವಯ ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸುಪ್ರೀಂಕೋರ್ಟ್ ನೇಮಿಸಿರುವ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಅಧ್ಯಕ್ಷತೆಯ ಸಮಿತಿಗೆ ದಾಖಲೆಗಳನ್ನು ನೀಡದಂತೆ ಕೋಡಿಹಳ್ಳಿ ಚಂದ್ರಶೇಖರ್ ಜನರಿಗೆ ಹೇಳಿ ದಿಕ್ಕು ತಪ್ಪಿಸಿದ್ದಾರೆ. ಈ ಮೂಲಕ ನ್ಯಾಯಾಂಗ ನಿಂದನೆ ಮಾಡಿದ್ದಾರೆ. ಈ ಸಂಬಂಧ ಆರೋಪಿಗೆ ಈಗಾಗಲೇ ನೋಟಿಸ್ ಜಾರಿಯಾಗಿದೆ’ ಎಂದೂ ತಿಳಿಸಿವೆ.

ಬೈಕ್ ಸವಾರನಿಗೆ ₹ 15 ಸಾವಿರ ದಂಡ

ಬೆಂಗಳೂರು: ಪದೇ ಪದೇ ರಸ್ತೆ ನಿಯಮ ಉಲ್ಲಂಘಿಸಿ ಪರಾರಿಯಾಗುತ್ತಿದ್ದ ಬೈಕ್ ಸವಾರರೊಬ್ಬರು ವಿಜಯನಗರ ಸಂಚಾರ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದು, ಅವರಿಗೆ ₹ 15,000 ದಂಡ ವಿಧಿಸಲಾಗಿದೆ.

ಠಾಣೆ ವ್ಯಾಪ್ತಿಯಲ್ಲಿ ಪಿಎಸ್ಐ ಶೈಲಾ, ವಾಹನಗಳ ತಪಾಸಣೆ ಮಾಡುತ್ತಿದ್ದರು. ಸ್ಥಳಕ್ಕೆ ಬಂದಿದ್ದ ಬೈಕ್ ತಡೆದು ಪರಿಶೀಲಿಸಿದಾಗ ಸವಾರ ಸಿಕ್ಕಿಬಿದ್ದಿದ್ದಾರೆ.

’30 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ ಸವಾರ, ಪೊಲೀಸರ ಕಣ್ತಪ್ಪಿಸಿ ಸಂಚರಿಸುತ್ತಿದ್ದರು. ಅವರಿಗೆ ₹15,000 ದಂಡದ ವಿಧಿಸಿ ರಶೀದಿ ನೀಡಲಾಗಿದೆ. ಬೈಕ್ ಜಪ್ತಿ ಮಾಡಲಾಗಿದ್ದು, ನ್ಯಾಯಾಲಯದ ಮೂಲಕ ಬೈಕ್ ಬಿಡಿಸಿಕೊಳ್ಳಬೇಕು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಐಪಿಎಸ್ ಅಧಿಕಾರಿಗಳ ಮನೆ ಬಳಿಯೇ ಸುಲಿಗೆ

ಬೆಂಗಳೂರು: ವಸಂತನಗರದಲ್ಲಿರುವ ಐಪಿಎಸ್ ಅಧಿಕಾರಿಗಳ ಮನೆಗಳ ಸುತ್ತಮುತ್ತ ಸುಲಿಗೆ ಪ್ರಕರಣಗಳು ವರದಿಯಾಗುತ್ತಿದ್ದು, ಆರೋಪಿಗಳು ಕೃತ್ಯ ಎಸಗಿ ಪರಾರಿಯಾಗುತ್ತಿದ್ದಾರೆ.

ವಸಂತನಗರದ 4ನೇ ಮುಖ್ಯ ರಸ್ತೆಯಲ್ಲಿ ಮಂಗಳವಾರ ನಸುಕಿನಲ್ಲಿ ಹಾಲು ಮಾರಾಟ ಮಳಿಗೆಗೆ ನುಗ್ಗಿದ್ದ ದುಷ್ಕರ್ಮಿಗಳು, ಒಂಟಿಯಾಗಿದ್ದ ಹಾಲು ಮಾರಾಟಗಾರನನ್ನು ಬೆದರಿಸಿ ಸುಲಿಗೆ ಮಾಡಿದ್ದಾರೆ. ನಂತರ, ಸಮೀಪದಲ್ಲೇ ಇದ್ದ ಮತ್ತೊಂದು ಅಂಗಡಿಗೆ ನುಗ್ಗಿ ಕೃತ್ಯ ಎಸಗಿದ್ದಾರೆ.

ಆರೋಪಿಗಳ ಕೃತ್ಯ ಘಟನಾ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸುಲಿಗೆ ಬಗ್ಗೆ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಡಿಯೊ ದ್ವಿಚಕ್ರ ವಾಹನದಲ್ಲಿ ಬಂದಿದ್ದ ದುಷ್ಕರ್ಮಿಗಳು, ಡ್ರ್ಯಾಗರ್ ತೋರಿಸಿ ಸುಲಿಗೆ ಮಾಡಿಕೊಂಡು ಹೋಗಿದ್ದಾರೆ. ನಿತ್ಯವೂ ನಸುಕಿನಲ್ಲಿ ಇಂಥ ಘಟನೆಗಳು ನಡೆಯುತ್ತಿವೆ. ಇದರಿಂದ ಆತಂಕ ಉಂಟಾಗಿದೆ’ ಎಂದು ಸ್ಥಳೀಯ ವ್ಯಾಪಾರಿಗಳು ಹೇಳಿದರು.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪ

ಸಿಬಿಐ ಡಿವೈಎಸ್‌ಪಿ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಸಿಬಿಐನ ಬೆಂಗಳೂರು ಬ್ಯೂರೊದ ಭ್ರಷ್ಟಾಚಾರ ನಿಯಂತ್ರಣ ಘಟಕದ ಡಿವೈಎಸ್‌ಪಿ ಬ್ರಜೇಶ್ ಕುಮಾರ್ ವಿರುದ್ಧ ಸಿಬಿಐ ಪ್ರಧಾನ ಕಚೇರಿಯ ಭ್ರಷ್ಟಾಚಾರ ನಿಯಂತ್ರಣ ಘಟಕ ಭಾನುವಾರ ಎಫ್ಐಆರ್ ದಾಖಲಿಸಿದೆ.

ಬ್ರಜೇಶ್ ಕುಮಾರ್ ಅವರ ತಂದೆ ಶಿಯೋ ಯೋಗಿ ಸಿಂಗ್, ತಾಯಿ ಲಲಿತಾ ಸಿಂಗ್ ಮತ್ತು ಇತರರನ್ನು ಆರೋಪಿಗಳೆಂದು ಎಫ್ಐಆರ್‌ನಲ್ಲಿ ಹೆಸರಿಸಲಾಗಿದೆ. ಸಿಬಿಐ ದೆಹಲಿ ಭ್ರಷ್ಟಾಚಾರ ನಿಯಂತ್ರಣ ಘಟಕ–3ರ ಡಿವೈಎಸ್‌ಪಿ ಸುನೀಲ್ ದತ್ ಅವರಿಗೆ ತನಿಖೆಯ ಹೊಣೆ ವಹಿಸಲಾಗಿದೆ.

ಬಿಹಾರದ ಪಾಟ್ನಾ ನಿವಾಸಿಯಾದ ಬ್ರಜೇಶ್ ಕುಮಾರ್, 2008ರಲ್ಲಿ ಸಿಬಿಐ ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ಆಯ್ಕೆಯಾಗಿದ್ದರು. 2013ರಲ್ಲಿ ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ ಹೊಂದಿದ್ದರು. 2013ರ ಏಪ್ರಿಲ್‌ನಲ್ಲಿ ಡಿವೈಎಸ್‌ಪಿ ಹುದ್ದೆಗೆ ಬಡ್ತಿ ಹೊಂದಿದ್ದ ಅವರನ್ನು, ಸಿಬಿಐ ಬೆಂಗಳೂರು ಬ್ಯೂರೊದ ಬ್ಯಾಂಕ್ ಭದ್ರತೆ ಮತ್ತು ವಂಚನೆ ತಡೆ ಘಟಕಕ್ಕೆ ನಿಯೋಜಿಸಲಾಗಿತ್ತು. 2020ರ ಜೂನ್‌ನಿಂದ ಸಿಬಿಐ ಬೆಂಗಳೂರು ಬ್ಯೂರೊದ ಭ್ರಷ್ಟಾಚಾರ ನಿಯಂತ್ರಣ ಘಟಕದಲ್ಲಿದ್ದಾರೆ.

2018ರ ಸೆಪ್ಟೆಂಬರ್ 1ರಿಂದ 2021ರ ಮೇ 31ರವರೆಗಿನ ಅವಧಿಯಲ್ಲಿ ಬ್ರಜೇಶ್ ಕುಮಾರ್ ಪಡೆದಿರುವ ವೇತನ ಮತ್ತು ಅಧಿಕೃತ ಆದಾಯ, ಮಾಡಿರುವ ವೆಚ್ಚಗಳಿಗೆ ಹೋಲಿಸಿದರೆ ₹ 1.94 ಕೋಟಿ ಮೌಲ್ಯದ (ಶೇಕಡ 302) ಅಕ್ರಮ ಆಸ್ತಿ ಹೊಂದಿರುವುದು ಕಂಡುಬಂದಿದೆ ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

2020ರಲ್ಲಿ ಯಲಹಂಕ ಸಮೀಪದ ಆವಲಹಳ್ಳಿಯ ಪ್ರೆಸ್ಟೀಜ್ ರಾಯಲ್ ಗಾರ್ಡನ್ಸ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ತಂದೆ ಶಿಯೋ ಯೋಗಿ ಸಿಂಗ್ ಹೆಸರಿನಲ್ಲಿ ₹ 96.38 ಲಕ್ಷ ಮೌಲ್ಯದ ಒಂದು ಫ್ಲ್ಯಾಟ್ ಮತ್ತು ತಾಯಿ ಲಲಿತಾ ಸಿಂಗ್ ಹೆಸರಿನಲ್ಲಿ ₹ 95.29 ಲಕ್ಷ ಮೌಲ್ಯದ ಒಂದು ಫ್ಲ್ಯಾಟ್ ಖರೀದಿಸಲಾಗಿದೆ. ಈ ಯಾವುದೇ ಖರೀದಿಗೆ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿಲ್ಲ ಎಂಬ ಮಾಹಿತಿ ಎಫ್ಐಆರ್‌ನಲ್ಲಿದೆ.

2014ರಲ್ಲಿ ಕಮ್ಮನಹಳ್ಳಿ ರಸ್ತೆಯ ಶುಭೋದಯ ಲಾರೆಲ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಪತ್ನಿ ಸ್ವೀಟಿ ಸಿಂಗ್ ಹೆಸರಿಗೆ ಒಂದು ಫ್ಲ್ಯಾಟ್ ಖರೀದಿಸಲಾಗಿದೆ ಎಂಬ ಉಲ್ಲೇಖವೂ ಇದೆ.

ಕೆಂಪೇಗೌಡ ಬಡಾವಣೆಯ ನಿರ್ವಹಣೆ ಶುಲ್ಕ ಕೈಬಿಡಿ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರರಿಗೆ ಆಸ್ತಿ ತೆರಿಗೆ ಜೊತೆ ಸಂಗ್ರಹಿಸುವ ನಿರ್ವಹಣಾ ಶುಲ್ಕದಿಂದ ವಿನಾಯಿತಿ ನೀಡಬೇಕು ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (ಬಿಡಿಎ) ಒತ್ತಾಯಿಸಿದೆ.

ವೇದಿಕೆಯ ಪ್ರಮುಖರನ್ನು ಒಳಗೊಂಡ ನಿಯೋಗವು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಆಯುಕ್ತ ಎಂ.ಬಿ.ರಾಜೇಶ ಗೌಡ ಅವರನ್ನು ಮಂಗಳವಾರ ಭೇಟಿಯಾಗಿ ಈ ಬಗ್ಗೆ ಚರ್ಚಿಸಿತು. ಭೂಸ್ವಾಧೀನ ಸಮಸ್ಯೆಗಳನ್ನು ಬಗೆಹರಿಸಿ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು ಈ ಬಡಾವಣೆಗೆ ಇನ್ನೂ ಮೂಲಸೌಕರ್ಯ ಕಲ್ಪಿಸಿಲ್ಲ. ಹಾಗಾಗಿ ನಿರ್ವಹಣೆ ಶುಲ್ಕ ವಿಧಿಸಬಾರದು ಎಂದು ಒತ್ತಾಯಿಸಿತು.

‘ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರರಿಗೆ ನಿರ್ವಹಣೆ ಶುಲ್ಕದಿಂದ ವಿನಾಯಿತಿ ನೀಡುವ ಬಗ್ಗೆ ಬಿಡಿಎ ಅಧ್ಯಕ್ಷರು ಭರವಸೆ ನೀಡಿದ್ದಾರೆ’ ಎಂದು ಮುಕ್ತ ವೇದಿಕೆಯ ಪದಾಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯ ಮುಕ್ತ ವೇದಿಕೆಯ ಅಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ಅಶೋಕ್, ಪದಾಧಿಕಾರಿಗಳಾದ ಸಂತೋಷ್, ಭಾರತ್, ಸಂಜೀವ್, ಸೂರ್ಯಕಿರಣ್ ನಿಯೋಗದಲ್ಲಿದ್ದರು.

ಕಾರ್ಮಿಕರಿಗೆ ಲಸಿಕೆ ನಿರಾಕರಣೆ

ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಕೇಳಿದ ಬಿಬಿಎಂಪಿ ಆರೋಗ್ಯ ಸಿಬ್ಬಂದಿ

ಬೆಂಗಳೂರು: ಕೊವಿಡ್ ನೆಗೆಟಿವ್ (ನಕಾರಾತ್ಮಕ) ಪ್ರಮಾಣಪತ್ರ ಇಲ್ಲ ಎಂಬ ಕಾರಣಕ್ಕೆ ಬಿಬಿಎಂಪಿ ಆರೋಗ್ಯ ಸಿಬ್ಬಂದಿ ವಿಶೇಷ ಲಸಿಕಾ ಅಭಿಯಾನದಲ್ಲಿ ಕಾರ್ಖಾನೆಯ ಕಾರ್ಮಿಕರಿಗೆ ಲಸಿಕೆ ನೀಡಲು ನಿರಾಕರಿಸಿದ ಘಟನೆ ನಗರದಲ್ಲಿ ಮಂಗಳವಾರ ನಡೆದಿದೆ.

ಬೊಮ್ಮನಹಳ್ಳಿ ವಲಯದ ಅಂಜನಾಪುರ ವಾರ್ಡ್‌ನ ವಿಶ್ವೇಶ್ವರಯ್ಯ ಕೈಗಾರಿಕಾ ಬಡಾವಣೆಯಲ್ಲಿ ಕಾರ್ಖಾನೆಯೊಂದರ ಕಾರ್ಮಿಕರಿಗಾಗಿ ಬಿಬಿಎಂಪಿಯು ವಿಶೇಷ ಲಸಿಕಾ ಅಭಿಯಾನವನ್ನು ಆಯೋಜಿಸಿತ್ತು. 50 ಕಾರ್ಮಿಕರನ್ನು ಈ ಅಭಿಯಾನದಡಿ ಗುರುತಿಸಲಾಗಿತ್ತು. ಆದರೆ, ಕಾರ್ಮಿಕರು ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ಪ್ರಮಾಣಪತ್ರವನ್ನು ಹೊಂದಿಲ್ಲ ಎಂಬ ಕಾರಣಕ್ಕೆ ಲಸಿಕೆ ನೀಡಲು ಸಿಬ್ಬಂದಿ ನಿರಾಕರಿಸಿದರು. ಇದರಿಂದಾಗಿ ಅಲ್ಲಿ ಕೆಲ ಹೊತ್ತು ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು.

‘ಸ್ಥಳಕ್ಕೆ ಬಂದ ಬಿಬಿಎಂಪಿ ಆರೋಗ್ಯ ಸಿಬ್ಬಂದಿ ನೆಗೆಟಿವ್ ಪ್ರಮಾಣಪತ್ರ ಸಲ್ಲಿಸುವಂತೆ ಸೂಚಿಸಿದರು. ಯಾರೊಬ್ಬರೂ ಈ ಪ್ರಮಾಣಪತ್ರ ಹೊಂದಿರದ ಕಾರಣ ಲಸಿಕೆ ನೀಡಲಿಲ್ಲ’ ಎಂದು ಕಾರ್ಖಾನೆಯ ಉದ್ಯೋಗಿ ಪವನ್ ತಿಳಿಸಿದರು.

ಅಂಜನಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಕೀಯ ಅಧಿಕಾರಿ ಡಾ. ಶಿಫಾ, ‘ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ. ಆದರೆ, ಎರಡನೇ ಹಂತದ ಅನ್‌ಲಾಕ್ ವೇಳೆ ನೀಡಲಾಗಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಪ್ರಕಾರ ಎಲ್ಲ ಕಾರ್ಮಿಕರು 15 ದಿನಗಳಿಗೊಮ್ಮೆ ಕೋವಿಡ್ ಪರೀಕ್ಷೆಗೆ ಒಳಗಾಗಬೇಕು. ಕೋವಿಡ್ ಪೀಡಿತರಿಗೆ ಲಸಿಕೆ ನೀಡುವುದಿಲ್ಲ. ಹೀಗಾಗಿ, ಪ್ರಮಾಣಪತ್ರ ಕೇಳಲಾಗಿದೆ’ ಎಂದರು.

‘ಲಸಿಕೆ ಪಡೆದುಕೊಳ್ಳಲು ಕೋವಿಡ್ ಪರೀಕ್ಷೆಯ ನಕಾರಾತ್ಮಕ ವರದಿಯನ್ನು ಹಾಜರುಪಡಿಸಬೇಕೆಂಬ ನಿಯಮವಿಲ್ಲ. ಕಾರ್ಮಿಕರಿಗೆ ರ‍್ಯಾಂಡಮ್ ಪರೀಕ್ಷೆ ನಡೆಸಲಾಗುತ್ತಿದೆ’ ಎಂದು ಬೊಮ್ಮನಹಳ್ಳಿ ವಲಯದ ಆರೋಗ್ಯಾಧಿಕಾರಿ ಡಾ. ಸುರೇಶ್ ಜಿ.ಕೆ. ತಿಳಿಸಿದರು.

ಆನ್‌ಲೈನ್ ಜೂಜು: ಸಿಎಸ್ ಹೇಳಿಕೆಗೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: ಆನ್‌ಲೈನ್ ಜೂಜಿನ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವ ದಿಸೆಯಲ್ಲಿ ಹೇಳಿಕೆಯೊಂದನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ವಿಭಾಗೀಯ ಪೀಠ ನಿರ್ದೇಶನ ನೀಡಿದೆ.

ಆನ್‌ಲೈನ್ ಜೂಜು ನಿಯಂತ್ರಣಕ್ಕೆ ನಿಯಮಗಳನ್ನು ರೂಪಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಲು ಕೋರಿ ದಾವಣಗೆರೆಯ ಡಿ.ಆರ್. ಶಾರದಾ ಎಂಬುವವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರದ ಕೋರಿಕೆಯಂತೆ ಹಲವು ಬಾರಿ ವಿಚಾರಣೆ ಮುಂದೂಡಲಾಗಿತ್ತು. ಮಂಗಳವಾರದ ವಿಚಾರಣೆ ವೇಳೆಯೂ ಸರ್ಕಾರ, ತನ್ನ ನಿಲುವು ಸ್ಪಷ್ಟಪಡಿಸಲಿಲ್ಲ. ಈ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ, ಹೇಳಿಕೆ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಗೆ ನಿರ್ದೇಶನ ನೀಡಿತು.

2020ರ ನವೆಂಬರ್‌ನಲ್ಲಿ ಸಾರ್ವಜನಿಕ ಹಿತಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ನಾಲ್ಕು ತಿಂಗಳಾದರೂ ಈ ಸಂಬಂಧ ಸಂಪುಟ ಸಭೆಯ ನಿರ್ಣಯ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಿರಲಿಲ್ಲ. ಮತ್ತೆ ಎರಡು ವಾರಗಳ ಕಾಲ ವಿಚಾರಣೆ ಮುಂದೂಡುವಂತೆ ಸರ್ಕಾರದ ಪರ ವಕೀಲರು ಮನವಿ ಮಾಡಿದರು.

‘ನಾಲ್ಕು ತಿಂಗಳಾದರೂ ಈ ವಿಚಾರದಲ್ಲಿ ಸರ್ಕಾರದ ನಿಲುವು ಸ್ಪಷ್ಟಪಡಿಸುವುದಕ್ಕೆ ಪೂರಕವಾಗಿ ಸಂಪುಟ ಸಭೆಯ ನಿರ್ಣಯ ಮತ್ತು ಆಕ್ಷೇಪಣೆ ಸಲ್ಲಿಸಿಲ್ಲ. ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ. ಇನ್ನು ನಮಗೆ ಬೇರೆ ಯಾವುದೇ ದಾರಿಗಳಿಲ್ಲ. ಯಾವ ಕಾರಣಕ್ಕಾಗಿ ನ್ಯಾಯಾಲಯದ ಆದೇಶವನ್ನು ಪಾಲಿಸಿಲ್ಲ ಎಂಬುದರ ಕುರಿತು ಒಂದು ವಾರದೊಳಗೆ ಮುಖ್ಯ ಕಾರ್ಯದರ್ಶಿ ಪ್ರಮಾಣಪತ್ರ ಸಲ್ಲಿಸಬೇಕು’ ಎಂದು ವಿಭಾಗೀಯ ಪೀಠ ತಾಕೀತು ಮಾಡಿದೆ.

‘ಶಾಸಕ ರವಿಸುಬ್ರಹ್ಮಣ್ಯರಿಂದ ಆರೋಪಿಗಳ ರಕ್ಷಣೆ’

ಬೆಂಗಳೂರು: ‘ವಸಿಷ್ಠ ಸಹಕಾರ ಸೊಸೈಟಿ ಹಗರಣದಲ್ಲಿ ಭಾಗಿಯಾಗಿರುವ ಆರೋಪಿಗಳಿಗೆ ಬಸವನಗುಡಿಯ ಬಿಜೆಪಿ ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ರಕ್ಷಣೆ ನೀಡುತ್ತಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಮುಖ್ಯ ವಕ್ತಾರ ಶರತ್ ಖಾದ್ರಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ರಾಘವೇಂದ್ರ ಸಹಕಾರ ಬ್ಯಾಂಕ್ ಹಗರಣದಲ್ಲಿ ಭಾಗಿಯಾಗಿದ್ದ ರವಿ ಸುಬ್ರಹ್ಮಣ್ಯ ಈಗ ಆರೋಪಿಗಳಿಗೆ ಆಸರೆಯಾಗಿ ನಿಂತಿದ್ದಾರೆ. ನಿವೃತ್ತಿಯ ನಂತರ ನೆಮ್ಮದಿಯ ಜೀವನ ನಡೆಸುವ ಸಲುವಾಗಿ ಅನೇಕರು ಪಿಂಚಣಿ ಹಣವನ್ನು ಸೊಸೈಟಿಯಲ್ಲಿ ಠೇವಣಿ ಇಟ್ಟಿದ್ದರು. ಅವರ ಬದುಕು ಈಗ ಅಯೋಮಯವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆಯಲ್ಲಿ ನೆಮ್ಮದಿಯಿಂದ ಇರಬೇಕಾದವರು ಈಗ ರಸ್ತೆಯಲ್ಲಿ ನಿಂತು ತಮ್ಮ ಹಣಕ್ಕಾಗಿಯೇ ಅಂಗಲಾಚುವ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದರು.

‘ಈ ಪ್ರಕರಣದ ಕುರಿತು ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕು. ಬಿಜೆಪಿಯ ಪ್ರಭಾವಿ ನಾಯಕರು ಆರೋಪಿಗಳ ಜೊತೆ ನಂಟು ಹೊಂದಿರುವ ಸಾಧ್ಯತೆ ಇದ್ದು ಈ ಬಗ್ಗೆಯೂ ತನಿಖೆಯಾಗಬೇಕು’ ಎಂದು ಒತ್ತಾಯಿಸಿದರು.

ಪಕ್ಷದ ರಾಜ್ಯ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್, ‘ವಸಿಷ್ಠ ಸಹಕಾರ ಸೊಸೈಟಿಯ ಪ್ರಮುಖ ನಿರ್ದೇಶಕ ಕೆ.ಎನ್.ವೇಂಕಟನಾರಾಯಣ, ಬಿಜೆಪಿ ನಾಯಕರ ಜೊತೆ ಒಡನಾಟ ಹೊಂದಿದ್ದಾರೆ. ಶಾಸಕ ರವಿ ಸುಬ್ರಹ್ಮಣ್ಯ ಸೇರಿದಂತೆ ಅನೇಕರಿಗೆ ಆಪ್ತರಾಗಿದ್ದಾರೆ. ಅವರೆಲ್ಲರ ಶ್ರೀ ರಕ್ಷೆಯೂ ಅವರ ಮೇಲಿದೆ. ಹೀಗಿರುವಾಗ ಪಾರದರ್ಶಕ ತನಿಖೆ ನಡೆಯುವುದು ಅಸಾಧ್ಯ’ ಎಂದು ತಿಳಿಸಿದರು.

ರೌಡಿಗಳ ಮನೆ ಮೇಲೆ ಪೊಲೀಸರ ದಾಳಿ

ಬೆಂಗಳೂರು: ಮಾಜಿ ಕಾರ್ಪೋರೇಟರ್ ಆರ್. ರೇಖಾ ಕದಿರೇಶ್ ಹತ್ಯೆ ಪ್ರಕರಣದಿಂದ ಎಚ್ಚೆತ್ತಿರುವ ಪೂರ್ವ ವಿಭಾಗದ ಪೊಲೀಸರು, ಕಾಟನ್‌ಪೇಟೆ ಠಾಣೆ ವ್ಯಾಪ್ತಿಯ ರೌಡಿಗಳ ಮನೆಗಳ ಮೇಲೆ ಮಂಗಳವಾರ ದಾಳಿ ಮಾಡಿದರು.

ಅಪರಾಧ ಹಿನ್ನೆಲೆಯುಳ್ಳವರು ಹಾಗೂ ರೌಡಿಗಳು ಮೇಲಿಂದ ಮೇಲೆ ಅಪರಾಧ ಕೃತ್ಯ ಎಸಗುತ್ತಿದ್ದಾರೆ. ಅವರ ವಿರುದ್ಧ ಮಾಹಿತಿ ಕಲೆಹಾಕಿದ ಪೊಲೀಸರು, 40 ಮನೆಗಳ ಮೇಲೆ ದಾಳಿ ಮಾಡಿ ಮಾಹಿತಿ ಸಂಗ್ರಹಿಸಿದರು.

‘ಮುಂಜಾಗ್ರತಾ ಕ್ರಮವಾಗಿ 40 ಮಂದಿ ವಿರುದ್ಧ ಸಿಆರ್‌ಪಿಸಿ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರೆಲ್ಲರ ಮನೆಗಳ ಮೇಲೆ 100 ಸಿಬ್ಬಂದಿ ತಂಡ ದಾಳಿ ಮಾಡಿ ಪರಿಶೀಲಿಸಿದೆ. ಮಾರಕಾಸ್ತ್ರಗಳನ್ನೂ ಜಪ್ತಿ ಮಾಡಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪ್ರತಿಯೊಬ್ಬ ರೌಡಿ ಹಾಗೂ ಅಪರಾಧ ಹಿನ್ನೆಲೆಯುಳ್ಳವರ ವಿಚಾರಣೆ ನಡೆಸಲಾಗುತ್ತಿದೆ. ಅವರಿಂದ ಮುಚ್ಚಳಿಕೆ ಬರೆಸಿಕೊಳ್ಳಲಾಗುವುದು. ಅದಾದ ಬಳಿಕವೂ ಅಪರಾಧ ಕೃತ್ಯದಲ್ಲಿ ಭಾಗಿಯಾದರೆ ಕಾನೂನು ಕ್ರಮ ಜರುಗಿಸಲಾಗುವುದು’ ಎಂದೂ ತಿಳಿಸಿದರು.

ಚಿತ್ರಾವಳಿ



ಲಗ್ಗೆರೆಯಲ್ಲಿ ಕಾಂಗ್ರೆಸ್ ಮುಖಂಡ ಕೆ.ಆರ್.ಪಾರ್ಥಗೌಡ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಸದ ಡಿ.ಕೆ. ಸುರೇಶ್ ಅವರು ಕೊರೊನಾ ವಾರಿಯರ್ಸ್ ಸೇರಿದಂತೆ 2,500 ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಿದರು. ಕಾಂಗ್ರೆಸ್‌ನ ಮುಖಂಡರಾದ ಕುಸುಮಾ ಎಚ್. ಇದ್ದಾರೆ.



ಗೃಹ ಕಾರ್ಮಿಕರಿಗೆ ಪ್ರತ್ಯೇಕ ಸಾಮಾಜಿಕ ಭದ್ರತಾ ಮಂಡಳಿ ಸ್ಥಾಪನೆ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಷ್ಟ್ರೀಯ ಗೃಹ ಕಾರ್ಮಿಕರ ಆಂದೋಲನದ ನೇತೃತ್ವದಲ್ಲಿ ಗೃಹ ಕಾರ್ಮಿಕರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಅಪರಾಧ ಕೃತ್ಯಕ್ಕೆ ಸಂಚು; ರೌಡಿ ಗ್ಯಾಂಗ್ ಸೆರೆ

ಬೆಂಗಳೂರು: ಅಪರಾಧ ಕೃತ್ಯ ಎಸಗಲು ಮಾರಕಾಸ್ತ್ರಗಳ ಸಮೇತ ಸಜ್ಜಾಗಿದ್ದ ರೌಡಿಗಳು ಸೇರಿ ಆರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಚಾಮರಾಜಪೇಟೆ ರೌಡಿ ವಿನೋದ್ ಅಲಿಯಾಸ್ ಮನ್ನಾ, ಮನ್ಸೂರ್, ಪಾಪ ರೆಡ್ಡಿ ಸೇರಿದಂತೆ ಆರು ಮಂದಿ ಗ್ಯಾಂಗ್ ಕಟ್ಟಿಕೊಂಡಿದ್ದರು. ಅಪರಾಧ ಕೃತ್ಯ ಎಸಗಲು ಸಂಚು ರೂಪಿಸಿದ್ದ ಮಾಹಿತಿ ಬಂದಿತ್ತು. ಕಾರ್ಯಾಚರಣೆ ಕೈಗೊಂಡು ಅವರನ್ನು ಬಂಧಿಸಲಾಗಿದೆ. ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

‘ಬಂಧಿತರ ಪೈಕಿ ನಾಲ್ವರ ಹೆಸರು, ಕಲಾಸಿಪಾಳ್ಯ ಹಾಗೂ ಚಾಮರಾಜಪೇಟೆ ರೌಡಿ ಪಟ್ಟಿಯಲ್ಲಿದೆ. ಕೆಲ ಆರೋಪಿಗಳು, ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ತಮ್ಮದೇ ಗ್ಯಾಂಗ್ ಕಟ್ಟಿಕೊಂಡು ಹಣಕ್ಕಾಗಿ ಸಾರ್ವಜನಿಕರನ್ನು ಪೀಡಿಸುತ್ತಿದ್ದರು. ಜೀವ ಬೆದರಿಕೆ ಹಾಕಿ ಸುಲಿಗೆ ಮಾಡುತ್ತಿದ್ದರು’ ಎಂದೂ ತಿಳಿಸಿವೆ.

‘ಐಸ್‌ಕ್ರೀಂ’ ಮಾರಾಟದಲ್ಲಿ ನಷ್ಟ; ಗಾಂಜಾ ಮಾರಿ ಸಿಕ್ಕಿಬಿದ್ದ

ಬೆಂಗಳೂರು: ಗಾಂಜಾ ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಂದ್ರಾಲೇಔಟ್ ನಿವಾಸಿ ವಿಶ್ವ ಹಾಗೂ ಶಿವಾಜಿನಗರದ ಉಮರ್ ಬಂಧಿತರು. ಅವರಿಂದ 6 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲಸ ಹುಡುಕಿಕೊಂಡು ವಿಶಾಖಪಟ್ಟಣಕ್ಕೆ ಹೋಗಿದ್ದ ವಿಶ್ವ, ಅಲ್ಲಿಯೇ ಕೆಲ ವರ್ಷ ನೆಲೆಸಿದ್ದ. ನಂತರ, ಬೆಂಗಳೂರಿಗೆ ವಾಪಸು ಬಂದು ಐಸ್‌ಕ್ರೀಂ ಮಾರಾಟ ಮಳಿಗೆ ತೆರೆದಿದ್ದ. ಲಾಕ್‌ಡೌನ್‌ನಿಂದಾಗಿ ವ್ಯಾಪಾರ ಇಲ್ಲದಂತಾಗಿತ್ತು.’

‘ಜೀವನ ನಿರ್ವಹಣೆಗಾಗಿ ಆಟೊ ಚಾಲಕನಾಗಿ ಕೆಲಸ ಮುಂದುವರಿಸಿದ್ದ. ಅದರಿಂದ ಬಂದ ಹಣದಲ್ಲಿ ಜೀವನ ನಡೆಸುವುದು ಕಷ್ಟವಾಗಿತ್ತು. ಅವಾಗಲೇ ಗಾಂಜಾ ಮಾರಾಟಕ್ಕೆ ಇಳಿದಿದ್ದ. ವಿಶಾಖಪಟ್ಟಣದಲ್ಲಿದ್ದ ಪರಿಚಯಸ್ಥರಿಂದ ಗಾಂಜಾ ಖರೀದಿಸಿ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ. ಅದಕ್ಕಾಗಿ ಸಹಚರ ಉಮರ್ ಸಹಕಾರ ಪಡೆದಿದ್ದ’ ಎಂದೂ ಮೂಲಗಳು ತಿಳಿಸಿವೆ.

ಗಾಂಜಾ ಮಾರಾಟ: ಬಂಧನ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದಡಿ ಯೋಗೇಶ್ (23) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಅಂದ್ರಹಳ್ಳಿ ಮುಖ್ಯರಸ್ತೆಯ ವಿನಾಯಕನಗರದ ಯೋಗೇಶ್, ಸ್ಥಳೀಯ ಗ್ರಾಹಕರಿಗೆ ಗಾಂಜಾ ಮಾರುತ್ತಿದ್ದ. ಆತನಿಂದ 2 ಕೆ.ಜಿ. 90 ಗ್ರಾಂ ತೂಕದ ಗಾಂಜಾ ಹಾಗೂ ₹ 1,000 ನಗದು ಜಪ್ತಿ ಮಾಡಲಾಗಿದೆ’ ಎಂದರು.

ಅಫೀಮು ಜಪ್ತಿ; ಬಂಧನ

ಬೆಂಗಳೂರು: ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯಲ್ಲಿ ಅಫೀಮು ಮಾರುತ್ತಿದ್ದ ಆರೋಪದಡಿ ಬೇರಾರಾಮ್ (33) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘1 ಕೆ.ಜಿ. 50 ಗ್ರಾಂ ಅಫೀಮು, ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಿಕ್ಸ್ ಪ್ಯಾಕ್’ ಆಸೆ ಹುಟ್ಟಿಸಿ ₹ 6.20 ಲಕ್ಷ ವಂಚನೆ

ಬೆಂಗಳೂರು: ‘ಸಿಕ್ಸ್ ಪ್ಯಾಕ್’ ಮಾಡಿಸುವ ಆಸೆ ಹುಟ್ಟಿಸಿ ಸಾಫ್ಟ್‌ವೇರ್ ಎಂಜಿನಿಯರೊಬ್ಬರಿಂದ ₹ 6.20 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಗಿರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೊಸಕೆರೆಹಳ್ಳಿ ದತ್ತಾತ್ರೇಯ ನಗರದ ನಿವಾಸಿ ಕೌಶಿಕ್ ಎಂಬುವವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ‘ಎಂಪವರ್ ಫಿಟ್ನೆಸ್’ ಜಿಮ್ ಮಾಲೀಕ ಮೋಹನ್‌ಕುಮಾರ್ ಎಂಬುವವರ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದಕ್ಕಾಗಿ ಜಿಮ್‌ಗೆ ಹೋಗಲು ತೀರ್ಮಾನಿಸಿದ್ದ ದೂರುದಾರ, ಆರೋಪಿ ಬಳಿ ಹೋಗಿ ವಿಚಾರಿಸಿದ್ದರು. ತಮ್ಮ ದೈಹಿಕ ಕಸರತ್ತಿನ ಫೋಟೊ ತೋರಿಸಿದ್ದ ಆರೋಪಿ, ‘6 ತಿಂಗಳ ಬದಲು 3 ತಿಂಗಳಿನಲ್ಲೇ ಸಿಕ್ಸ್ ಪ್ಯಾಕ್ ಬರುವಂತೆ ಮಾಡುತ್ತೇನೆ’ ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಶುಲ್ಕ ಹಾಗೂ ಇತರೆ ಪ್ಯಾಕೇಜ್‌ಗಾಗಿ ₹ 80 ಸಾವಿರ ತುಂಬಿದ್ದರು.’

‘ದೂರುದಾರ ಎಂಜಿನಿಯರ್ ಎಂಬುದು ಗೊತ್ತಾಗುತ್ತಿದ್ದಂತೆ, ‘₹ 7 ಲಕ್ಷ ಸಾಲ ಕೊಡಿಸಿ’ ಎಂದು ಆರೋಪಿ ಬೆನ್ನುಬಿದ್ದಿದ್ದ. ಅದನ್ನು ನಂಬಿ ದೂರುದಾರ, ₹ 5 ಲಕ್ಷ ಸಾಲ ಕೊಡಿಸಿದ್ದರು. ಈ ವಿಚಾರ ದೂರುದಾರರ ತಂದೆಗೆ ಗೊತ್ತಾಗಿತ್ತು.’

‘ತಂದೆ– ಮಗ ಸೇರಿ ಆರೋಪಿ ಬಳಿ ಹೋಗಿ ಹಣ ವಾಪಸು ಕೇಳಿದ್ದರು. ಅವರಿಬ್ಬರನ್ನು ಬೆದರಿಸಿದ್ದ ಆರೋಪಿ, ಹಣ ನೀಡುವುದಿಲ್ಲವೆಂದು ಹೇಳಿದ್ದಾನೆ. ನೊಂದ ದೂರುದಾರ ಠಾಣೆಗೆ ದೂರು ನೀಡಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಕೊರೊನಾ ಸೋಂಕಿತರ ಸಂಖ್ಯೆ ಇಳಿಕೆಯಿಂದಾಗಿ ಉಳಿದ ರೋಗಿಗಳ ಚಿಕಿತ್ಸೆಗೆ ಆದ್ಯತೆ

ಪಿಎಂಎಸ್ಎಸ್‌ವೈ: ಕೋವಿಡೇತರ ಸೇವೆಗೆ ಸಿದ್ಧತೆ

• ವರುಣ ಹೆಗಡೆ

ಬೆಂಗಳೂರು: ಪೂರ್ಣ ಪ್ರಮಾಣದ ಕೋವಿಡ್ ಆಸ್ಪತ್ರೆಯಾಗಿ ಮಾರ್ಪಟ್ಟಿದ್ದ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ (ಪಿಎಂಎಸ್ಎಸ್‌ವೈ) ಕೋವಿಡೇತರ ಸೇವೆ ಪ್ರಾರಂಭಿಸಲು ಸಜ್ಜಾಗುತ್ತಿದೆ.

ಶಸ್ತ್ರಚಿಕಿತ್ಸೆಗಳು ಸೇರಿದಂತೆ ಎಲ್ಲ ರೀತಿಯ ಚಿಕಿತ್ಸೆಗಳನ್ನು ಜುಲೈ ಎರಡನೇ ವಾರದಲ್ಲಿ ಪ್ರಾರಂಭಿಸಲು ಆಸ್ಪತ್ರೆ ಯೋಜನೆ ರೂಪಿಸಿದೆ.

ಮಾರ್ಚ್ ಮೂರನೇ ವಾರದ ಬಳಿಕ ನಗರದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಏರುಗತಿ ಪಡೆದುಕೊಂಡಿತ್ತು. ಇದರಿಂದ ಹಾಸಿಗೆಗಳ ಸಮಸ್ಯೆ ತಲೆದೋರಿತ್ತು. ವಿಕ್ಟೋರಿಯಾ ಹಾಗೂ ಟ್ರಾಮಾ ಕೇರ್‌ನಲ್ಲಿ ಹಾಸಿಗೆಗಳು ಭರ್ತಿಯಾಗಿದ್ದರಿಂದ 200 ಹಾಸಿಗೆಗಳ ಪಿಎಂಎಸ್ಎಸ್‌ವೈ ಆಸ್ಪತ್ರೆಯನ್ನು ಕೂಡ ಪೂರ್ಣ ಪ್ರಮಾಣದ ಕೋವಿಡ್ ಆಸ್ಪತ್ರೆಯನ್ನಾಗಿ ಮಾರ್ಪಾಡು ಮಾಡಲಾಗಿತ್ತು.



ಪಿಎಂಎಸ್ಎಸ್‌ವೈ ಆಸ್ಪತ್ರೆ

> ಇಪ್ಪತ್ತು ದಿನಗಳಿಂದ ಪಿಎಂಎಸ್ಎಸ್‌ವೈ ಆಸ್ಪತ್ರೆಯಲ್ಲಿ ಸ್ವಚ್ಛತಾ ಕಾರ್ಯ ನಡೆಯುತ್ತಿದೆ. ಜುಲೈ ಎರಡನೇ ವಾರದಲ್ಲಿ ಕೋವಿಡೇತರ ಸೇವೆಗಳು ಪ್ರಾರಂಭವಾಗುವ ಸಾಧ್ಯತೆಯಿದೆ
>
> **ಡಾ.ಪಿ.ಜಿ. ಗಿರೀಶ್,** ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕ

ಆಸ್ಪತ್ರೆಯು 30 ಐಸಿಯು ಹಾಸಿಗೆ, 48 ವೈದ್ಯಕೀಯ ಆಮ್ಲಜನಕ ಸಂಪರ್ಕ ಸಹಿತ ಹಾಸಿಗೆ, 28 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳನ್ನು ಒಳಗೊಂಡಿದೆ. ಈ ಹಾಸಿಗೆಗಳು ಕೋವಿಡ್ ಚಿಕಿತ್ಸೆಗೆ ಸಹಕಾರಿಯಾಗಿದ್ದವು. ಆದರೆ, ಇದೇ ವೇಳೆ ಹೃದ್ರೋಗ, ನರರೋಗ, ಯಕೃತ್ತು ಸಮಸ್ಯೆ ಸೇರಿ, ವಿವಿಧ ಗಂಭೀರ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ಅಲ್ಲಿ ಚಿಕಿತ್ಸೆ ಲಭ್ಯವಿರದ ಕಾರಣ ಸಮಸ್ಯೆಯಾಗಿತ್ತು.

ಆಸ್ಪತ್ರೆ ಸ್ವಚ್ಛತೆ: ಕೋವಿಡ್ ಪೀಡಿತರ ಸಂಖ್ಯೆ ಇಳಿಕೆಯಾಗಿರುವುದರಿಂದ ಕೆಲ ದಿನಗಳಿಂದ ವಿಕ್ಟೋರಿಯಾ ಸೇರಿದಂತೆ ನಗರದ ವಿವಿಧ ಆಸ್ಪತ್ರೆಗಳಲ್ಲಿ ಬಹುತೇಕ ಹಾಸಿಗೆಗಳು ಖಾಲಿಯಿವೆ. ವಿಕ್ಟೋರಿಯಾ ಆಸ್ಪತ್ರೆ ಸಂಕೀರ್ಣದಲ್ಲಿ ಕೋವಿಡ್ ಚಿಕಿತ್ಸೆಗೆ 54 ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ ಸೇರಿದಂತೆ 500 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಅವುಗಳಲ್ಲಿ ಸದ್ಯ 447 ಹಾಸಿಗೆಗಳು ಖಾಲಿಯಿವೆ. ಹೀಗಾಗಿ, ವಿಕ್ಟೋರಿಯಾ ಮತ್ತು ಟ್ರಾಮಾ ಕೇರ್‌ನಲ್ಲಿ ಮಾತ್ರ ಕೋವಿಡ್ ಚಿಕಿತ್ಸೆ ಒದಗಿಸಲಾಗುತ್ತಿದೆ. ಪಿಎಂಎಸ್ಎಸ್‌ವೈ ಆಸ್ಪತ್ರೆಯಲ್ಲಿ ಸ್ವಚ್ಛತಾಕಾರ್ಯ ಪ್ರಾರಂಭವಾಗಿದೆ.

‘ಆಸ್ಪತ್ರೆಯನ್ನು ಕೋವಿಡೇತರ ಸೇವೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಆಸ್ಪತ್ರೆ ಎಲ್ಲ ರೀತಿಯಲ್ಲಿಯೂ ಸುರಕ್ಷಿತವಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಕೆಲವೊಂದು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ’ ಎಂದು ವೈದ್ಯರೊಬ್ಬರು ತಿಳಿಸಿದರು.

ಹಂತ ಹಂತವಾಗಿ ಕೋವಿಡೇತರ ಸೇವೆ

ನಗರದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಇಳಿಕೆ ಕಂಡಿರುವ ಕಾರಣ ಕೋವಿಡೇತರ ಚಿಕಿತ್ಸೆಗೆ ಕೂಡ ಈಗ ಆದ್ಯತೆ ನೀಡಲಾಗುತ್ತಿದೆ. ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಕೋವಿಡೇತರ ಸೇವೆಗಳಿಗೆ ಹೆಚ್ಚಿನ ಹಾಸಿಗೆಗಳನ್ನು ಮೀಸಲಿಡಲಾಗುತ್ತಿದೆ. ವಿಕ್ಟೋರಿಯಾ ಮತ್ತು ಬೌರಿಂಗ್‌ನಲ್ಲಿ ಕೋವಿಡ್ ಹಾಗೂ ಕಪ್ಪು ಶಿಲೀಂಧ್ರ ಸೋಂಕಿಗೆ ಹಾಸಿಗೆಗಳನ್ನು ಮೀಸಲಿಡಲಾಗಿದೆ. ಸರ್.ಸಿ.ವಿ ರಾಮನ್ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆ ಮಾತ್ರ ನೀಡಲಾಗುತ್ತಿದೆ.

‘ಕೋವಿಡ್ ಪ್ರಕರಣಗಳು ಇಳಿಕೆಯಾಗಿರುವುದರಿಂದ ಕೋವಿಡೇತರ ಚಿಕಿತ್ಸೆಗೆ ಕೂಡ ಆದ್ಯತೆ ನೀಡಬೇಕಾಗಿದೆ. ಹಾಗಾಗಿ, ಈಗಾಗಲೇ ಕೆಲವು ಆಸ್ಪತ್ರೆಗಳಲ್ಲಿ ಕೋವಿಡ್ ಜತೆಗೆ ಕೋವಿಡೇತರ ಚಿಕಿತ್ಸೆಗಳನ್ನೂ ಪ್ರಾರಂಭಿಸಲಾಗಿದೆ. ಸರ್.ಸಿ.ವಿ. ರಾಮನ್ ಆಸ್ಪತ್ರೆಯಲ್ಲಿ ಕೋವಿಡೇತರ ಸೇವೆ ಪ್ರಾರಂಭಿಸಲು ಆಯುಕ್ತರ ಜತೆಗೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು’ ಎಂದು ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

ನಿಧನ ವಾರ್ತೆ

ಪಿ.ಕೃಷ್ಣಪ್ಪ



ಬೆಂಗಳೂರು: ಕರ್ನಾಟಕ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾಗಿದ್ದ ಮಾರೇನಹಳ್ಳಿಯ ಪಿ.ಕೃಷ್ಣಪ್ಪ (65) ಅವರು ಸ್ವಗೃಹದಲ್ಲಿ ಮಂಗಳವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಎಚ್‌ಎಎಲ್‌ನ ನಿವೃತ್ತ ಉದ್ಯೋಗಿಯಾಗಿರುವ ಅವರಿಗೆ ಪತ್ನಿ ಮತ್ತು ಇಬ್ಬರು ಗಂಡುಮಕ್ಕಳು ಇದ್ದಾರೆ. ಮೃತರ ಅಂತ್ಯಕ್ರಿಯೆಯು ಸುಮ್ಮನಹಳ್ಳಿಯ ಚಿತಾಗಾರದಲ್ಲಿ ಇದೇ 30ರಂದು (ಬುಧವಾರ) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಸಂಪರ್ಕ: 9845181827

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೋವಿಡ್‌ನಿಂದ ಪ್ರೀತಿ ಪಾತ್ರರನ್ನು ಕಳೆದುಕೊಂಡವರಿಗೆ ನೆರವಿನ ಹಸ್ತ ಚಾಚಿದ ರೋಟರಿ

13 ಕುಟುಂಬಗಳಿಗೆ ತಲಾ ₹50 ಸಾವಿರ ನೆರವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನೆರವಿಗಾಗಿ ಅರ್ಜಿ ಸಲ್ಲಿಸಿದ 201 ಮಂದಿ
- ರೋಟರಿಯ ಸಮಾಜಮುಖಿ ಕಾರ್ಯಗಳಿಗೆ ಶ್ಲಾಘನೆ
- ಮುಂದೆಯೂ 'ಪ್ರಜಾವಾಣಿ'ಯಿಂದ ಸಹಯೋಗ

ಬೆಂಗಳೂರು: ಕೋವಿಡ್‌ನಿಂದಾಗಿ ಪ್ರೀತಿ ಪಾತ್ರರನ್ನು ಕಳೆದುಕೊಂಡಿದ್ದ 13 ಕುಟುಂಬಗಳಿಗೆ ರೋಟರಿ ಡಿಸ್ಟ್ರಿಕ್ಟ್ 3190 ನೆರವಿನ ಹಸ್ತ ಚಾಚಿದೆ.

ರೋಟರಿ ಬೆಂಗಳೂರು ಲೇಕ್‌ಸೈಡ್, ರೋಟರಿ ಬೆಂಗಳೂರು ಸೌತ್ ಈಸ್ಟ್, ರೋಟರಿ ಬೆಂಗಳೂರು ಸ್ಪಂದನ ಮತ್ತು ರೋಟರಿ ಬೆಂಗಳೂರು ಮಾನ್ಯತಾ ಹಾಗೂ 'ಪ್ರಜಾವಾಣಿ' ಸಹಯೋಗದಲ್ಲಿ ಮಂಗಳವಾರ ಆನ್‌ಲೈನ್ ಮೂಲಕ ನಡೆದ 'ಗುರುದಕ್ಷಿಣೆ' ಕಾರ್ಯಕ್ರಮದಲ್ಲಿ 13 ಶಿಕ್ಷಕರ ಕುಟುಂಬಗಳಿಗೆ ತಲಾ ₹50 ಸಾವಿರ ನೆರವು ಪ್ರಕಟಿಸಲಾಯಿತು.

'ನೆರವಿಗಾಗಿ ಒಟ್ಟು 201 ಮಂದಿ ಅರ್ಜಿ ಸಲ್ಲಿಸಿದ್ದರು. ಈ ಪೈಕಿ 13 ಮಂದಿಯ ಹೆಸರನ್ನು ಅಂತಿಮಗೊಳಿಸಲಾಯಿತು. ಶಾಲಾ ಹಾಗೂ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವವರು, ಸಂಗೀತ, ಯೋಗ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು' ಎಂದು ರೋಟೇರಿಯನ್ ಶ್ರೀಧರ್ ರಾಮಮೂರ್ತಿ ತಿಳಿಸಿದರು.

ಬೆಂಗಳೂರಿನ ಟಿ.ದಾಸರಹಳ್ಳಿ ನಿವಾಸಿಯಾಗಿದ್ದ ಎಸ್.ಜಿ.ರಂಗಮ್ಮ ಕೋವಿಡ್‌ನಿಂದಾಗಿ ಮೇ 6ರಂದು ಅಸುನೀಗಿದ್ದರು. ಅವರು ಸೇಂಟ್ ಮೇರಿಸ್ ಕಾನ್ವೆಂಟ್‌ನಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಅವರ ದುಡಿಮೆಯ ಹಣದಿಂದಲೇ ಮೂವರ ಬದುಕು ಸಾಗುತ್ತಿತ್ತು. ರಂಗಮ್ಮ ನಿಧನದಿಂದಾಗಿ ಅವರ ಮಗ ಪವನ್ ಕಂಗಾಲಾಗಿದ್ದರು. ಇದನ್ನು ಅರಿತ ರೋಟರಿ ಸಂಸ್ಥೆಯು ಪವನ್ ಹಾಗೂ ಅವರ ತಂಗಿಯ ಶಿಕ್ಷಣಕ್ಕಾಗಿ ಹಣಕಾಸಿನ ನೆರವು ಒದಗಿಸಿದೆ.

ಜಯನಗರ 4ನೇ ಹಂತದ ನಿವಾಸಿ ಎನ್. ಶ್ವೇತಾ, ಕೋರಮಂಗಲದ ಮುತ್ತುರಾಜ, ಮೂಡಲಗಿಯ ವಿವೇಕ್ ತೋಡಕರ್, ಕೊಟ್ಟೂರಿನ ವಿ.ಮೀನಾಕ್ಷಿ, ಬೆಳಗಾವಿ ಜಿಲ್ಲೆ ವಡಗಾಂವ್‌ನ ಶಶಿಕಾಂತ್ ಪಿ.ಪಾಟೀಲ, ಜಿ.ಎಲ್. ಗೌರಿ, ಕಲಬುರ್ಗಿಯ ನಂದಾ, ನಂದಿನಿ ಕುಮಾರಿ ಜಿ.ಎಸ್., ನಿರ್ಮಲಾ, ಜಯಲಕ್ಷ್ಮಿ, ಪೊರ್ಕೊಡಿ ಕೆ., ರಾಘವೇಂದ್ರ ರಾವ್ ಅವರಿಗೂ ನೆರವು ಲಭಿಸಿದೆ.

ಶಿಕ್ಷಣ ಸಚಿವ ಸುರೇಶ್ ಕುಮಾರ್, 'ರೋಟರಿ ಕ್ಲಬ್ ಆಯೋಜಿಸಿರುವ ಈ ಕಾರ್ಯಕ್ರಮ ಪ್ರಸ್ತುತವಾದುದು. ಇಂದಿನ ಪರಿಸ್ಥಿತಿಗೆ ಅತ್ಯಗತ್ಯವೂ ಆಗಿತ್ತು. ಕೋವಿಡ್‌ನಿಂದ ಖಾಸಗಿ ಅನುದಾನ ರಹಿತ ಶಾಲೆಯ ಶಿಕ್ಷಕರು ಹೆಚ್ಚು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆಲಸವಿಲ್ಲದೆ ಅನೇಕರು ತರಕಾರಿ ಮಾರಲು ಮುಂದಾಗಿದ್ದಾರೆ. ಕೆಲವರು ನರೇಗಾ ಕೂಲಿ ಕೆಲಸ ಮಾಡಿ ಬದುಕು ಸಾಗಿಸುತ್ತಿದ್ದಾರೆ. ರೋಟರಿ, ಸಮಾಜಮುಖಿ ಚಿಂತನೆಗಳಿಂದ ಕೂಡಿರುವ ಸಂಸ್ಥೆ. ಈ ಸಂಸ್ಥೆಯ ಕಾರ್ಯ ಶ್ಲಾಘನೀಯ ಹಾಗೂ ಮಾದರಿಯಾದುದು. ಈ ಕಾರ್ಯದಲ್ಲಿ ರೋಟರಿ ಜೊತೆ ಸದಾ ಇರುತ್ತೇನೆ. ನಾವೆಲ್ಲಾ ಒಟ್ಟುಗೂಡಿ ಶಿಕ್ಷಕರ ಕಣ್ಣೀರು ಒರೆಸೋಣ' ಎಂದರು.

'ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, 'ರೋಟರಿ ಸಂಸ್ಥೆಯ ಕಾರ್ಯಕ್ಕೆ ನಮ್ಮ ಸಹಕಾರ ಸದಾ ಇರುತ್ತದೆ. ಮುಂದಿನ ದಿನಗಳಲ್ಲಿ ರಾಜ್ಯದ ಮತ್ತಷ್ಟು ಶಿಕ್ಷಕರಿಗೆ ಸಹಾಯ ಮಾಡಲು ಪ್ರಯತ್ನಿಸೋಣ' ಎಂದು ಹೇಳಿದರು.

ಶಿಕ್ಷಣ ತಜ್ಞ ಗುರುರಾಜ ಕರಜಗಿ, 'ಕೋವಿಡ್‌ನಿಂದಾಗಿ ಜನರ ಬದುಕು ದುಸ್ತರವಾಗಿದೆ. ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ. ಕಷ್ಟದಲ್ಲಿರುವ ಶಿಕ್ಷಕರ ಜೊತೆ ನಾವಿದ್ದೇವೆ ಎಂಬ ಸಂದೇಶವನ್ನು ರೋಟರಿ ಸಂಸ್ಥೆ ನೀಡಿದೆ' ಎಂದರು.

ರೋಟರಿ ಡಿಸ್ಟ್ರಿಕ್ಟ್ 3190 ಜಿಲ್ಲಾ ಗವರ್ನರ್ ನಾಗೇಂದ್ರ ಪ್ರಸಾದ್, ರೋಟೇರಿಯನ್‌ಗಳಾದ ಪ್ರೊ. ನಯನಾ ತಾರಾ, ಕೆ.ಆರ್.ಶ್ರೀನಿವಾಸ್, ಕೆ.ಪುರುಷೋತ್ತಮ ಅಡಿಗ, ಪಿ.ವಿ.ರಾವ್ ಇದ್ದರು.



ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ನಗರದಲ್ಲಿ ಹಮ್ಮಿಕೊಂಡಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಪಿ.ವಿ. ನಾರಾಯಣ, ಪ್ರತಿಷ್ಠಾನದ ಗೌರವಾಧ್ಯಕ್ಷ ಪ್ರೊ.ಎಂ.ಎಚ್. ಕೃಷ್ಣಯ್ಯ, ಆರ್. ಲಕ್ಷ್ಮೀನಾರಾಯಣ, ಬೈರಮಂಗಲ ರಾಮೇಗೌಡ, ಎಚ್.ಎಸ್.ಎಂ. ಪ್ರಕಾಶ್ ಮತ್ತಿತರರು ಪ್ರೊ.ಜಿ. ವೆಂಕಟಸುಬ್ಬಯ್ಯ, ಎಚ್.ಎಸ್. ದೊರೆಸ್ವಾಮಿ, ಸಿದ್ಧಲಿಂಗಯ್ಯ, ಜರಗನಹಳ್ಳಿ ಶಿವಶಂಕರ್, ಪ್ರೊ.ಬಿ.ಎಸ್. ಸಣ್ಣಯ್ಯ ಹಾಗೂ ಕೋ.ವೆಂ. ರಾಮಕೃಷ್ಣೇಗೌಡ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಅಗಲಿದ ಚೇತನಗಳಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ನುಡಿನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ನಿಧನರಾದ ನಿಘಂಟು ತಜ್ಞ ಪ್ರೊ.ಜಿ. ವೆಂಕಟಸುಬ್ಬಯ್ಯ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಕವಿ ಸಿದ್ಧಲಿಂಗಯ್ಯ, ಜರಗನಹಳ್ಳಿ ಶಿವಶಂಕರ್, ಸಂಶೋಧಕ ಪ್ರೊ.ಬಿ.ಎಸ್. ಸಣ್ಣಯ್ಯ ಹಾಗೂ ಲೇಖಕ ಕೋ.ವೆಂ. ರಾಮಕೃಷ್ಣೇಗೌಡ ಅವರ ಜೀವನದ ಹಾದಿ, ಸಾಮಾಜಿಕ ಹೋರಾಟ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಮೆಲುಕು ಹಾಕಲಾಯಿತು.

ಇದಕ್ಕೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ವೇದಿಕೆ ಕಲ್ಪಿಸಿತ್ತು. ನಗರದಲ್ಲಿ ಪ್ರತಿಷ್ಠಾನ ಮಂಗಳವಾರ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಅಗಲಿದ ಗಣ್ಯರಿಗೆ ಒಡನಾಡಿಗಳು ಹಾಗೂ ಆಪ್ತರು ನುಡಿನಮನ ಸಲ್ಲಿಸಿದರು. ಎಲ್. ಹನುಮಂತಯ್ಯ, ಪಿ.ವಿ. ನಾರಾಯಣ, ವಿಜಯಾ ಸುಬ್ಬರಾಜ್, ನಳಿನಿ ವೆಂಕಟೇಶ್, ಪದ್ಮಿನಿ ನಾಗರಾಜು, ಎಚ್.ಎಸ್.ಎಂ. ಪ್ರಕಾಶ್, ಬೈರಮಂಗಲ ರಾಮೇಗೌಡ, ಪ್ರೊ. ಶಾಂತರಾಜು, ಬಿ.ಆರ್. ರವೀಂದ್ರನಾಥ್ ನೆನಪಿನ ಪುಟಗಳನ್ನು ತಿರುವಿ ಹಾಕಿದರು.

ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ, 'ವೆಂಕಟಸುಬ್ಬಯ್ಯ ಅವರು ಅತ್ಯಂತ ಸಂಯಮದಿಂದ ತಮ್ಮ ಕೆಲಸ ಮಾಡುತ್ತಿದ್ದರು. ಕನ್ನಡ ನಿಘಂಟಿಗೆ ದೊಡ್ಡ ಸೇವೆ ಅವರಿಂದ ಸಂದಿದೆ. ದೊರೆಸ್ವಾಮಿ ಅವರು ಎಲ್ಲ ಜನಪರ ಚಳವಳಿಯಲ್ಲಿ ದೊಡ್ಡ ಧ್ವನಿಯಾಗಿ ನಮ್ಮ ಮುಂದೆ ಇದ್ದರು. ಸಿದ್ಧಲಿಂಗಯ್ಯ ಅವರು ಜನರ ನಡುವೆ ಇದ್ದು, ಸಾಹಿತ್ಯ ಸೃಷ್ಟಿಸಿದರು. ಹೀಗಾಗಿ, ಜನಪರ ಕವಿಯಾಗಿ ಗುರುತಿಸಲ್ಪಟ್ಟರು' ಎಂದರು.

'ಹನಿ ಕವಿತೆಯನ್ನು ಜರಗನಹಳ್ಳಿ ಶಿವಶಂಕರ್ ಅವರಷ್ಟು ಪರಿಣಾಮಕಾರಿಯಾಗಿ ಬರೆಯುವವರು ಕಡಿಮೆ. ಆಳವಾದ ವಿಷಯ ಮತ್ತು ಜೀವನ ಪ್ರೀತಿ ಹನಿ ಕವಿತೆಯಲ್ಲಿ ಇರುತ್ತಿತ್ತು. ರಾಮಕೃಷ್ಣೇಗೌಡ ಅವರು ಜೀವ ಪರವಾದ ವ್ಯಕ್ತಿಯಾಗಿದ್ದರು' ಎಂದರು.

ಸಾಹಿತಿ ಪಿ.ವಿ. ನಾರಾಯಣ, 'ವೆಂಕಟಸುಬ್ಬಯ್ಯ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರು ಅಚ್ಚಳಿಯದ ಕೊಡುಗೆ ನೀಡಿದ್ದಾರೆ. ದೊರೆಸ್ವಾಮಿ ಅವರು ಜೀವನದುದ್ದಕ್ಕೂ ಚಳವಳಿಯಲ್ಲಿ ತೊಡಗಿದ್ದರು. ಸಿದ್ಧಲಿಂಗಯ್ಯ ತಮ್ಮ ಸಾಹಿತ್ಯದ ಮೂಲಕ ಹೋರಾಟಕ್ಕೆ ಪ್ರೇರಣೆ ನೀಡಿದರು. ಜರಗನಹಳ್ಳಿ ಶಿವಶಂಕರ್ ಹನಿಗವನಗಳು ತುಂಬಾ ಪರಿಣಾಮಕಾರಿಯಾಗಿದ್ದವು' ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ, 'ವೆಂಕಟಸುಬ್ಬಯ್ಯ ಅವರು ಪ್ರಾಚೀನ ಸಾಹಿತ್ಯದ ಜತೆಗೆ ಹೊಸಗನ್ನಡ ಸಾಹಿತ್ಯವನ್ನೂ ವಿಶ್ಲೇಷಣೆಗೆ ಒಳಪಡಿಸುತ್ತಿದ್ದರು. ದೊರೆಸ್ವಾಮಿ ಈ ಸಮಾಜದ ಸಾಕ್ಷಿ ಪ್ರಜ್ಞೆಯಂತಿದ್ದರು' ಎಂದು ತಿಳಿಸಿದರು.

ಬನ್ನೇರುಘಟ್ಟ: ನಾಳೆಯಿಂದ ವೀಕ್ಷಣೆಗೆ ಲಭ್ಯ

ಆನೇಕಲ್: ಲಾಕ್‌ಡೌನ್ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ ಸಾರ್ವಜನಿಕ ವೀಕ್ಷಣೆಗೆ ನಿರ್ಬಂಧ ಹೇರಲಾಗಿತ್ತು. ಇದನ್ನು ತೆರವುಗೊಳಿಸಿ ಜುಲೈ 1ರಿಂದ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗುವುದು ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಹಣಾಧಿಕಾರಿ ವನಶ್ರೀ ವಿಪಿನ್ ಸಿಂಗ್ ಅವರು ತಿಳಿಸಿದರು.

ಸರ್ಕಾರದ ಮಾರ್ಗಸೂಚಿಯಂತೆ ಪ್ರವೇಶ ನೀಡಲಾಗುವುದು. ಶೇ50ರಷ್ಟು ಮಂದಿಗೆ ಮಾತ್ರ ಉದ್ಯಾನ ವೀಕ್ಷಣೆಗೆ ಅವಕಾಶ ನೀಡಲಾಗುವುದು. ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಕಡ್ಡಾಯ. ಪ್ರವೇಶಕ್ಕೆ ಆನ್‌ಲೈನ್‌ನಲ್ಲಿಯೂ ಟಿಕೆಟ್ ಪಡೆಯಲು ಅವಕಾಶವಿದೆ ಎಂದು ಅವರು ತಿಳಿಸಿದರು.

ಮಹಾರಾಷ್ಟ್ರ ಗಡಿ ಉದ್ದಕ್ಕೂ ಕಣ್ಗಾವಲು

ಒಂದನೇ ಪುಟದಿಂದ...

- ಗಡಿ ಜಿಲ್ಲೆಗಳಾದ ಬೆಳಗಾವಿ, ಬೀದರ್, ವಿಜಯಪುರ ಮತ್ತು ಕಲಬುರ್ಗಿ ಜಿಲ್ಲೆಗಳ ಮೂಲಕ ರಾಜ್ಯಕ್ಕೆ ಪ್ರವೇಶಿಸುವ ವಾಹನಗಳ ಚಾಲಕರು, ಸಹಾಯಕರು, ಪ್ರಯಾಣಿಕರು ನೆಗೆಟಿವ್ ಪರೀಕ್ಷಾ ವರದಿ ಅಥವಾ ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣ ಪತ್ರ ಪರಿಶೀಲಿಸಲು ಚೆಕ್ ಪೋಸ್ಟ್‌ಗಳಲ್ಲಿ ಅಗತ್ಯ ಸಿಬ್ಬಂದಿಯನ್ನು ಜಿಲ್ಲಾಧಿಕಾರಿಗಳು ನಿಯೋಜಿಸಬೇಕು.

1 ರಾಜ್ಯಕ್ಕೆ ಅಲ್ಪಾವಧಿಗೆ ಬರುವವರು ಮತ್ತು ವಿದ್ಯಾರ್ಥಿಗಳಿಗೂ ಮೇಲಿನ ನಿಯಮ ಅನ್ವಯವಾಗುತ್ತದೆ.

- ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣ ಪತ್ರ ಹೊಂದಿರುವವರು ಆರ್‌ಟಿಪಿಸಿಆರ್ ನೆಗೆಟಿವ್ ಟೆಸ್ಟ್ ವರದಿ ತರಬೇಕಾಗಿಲ್ಲ.
- ಎರಡು ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ಈ ನಿಯಮಗಳಿಂದ ವಿನಾಯ್ತಿ ನೀಡಲಾಗಿದೆ.
- ಮರಣ ಮತ್ತು ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ಬರುವವರಿಗೆ ಗಂಟಲ ದ್ರವ ಮಾದರಿಯನ್ನು ರಾಜ್ಯದಲ್ಲಿ ಸಂಗ್ರಹಿಸಿ, ಕೋವಿಡ್ ಶಿಷ್ಟಾಚಾರವನ್ನು ಪಾಲಿಸಬೇಕು.

ಸಂಧಾನ ಸಭೆಯಲ್ಲಿ ನಿರ್ಧಾರ– ಬುಧವಾರ ಅಧಿಕೃತ ಪ್ರಕಟಣೆ ಸಾಧ್ಯತೆ

ಜನವರಿಗೆ ನಲಪಾಡ್ ಯುವ ಕಾಂಗ್ರೆಸ್ ಅಧ್ಯಕ್ಷ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022ರ ಜನವರಿಯಿಂದ ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನವನ್ನು ಶಾಸಕ ಎನ್.ಎ. ಹ್ಯಾರಿಸ್ ಅವರ ಮಗ ಮೊಹಮ್ಮದ್ ನಲಪಾಡ್ ಅವರಿಗೆ ನೀಡಲು ಮಂಗಳವಾರ ರಾತ್ರಿ ನಡೆದ ಸಂಧಾನ ಸಭೆಯಲ್ಲಿ ನಿರ್ಧರಿಸಿದ್ದು, ಬುಧವಾರ ಅಧಿಕೃತ ಘೋಷಣೆ ಹೊರಬೀಳುವ ಸಾಧ್ಯತೆ ಇದೆ.



ಫೆಬ್ರುವರಿಯಲ್ಲಿ ನಡೆದ ಯುವ ಕಾಂಗ್ರೆಸ್ ಸಮಿತಿ ಚುನಾವಣೆಯಲ್ಲಿ ಮೊಹಮ್ಮದ್ ನಲಪಾಡ್ ಅತ್ಯಧಿಕ ಮತ ಗಳಿಸಿದ್ದರು. ಆದರೆ, ಅವರನ್ನು ಅನರ್ಹಗೊಳಿಸಿ ಎರಡನೇ ಸ್ಥಾನದಲ್ಲಿದ್ದ ರಕ್ಷಾ ರಾಮಯ್ಯ ಅವರನ್ನು ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನಾಗಿ ಘೋಷಿಸಲಾಗಿತ್ತು.

ರಕ್ಷಾ ಆಯ್ಕೆಯನ್ನು ಪ್ರಶ್ನಿಸಿ ನಲಪಾಡ್ ಕಾಂಗ್ರೆಸ್ ಹೈಕಮಾಂಡ್ ಹಾಗೂ ಯುವ ಕಾಂಗ್ರೆಸ್ ಸಮಿತಿ ಚುನಾವಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಉಪಸ್ಥಿತಿಯಲ್ಲಿ ಮಂಗಳವಾರ ರಾತ್ರಿ ಕೆಪಿಸಿಸಿ ಕಚೇರಿಯಲ್ಲಿ ಇಬ್ಬರ ನಡುವೆ ಸಂಧಾನ ಸಭೆ ನಡೆಸಲಾಯಿತು.

'ಇಬ್ಬರಿಗೂ ತಲಾ 18 ತಿಂಗಳ ಕಾಲ ಅಧ್ಯಕ್ಷ ಸ್ಥಾನ ನೀಡುವಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸಲಹೆ ನೀಡಿದ್ದರು. ಬಿ.ವಿ. ಶ್ರೀನಿವಾಸ್ ಕೂಡ ಈ ಕುರಿತು ಸಿದ್ದರಾಮಯ್ಯ ಜತೆ ಚರ್ಚಿಸಿದ್ದರು. ಆದರೆ, ಚುನಾವಣಾ ಪ್ರಕ್ರಿಯೆಯಲ್ಲಿ ಅತ್ಯಧಿಕ ಮತ ಪಡೆದಿರುವುದರಿಂದ ತನಗೇ ಹುದ್ದೆ ನೀಡುವಂತೆ ನಲಪಾಡ್ ಪಟ್ಟು ಹಿಡಿದರು. ಅವರ ಒತ್ತಾಯಕ್ಕೆ ಮಣಿದು ಜನವರಿಯಿಂದ ಹುದ್ದೆ ನೀಡಲು ತೀರ್ಮಾನಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಈಗ ಅಧ್ಯಕ್ಷರಾಗಿರುವ ರಕ್ಷಾ ರಾಮಯ್ಯ ಅವರನ್ನು ಡಿಸೆಂಬರ್ ಅಂತ್ಯದವರೆಗೂ ಹುದ್ದೆಯಲ್ಲಿ ಮುಂದುವರಿಸಲಾಗುತ್ತದೆ. ನಂತರದ ಅವಧಿಯನ್ನು ಮೊಹಮ್ಮದ್ ನಲಪಾಡ್ ಅವರಿಗೆ ನೀಡಲಾಗುತ್ತದೆ. ಪಕ್ಷದ ಮುಖಂಡರು ಬುಧವಾರ ಅಧಿಕೃತವಾಗಿ ಈ ವಿಷಯವನ್ನು ಪ್ರಕಟಿಸಲಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಮಂಗಳವಾರ ರಾತ್ರಿಯವರೆಗೂ ಕೆಪಿಸಿಸಿ ಕಚೇರಿಯಲ್ಲಿ ಸಂಧಾನ ಸಭೆ ನಡೆದಿತ್ತು. ಸಭೆ ಕೊನೆಯ ಹಂತದಲ್ಲಿ ಇರುವಾಗಲೇ ರಕ್ಷಾ ರಾಮಯ್ಯ ಹೊರ ನಡೆದರು. ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ಅವರು ನಿರಾಕರಿಸಿದರು.

ಸ್ತ್ರೀ ಶಕ್ತಿ ಸಂಘಗಳಿಗೆ ಲಾಭಾಂಶ ವಿತರಣೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವತಿಯಿಂದ ಸ್ತ್ರೀ ಶಕ್ತಿ ಸಂಘಗಳಿಗೆ ಲಾಭಾಂಶ ವಿತರಣಾ ಕಾರ್ಯಕ್ರಮ ನೆಲಮಂಗಲ ತಾಲ್ಲೂಕಿನ ನರಸೀಪುರದಲ್ಲಿ ಇತ್ತೀಚೆಗೆ ನಡೆಯಿತು.

ನರಸೀಪುರ ವಲಯದಲ್ಲಿ 70 ಸ್ತ್ರೀ ಶಕ್ತಿ ಸಂಘಗಳಿದ್ದು, ಅವುಗಳಲ್ಲಿ ಲಾಭದತ್ತ ಸಾಗಿರುವ ಆಯ್ದ ಕೆಲ ಸಂಘಗಳಿಗೆ ₹3.20 ಲಕ್ಷ ಲಾಭಾಂಶ ವಿತರಿಸಲಾಯಿತು. ಮಲ್ಲಿಗೆ, ಕಾವೇರಿ ಸಂಘಗಳು ₹21 ಸಾವಿರಕ್ಕೂ ಅಧಿಕ ಲಾಭಾಂಶ ಪಡೆದುಕೊಂಡವು.



ಸಂಘದ ಪದಾಧಿಕಾರಿಗಳಿಗೆ ಲಾಭಾಂಶ ಹಣ ವಿತರಿಸಲಾಯಿತು

ದಾಬಸ್ ಪೇಟೆ ವಲಯ ಮೇಲ್ವಿಚಾರಕ ಮಂಜುನಾಥ್, ನರಸೀಪುರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಶಶಿಕುಮಾರ್, ಸೇವಾ ಪ್ರತಿನಿಧಿ ರಾಜಣ್ಣ, ನರಸೀಪುರ ವಲಯ ಅಧ್ಯಕ್ಷ ರಮೇಶ್, ಉಪಾಧ್ಯಕ್ಷ ರಘುನಂದನ್ ಹಾಗೂ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

'ಪಕ್ಷದ ವೇದಿಕೆಯಲ್ಲಷ್ಟೇ ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷಕ್ಕೆ ಸಂಬಂಧಿಸಿದಂತೆ ಸದ್ಯ ಯಾವುದೇ ಗೊಂದಲಗಳೂ ಇಲ್ಲ. ಯಾವುದೇ ವಿಚಾರ ಇದ್ದರೂ ಪಕ್ಷದ ವೇದಿಕೆಯಲ್ಲಷ್ಟೇ ಚರ್ಚಿಸುವೆ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಮಂಗಳವಾರ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲಿ ಜಗಳವಿಲ್ಲ. ಎಲ್ಲವನ್ನೂ ಮಾಧ್ಯಮದವರೇ ಸೃಷ್ಟಿ ಮಾಡುತ್ತಿದ್ದೀರಿ. ಏನೇ ಇದ್ದರೂ ನಿಮಗೆ ಹೇಳಲು ಆಗುವುದಿಲ್ಲ. ಯಾವುದೇ ವಿಚಾರಕ್ಕೂ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಎಲ್ಲಿ ಹೇಳಬೇಕೋ ಅಲ್ಲಿ ಮಾತ್ರ ಹೇಳುವೆ' ಎಂದರು.



ಸಿದ್ದರಾಮಯ್ಯ

ಕಾಂಗ್ರೆಸ್‌ನಲ್ಲಿ ಸಮನ್ವಯ ಇಲ್ಲ ಎಂದು ಹೇಳಿದವರು ಯಾರು? ಸಮನ್ವಯ ಸಮಿತಿ ರಚಿಸಿದರೆ ಪಕ್ಷದ ವರಿಷ್ಠರು ಮಾಧ್ಯಮಗಳಿಗೆ ಮಾಹಿತಿ ಕೊಡುತ್ತಾರೆ. ಹೈಕಮಾಂಡ್ ಭೇಟಿಗೆ ಕೆಲವು ನಾಯಕರು ದೆಹಲಿಗೆ ತೆರಳಿದ್ದಾರೆ ಎಂಬುದರ ಕುರಿತು ತಮಗೆ ಯಾವುದೇ ಮಾಹಿತಿ ಇಲ್ಲ. ಸದ್ಯಕ್ಕೆ ತಾವು ದೆಹಲಿಗೆ ತೆರಳುವುದಿಲ್ಲ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

ಕೆಪಿಸಿಸಿ ಪದಾಧಿಕಾರಿಗಳ ನೇಮಕ ಬಾಕಿ ಇತ್ತು. ಪದಾಧಿಕಾರಿಗಳ ಕೆಲಸವನ್ನು ಕಾರ್ಯಾಧ್ಯಕ್ಷರೇ ಮಾಡುತ್ತಿದ್ದು, ಈಗ ಆ ನೇಮಕಕ್ಕೆ ಮುಂದಾಗಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಸಾಂತ್ವನ ಹೇಳಲು ಪ್ರವಾಸ: 'ಕೋವಿಡ್‌ನಿಂದ ಮೃತಪಟ್ಟವರ ಮನೆಗಳಿಗೆ ಭೇಟಿನೀಡಿ ಸಾಂತ್ವನ ಹೇಳುವಂತೆ ಎಐಸಿಸಿ ಸೂಚನೆ ನೀಡಿದೆ. ಅದರಂತೆ ತಿಂಗಳಿಡೀ ಸಾಂತ್ವನ ಹೇಳುವ ಕೆಲಸ ಮಾಡಲಾಗುವುದು. ಕೋವಿಡ್‌ನಿಂದ ತಮ್ಮವರನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ಸಾಂತ್ವನ ಹೇಳಿ, ಧೈರ್ಯ ತುಂಬುವ ಕೆಲಸ ಮಾಡಲಾಗುವುದು' ಎಂದರು.

ಸೆಪ್ಟೆಂಬರ್‌ನಲ್ಲಿ ಕೋವಿಡ್ ಮೂರನೇ ಅಲೆ ಬರಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಅದನ್ನು ಎದುರಿಸಲು ರಾಜ್ಯ ಸರ್ಕಾರ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

'ಸಾಲ ಮಾಡಿರುವುದೇ ಬಿಜೆಪಿ ಸರ್ಕಾರದ ಸಾಧನೆ'

ಬೆಂಗಳೂರು: 'ಪೆಟ್ರೋಲ್ ಬೆಲೆ ಏರಿಕೆಗೆ ಯುಪಿಎ ಸರ್ಕಾರ ಕಾರಣ ಎಂಬ ಬಿಜೆಪಿಯ ಆರೋಪ ಸತ್ಯಕ್ಕೆ ದೂರವಾದದ್ದು. ಕೇಂದ್ರ ಸರ್ಕಾರ ತನ್ನ ವೈಫಲ್ಯ ಮರೆ ಮಾಚಲು ಕಾಂಗ್ರೆಸ್ ವಿರುದ್ಧ ಸುಳ್ಳು ಆರೋಪ ಮಾಡುತ್ತಿದೆ' ಎಂದು ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'70 ವರ್ಷದಲ್ಲಿ ಕಾಂಗ್ರೆಸ್ ಮಾಡಿದ ಸಾಲವನ್ನು ಕೇವಲ ಏಳು ವರ್ಷಗಳಲ್ಲಿ ಮಾಡಿರುವುದೇ ಮೋದಿ ಸರ್ಕಾರದ ನಿಜವಾದ ಸಾಧನೆ' ಎಂದರು.

'ಇತ್ತೀಚೆಗೆ ಕೇಂದ್ರ ಸರ್ಕಾರದ ಪೆಟ್ರೋಲಿಯಂ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರು ಪೆಟ್ರೋಲ್ ಬೆಲೆ ಏರಿಕೆಗೆ ಬಿಜೆಪಿ ಸರ್ಕಾರ ಕಾರಣವಲ್ಲ, ಈ ಹಿಂದಿನ ಯುಪಿಎ ಸರ್ಕಾರ ಕಾರಣ ಎಂದು ಆರೋಪಿಸಿದ್ದಾರೆ. ಬಿಜೆಪಿಯ ಈ ಆರೋಪ ಸತ್ಯಕ್ಕೆ ದೂರವಾದುದ್ದು' ಎಂದರು.

'ಕಚ್ಚಾ ತೈಲಬೆಲೆ ಆಧಾರದ ಮೇಲೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿಗದಿ ಪ್ರಕ್ರಿಯೆ ಯುಪಿಎ ಸರ್ಕಾರದಿಂದಲೇ ಆರಂಭವಾಗಿದೆ. 2014ರಲ್ಲಿ ಪೆಟ್ರೋಲ್ ಮೇಲೆ ಆಗಿನ ಸರ್ಕಾರ ಶೇ 9.84ರಷ್ಟು ತೆರಿಗೆ ಹಾಕಿತ್ತು. ಈಗ ಶೇ 31.90ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಡೀಸೆಲ್ ಮೇಲಿನ ತೆರಿಗೆ ಹತ್ತು ಪಟ್ಟು ಹೆಚ್ಚಾಗಿದೆ. ಆದರೆ, ಈಗಿನ ದರ ಏರಿಕೆಗೆ ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ' ಎಂದು ದೂರಿದರು.

ವೈದ್ಯಕೀಯ ಉಪಕರಣ ಖರೀದಿ: ಕಾಂಗ್ರೆಸ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆಗಾಗಿ ವೈದ್ಯಕೀಯ ಉಪಕರಣಗಳ ಖರೀದಿಯ ವಿಧಾನ ಮತ್ತು ಹಣದ ನಿಗದಿಯಲ್ಲಿ ಹಲವು ಸಂಶಯಗಳಿವೆ ಎಂದು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ತಕರಾರು ಎತ್ತಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ನಡೆದ ಸಮಿತಿಯ ಸಭೆಯಲ್ಲಿ ಈ ಸಂಬಂಧ ಕೆಲವು ಪ್ರಶ್ನೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಅವುಗಳಿಗೆ ಉತ್ತರ ನೀಡಬೇಕು ಎಂದು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದ್ದಾರೆ.

ಕೆಲವು ಪ್ರಶ್ನೆಗಳು ಹೀಗಿವೆ–

- ರಕ್ತ ಪರೀಕ್ಷೆ ಸಾಧನವನ್ನು (ಹೆಮಟಲಾಜಿ ಸೆಲ್ ಕೌಂಟ್ಸ್) ರಾಜ್ಯ ಸರ್ಕಾರ ಪ್ರತಿ ಯೂನಿಟ್‌ಗೆ ₹2,96,180 ನೀಡಿ 1.195 ಯೂನಿಟ್‌ಗಳನ್ನು ಖರೀದಿಸಿದೆ. ಆದರೆ, ಇದೇ ಯೂನಿಟ್‌ಗೆ ಹಿಮಾಚಲಪ್ರದೇಶ ರಾಜ್ಯವು ಕೇವಲ ₹1.30 ಲಕ್ಷ ನೀಡಿ ಖರೀದಿಸಿದೆ. ಈ ವ್ಯತ್ಯಾಸ ₹25 ಕೋಟಿಗೂ ಅಧಿಕವಾಗಿದೆ.
- ರಾಜ್ಯ ಸರ್ಕಾರವು ಮೆ: ಸಿಸ್ಮೆಕ್ ಕಾರ್ಪೊರೇಷನ್ ಲಿ.ರವರಿಂದ ಹೆಮಟಲಾಜಿ ಸೆಲ್ ಕೌಂಟ್ಸ್ ಪ್ರತಿ ಯುನಿಟ್‌ಗೆ ₹8,35,000 ನೀಡಿ 165 ಯುನಿಟ್‌ಗಳನ್ನು ಖರೀದಿಸಿದೆ. ಆದರೆ, ಇದೇ ಸಾಧನವನ್ನು ಕೇರಳ ಕೇವಲ ₹4,60,200 ನೀಡಿ ಖರೀದಿಸಿದೆ. ಇದರ ವ್ಯತ್ಯಾಸ ₹6.18 ಕೋಟಿ ಆಗಿದೆ.
- ಮೊದಲ ಬಾರಿಗೆ ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್ ಕಿಟ್ ಖರೀದಿಸಲು ಆಹ್ವಾನಿಸಿದ್ದ ದರಪಟ್ಟಿಯನ್ನು ಏಕೆ ಅಂತಿಮಗೊಳಿಸಲಿಲ್ಲ.
- ಬಹುಪಾಲು ಮೊದಲ ಬಾರಿ ದರಪಟ್ಟಿ ಸಲ್ಲಿಸಿದ್ದ ಕಂಪನಿಗಳೇ ಎರಡನೇ ಬಾರಿ ದರ ಪಟ್ಟಿ ಆಹ್ವಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರೂ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸುವಲ್ಲಿ ವಿಳಂಬ ಏಕಾಯಿತು.
- ಆರೋಗ್ಯ ಇಲಾಖೆಯು ರಚಿಸಿದ್ದ ಕಾರ್ಯಪಡೆ ಔಷಧ ಖರೀದಿಗೆ ₹80.34 ಕೋಟಿಗಳಿಗೆ ಅನುಮತಿ ನೀಡಿದ್ದರೂ, ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮವು ನಿಧಾನಗತಿಯಲ್ಲಿ ಕೆಲಸ ಮಾಡಿದ್ದರಿಂದ ಔಷಧ ದಾಸ್ತಾನು ಹೆಚ್ಚಿಸಲು ರಾಜ್ಯ ಸರ್ಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ತಜ್ಞರ ತಂಡಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕು ಎಂದರೂ ನಿಗಮ ಕುಂಟುತ್ತಾ ಕಾರ್ಯನಿರ್ವಹಿಸುತ್ತಿದೆ.
- ಕಪ್ಪು ಶಿಲೀಂಧ್ರ ರೋಗಕ್ಕೆ ಸಂಬಂಧಿಸಿದಂತೆ ಮೆ ಮೈಲಾನ್ ಫಾರ್ಮಾಸುಟಿಕಲ್ಸ್ ಸಂಸ್ಥೆ ಎರಡನೇ ಬಿಡ್‌ದಾರರಾಗಿದ್ದರೂ, ಆ ಸಂಸ್ಥೆಯಿಂದ ಆಂಪೋಟೆರಿಸಿನ್ ಔಷಧ ಖರೀದಿಸಿದ್ದರಿಂದ ರಾಜ್ಯಕ್ಕೆ ಹೆಚ್ಚುವರಿ ನಷ್ಟವಾಗಿದೆ.

ಚಿತ್ರಾವಳಿ



ಕೋವಿಡ್ ಸಂಕಷ್ಟಕ್ಕೆ ನೆರವಾಗಲು ಜಲಮಂಡಳಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹2 ಕೋಟಿ ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಹಸ್ತಾಂತರಿಸಲಾಯಿತು. ಜಲಮಂಡಳಿ ಅಧ್ಯಕ್ಷ ಎನ್.ಜಯರಾಂ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಜಲಮಂಡಳಿ ಅಧಿಕಾರಿಗಳಾದ ಎಂ.ಮಹೇಶ್, ಎಂ.ವಿ.ಪ್ರಶಾಂತ್ ಕುಮಾರ್, ಬಿ.ಎಂ.ಸೋಮಶೇಖರ್ ಹಾಗೂ ಇತರರು ಇದ್ದರು.



ಇ–ಕಾಮರ್ಸ್ ಸಂಸ್ಥೆ ಫ್ಲಿಪ್‌ಕಾರ್ಟ್ ವತಿಯಿಂದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್‌ಎಂಎಸ್‌ಸಿಎಲ್) ದೇಣಿಗೆಯಾಗಿ ನೀಡಿರುವ 30 ಐಸಿಯು ವೆಂಟಿಲೇಟರ್‌ಗಳು ಹಾಗೂ ಐಸಿಯು ಮಲ್ಟಿಪ್ಯಾರಾ ಮಾನಿಟರ್‌ಗಳನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮುಖಾಂತರ ಹಸ್ತಾಂತರಿಸಲಾಯಿತು. ಫ್ಲಿಪ್ ಕಾರ್ಟ್ ಸಂಸ್ಥೆಯ ಸಿಇಒ ಕಲ್ಯಾಣ್ ಕೃಷ್ಣಮೂರ್ತಿ ಹಾಗೂ ಇತರರು ಇದ್ದರು.



ಹೆಮ್ಮಿಗೆಪುರ ವಾರ್ಡ್‌ನ ಚಿಕ್ಕೇಗೌಡನಪಾಳ್ಯದಲ್ಲಿ ಬಮೂಲ್ ಮಾಜಿ ನಿರ್ದೇಶಕ ಪಂಚಲಿಂಗಯ್ಯ ಅವರು ಬಡವರಿಗೆ ಪಡಿತರ ಕಿಟ್ ವಿತರಿಸಿದರು. ಗೊಟ್ಟಿಗೆರೆಪಾಳ್ಯ ನಾಗರಾಜು, ರೇಣುಕಯ್ಯ, ಈರಣ್ಣ ಇದ್ದಾರೆ

'ಕಾರ್ಮಿಕರ ಸ್ವಂತ ಸೂರಿನ ಕನಸು ಭಗ್ನ'

ಬೆಂಗಳೂರು: ಒಂದು ಲಕ್ಷ ಮನೆ ನಿರ್ಮಾಣ ಯೋಜನೆಗೆ ಈ ಹಿಂದೆ ಹಾಕಿರುವ ಎಲ್ಲ ಅರ್ಜಿಗಳನ್ನು ರದ್ದು ಮಾಡಲು ಸರ್ಕಾರ ನಿರ್ಧಾರ ಕೈಗೊಂಡಿದ್ದು, ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಈ ಸಂಬಂಧ 'ಪ್ರಜಾವಾಣಿ' ಸೋಮವಾರದ ಸಂಚಿಕೆಯಲ್ಲಿ 'ಬಡವರ ವಸತಿ ಕನಸಿಗೆ ಕವಿದಿದೆ ಕಾರ್ಮೋಡ' ಎಂಬ ವರದಿ ಪ್ರಕಟಿಸಲಾಗಿತ್ತು. ವಿವಿಧ ಪಕ್ಷ ಹಾಗೂ ಸಂಘಟನೆಗಳ ಪ್ರತಿಕ್ರಿಯೆಗಳು ಇಂತಿವೆ.



ಪ್ರಜಾವಾಣಿ ಬ್ರ್ಯಾಂಡ್ ಬೆಂಗಳೂರು ದಾರಿ ಹತ್ತಾರು

ಬಡವರ ವಸತಿ ಕನಸಿಗೆ ಕವಿದಿದೆ ಕಾರ್ಮೋಡ

515 | 46,998 | 42,361

'3ಳಿವಳಿಕೆ ಪತ್ರ ಪಡೆದಿದ್ದ 65 ಸಾವಿರ ಮಂದಿಗೆ ನಿವೇಶನ ನೀಡಿ'

'ಸಲ್ಲಿಕೆಯಾಗಿದ್ದ ಅರ್ಜಿಗಳನ್ನೇ ರದ್ದುಪಡಿಸಿರುವ ಸರ್ಕಾರದ ಕ್ರಮ ಅಕ್ಷಮ್ಯ. ಇದರಿಂದ ವಸತಿ ಪಡೆಯುವ ಆಸೆಯಲ್ಲಿದ್ದ ಸಾವಿರಾರು ಅಸಂಘಟಿತ ಕಾರ್ಮಿಕರ ಕನಸು ಭಗ್ನಗೊಂಡಿದೆ. ಮೊದಲ ಹಂತದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ 46 ಸಾವಿರ ಮನೆಗಳಲ್ಲಿ ಶೇ 50ರಷ್ಟು ಮನೆಗಳಿಗೆ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸುವ ಅಧಿಕಾರವನ್ನು ಶಾಸಕರಿಗೆ ನೀಡಲಾಗಿದೆ. ಆ ಮೂಲಕ ವಸತಿ ಸಚಿವರು ಶಾಸಕರನ್ನು ಓಲೈಸಲು ಮುಂದಾಗಿದ್ದಾರೆ'.

'ಈ ಹಿಂದೆ ಅರ್ಜಿ ಸಲ್ಲಿಸಿ ತಿಳಿವಳಿಕೆ ಪತ್ರ ಪಡೆದಿದ್ದ 65 ಸಾವಿರ ಅರ್ಜಿದಾರರಿಗೆ ಮೊದಲು ವಸತಿ ಒದಗಿಸಬೇಕು. ಇತರ ಫಲಾನುಭವಿಗಳನ್ನು ಗುರುತಿಸುವ ಜವಾಬ್ದಾರಿಯನ್ನು ರಾಜ್ಯ ಕಟ್ಟಡ ಕಾರ್ಮಿಕರ ಸಾಮಾಜಿಕ ಸುರಕ್ಷತಾ ಮಂಡಳಿ ಹಾಗೂ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಸುರಕ್ಷತಾ ಮಂಡಳಿಗೆ ನೀಡಬೇಕು'.

–ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ

'ಇದು ಬಡವರ ವಿರೋಧಿ ಸರ್ಕಾರ'

'ಅಧಿಕಾರದಲ್ಲಿರುವವರು ಹಿಂದಿನ ಸರ್ಕಾರಗಳು ಅನುಷ್ಠಾನಗೊಳಿಸಿರುವ ವಸತಿ ಯೋಜನೆಗಳನ್ನು ರದ್ದು ಮಾಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ತಮ್ಮ ಪಕ್ಷದ ಕಾರ್ಯಕರ್ತರಿಗೆ ಲಾಭ ಮಾಡಿಕೊಡುವ ಉದ್ದೇಶ ಇದರ ಹಿಂದೆ ಅಡಕವಾಗಿರುತ್ತದೆ. ಇದರಿಂದ ಬಡವರು ಹಾಗೂ ವಸತಿ ರಹಿತರಿಗೆ ಅನ್ಯಾಯವಾಗುತ್ತದೆ'.



'ಫಲಾನುಭವಿಗಳನ್ನು ಗುರುತಿಸುವ ಅವಕಾಶ ಶಾಸಕರಿಗೆ ನೀಡಿರುವುದರಿಂದ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಂತಾಗಿದೆ. ಮನೆ ಕೆಲಸದವರು, ಆಟೋ ಚಾಲಕರು ಹಾಗೂ ಕೂಲಿ ಕಾರ್ಮಿಕರಿಗೆ ಸೇರಬೇಕಾದ ಮನೆಗಳು ಪ್ರಭಾವಿಗಳ ಪಾಲಾಗುತ್ತವೆ. ಸರ್ಕಾರ ಈಗ ತಳೆದಿರುವ ನಿಲುವು ಖಂಡನಾರ್ಹ. ತಾನು ಬಡವರ ವಿರೋಧಿ ಸರ್ಕಾರ ಎಂಬುದನ್ನು ಯಡಿಯೂರಪ್ಪನವರ ಸರ್ಕಾರ ಮತ್ತೊಮ್ಮೆ ಸಾಬೀತುಪಡಿಸಿದೆ'.

–ಮೋಹನ್ ದಾಸರಿ, ಆಮ್ ಆದ್ಮಿ ಪಕ್ಷದ ಬೆಂಗಳೂರು ಘಟಕದ ಅಧ್ಯಕ್ಷ

'ಭ್ರಷ್ಟಾಚಾರಕ್ಕೆ ರಹದಾರಿ'



'ಯಾವುದೇ ಒಂದು ಸರ್ಕಾರ ಜನಪರ ಕಾರ್ಯಕ್ರಮ ರೂಪಿಸಿದರೆ ಮತ್ತೊಂದು ಸರ್ಕಾರ ಅದನ್ನು ಮುಂದುವರಿಸಿಕೊಂಡು ಹೋಗಬೇಕು. ಅದುವೇ ಧರ್ಮ. ಸರ್ಕಾರ ಆದೇಶ ಹೊರಡಿಸಿದ್ದರಿಂದ ಬಡವರು ಹಾಗೂ ನಿರ್ಗತಿಕರು ವಸತಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಈಗಿನ ಸರ್ಕಾರ ಏಕಾಏಕಿಯಾಗಿ ಇಡೀ ಪ್ರಕ್ರಿಯೆಯನ್ನೇ ರದ್ದುಗೊಳಿಸಿ ಹೊಸದಾಗಿ ಅರ್ಜಿ ಆಹ್ವಾನಿಸಿರುವುದು ಒಪ್ಪತಕ್ಕದ್ದಲ್ಲ'.

'ಫಲಾನುಭವಿಗಳ ಆಯ್ಕೆಯ ಅವಕಾಶವನ್ನು ಶಾಸಕರಿಗೆ ನೀಡಿರುವುದು ಸರಿಯಲ್ಲ. ಇದರಿಂದ ನಿಜವಾದ ಫಲಾನುಭವಿಗಳು ವಸತಿ ವಂಚಿತರಾಗುತ್ತಾರೆ. ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಅನುಕೂಲ ಮಾಡಿಕೊಡುವ ಹುನ್ನಾರವೂ ಇದರ ಹಿಂದೆ ಅಡಗಿದೆ. ಸರ್ಕಾರ ಕೂಡಲೇ ಈ ನಿರ್ಧಾರದಿಂದ ಹಿಂದೆ ಸರಿಯಬೇಕು. ಈಗಾಗಲೇ ತಿಳಿವಳಿಕೆ ಪತ್ರ ನೀಡಿರುವವರಿಗೆ ವಸತಿ ಹಂಚಿಕೆ ಮಾಡಬೇಕು. ಈ ಹಿಂದೆ ಅರ್ಜಿ ಹಾಕಿದವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಸರ್ಕಾರದ ಈಗಿನ ನಿರ್ಧಾರದಿಂದ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಈ ಸಂಬಂಧ ರೈತ ಸಂಘದ ವತಿಯಿಂದ ಮುಖ್ಯಮಂತ್ರಿಯವರಿಗೆ ಪತ್ರ ಬರೆಯುತ್ತೇವೆ'.

–ಬಡಗಲಪುರ ನಾಗೇಂದ್ರ
ರಾಜ್ಯ ರೈತ ಸಂಘದ ಅಧ್ಯಕ್ಷ

'ಲೂಟಿಕೋರ ಸರ್ಕಾರ'



'ಗೋವಿಂದರಾಜನಗರ ಹಾಗೂ ವಿಜಯನಗರದಲ್ಲಿ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ವಸತಿ ಸಚಿವ ವಿ.ಸೋಮಣ್ಣ ಇಂತಹ ನಿರ್ಧಾರ ಕೈಗೊಂಡಿದ್ದಾರೆ. ಆ ಮೂಲಕ ಹಗಲು ದರೋಡೆಗೆ ದಾರಿ ಮಾಡಿಕೊಟ್ಟಿದ್ದಾರೆ. ಪ್ರಭಾವಿಗಳು ಬೇನಾಮಿ ಹೆಸರಿನಲ್ಲಿ ಅನೇಕ ಬಿಡಿಎ ನಿವೇಶನಗಳನ್ನು ಪಡೆದಿದ್ದಾರೆ. ಡಿನೋಟಿಫಿಕೇಷನ್ ಮೂಲಕ ಭೂಮಿ ಕಬಳಿಸಿ ಆ ಜಾಗದಲ್ಲಿ ಶಾಲಾ, ಕಾಲೇಜು ನಿರ್ಮಿಸಿಕೊಂಡಿದ್ದಾರೆ. ಇವರಿಗೆ ಒಂದು ಕಾನೂನು, ಜನಸಾಮಾನ್ಯರಿಗೆ ಒಂದು ಕಾನೂನು. ಇದು ಎಷ್ಟರ ಮಟ್ಟಿಗೆ ಸರಿ'.

'ವಾರ್ಷಿಕ ಆದಾಯದ ಮಿತಿ ₹83 ಸಾವಿರಕ್ಕಿಂತ ಕಡಿಮೆ ಇದ್ದವರು ಅರ್ಜಿ ಸಲ್ಲಿಸಲು ಅರ್ಹರು ಎಂದು ಈ ಹಿಂದೆ ಹೇಳಲಾಗಿತ್ತು. ಈಗ ಇದನ್ನು ₹3 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಕೂಲಿ ಕಾರ್ಮಿಕರು, ಆಟೊ ಚಾಲಕರು ಹಾಗೂ ಗಾರ್ಮೆಂಟ್ಸ್ ಉದ್ಯೋಗಿಗಳು ಅವಕಾಶ ವಂಚಿತರಾಗುವ ಅಪಾಯ ಇದೆ'.

ಜಗದೀಶ್ ಸದಂ
ಆಮ್ ಆದ್ಮಿ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ.

ಆಸ್ತಿ ನೋಂದಣಿ: ಮಹಿಳಾ ಪರ ಕಾಳಜಿ–ರಾಜ್ಯ ಸರ್ಕಾರದ ಚಿಂತನೆ

ದಂಪತಿ ಹೆಸರಿನಲ್ಲಿ ಜಂಟಿ ಖಾತಾ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನೀತಿ ಆಯೋಗದ ಪ್ರತಿನಿಧಿಗಳ ಸಭೆಯಲ್ಲಿ ಅಧಿಕಾರಿಗಳ ಸಲಹೆ
- ನೂತನ ಉಪಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒಪ್ಪಿಗೆ
- ಲಿಂಗ ಸಮಾನತೆ: ರಾಜ್ಯದ ರ್‍ಯಾಂಕಿಂಗ್ ಹೆಚ್ಚಿಸಲು ಮುಂದಾದ ಸರ್ಕಾರ

ಬೆಂಗಳೂರು: ಇನ್ನು ಮುಂದೆ ಆಸ್ತಿ ನೋಂದಣಿ ಮಾಡುವಾಗ ಗಂಡ–ಹೆಂಡತಿ ಇಬ್ಬರ ಹೆಸರಿನಲ್ಲೂ ಆಸ್ತಿ ನೋಂದಾಯಿಸಿ, ಜಂಟಿ ಖಾತೆ ಮಾಡಿಕೊಡುವ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಸುಸ್ಥಿರ ಅಭಿವೃದ್ಧಿ ಗುರಿ ಕುರಿತಂತೆ ನೀತಿ ಆಯೋಗದ ಪ್ರತಿನಿಧಿಗಳು ಮಂಗಳವಾರ ನಡೆಸಿದ ಸಭೆಯಲ್ಲಿ ಅಧಿಕಾರಿಗಳು ಈ ಸಲಹೆ ನೀಡಿದ್ದಾರೆ. ಸಭೆಯಲ್ಲಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಈ ನೂತನ ಉಪಕ್ರಮಕ್ಕೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಇದನ್ನು ಕಡ್ಡಾಯ ಮಾಡಲು ಸಾಧ್ಯವಿಲ್ಲ. ಜಂಟಿ ನೋಂದಣಿ ಮಾಡಿಸಿಕೊಂಡರೆ, ಅಂತಹ ಕುಟುಂಬಗಳಿಗೆ ಕೆಲವು ರಿಯಾಯ್ತಿ ನೀಡಲಾಗುವುದು ಎಂದು ಸರ್ಕಾರ ಉತ್ತೇಜನ ನೀಡಬೇಕು' ಎಂದು ಕಂದಾಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಈ ರೀತಿ ಜಂಟಿ ಖಾತೆ ಮಾಡುವ ಕ್ರಮದಿಂದ ಲಿಂಗ ಸಮಾನತೆಯ ವಿಷಯದಲ್ಲಿ ರಾಜ್ಯದ ರ್‍ಯಾಂಕಿಂಗ್ ಹೆಚ್ಚಿಸಲು ಸರ್ಕಾರ ಮುಂದಾಗಿದೆ. ಸುಸ್ಥಿರ ಅಭಿವೃದ್ಧಿಯ ಉಳಿದ ಹಲವಾರು ಗುರಿಗಳಲ್ಲಿ ರಾಜ್ಯ ಮುಂದಿದ್ದರೂ ಲಿಂಗ ಸಮಾನತೆ, ಹಸಿವು, ಕೈಗಾರಿಕಾ ಅಭಿವೃದ್ಧಿ, ಹವಾಮಾನ ಮತ್ತು ಗುಣಮಟ್ಟ ಶಿಕ್ಷಣದ ವಿಚಾರದಲ್ಲಿ ಹಿಂದುಳಿದಿದೆ.

'ಸಾಮಾನ್ಯವಾಗಿ ಆಸ್ತಿಗಳನ್ನು ಪುರುಷರ ಹೆಸರಿನಲ್ಲೇ ನೋಂದಣಿ ಮಾಡಲಾಗುತ್ತದೆ. ಹೀಗಾಗಿ ಮಹಿಳೆಯರು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಆಸ್ತಿ ಪತ್ರಗಳಲ್ಲಿ ಆಯಾ ಕುಟುಂಬದ ಮಹಿಳೆಯ ಹೆಸರೂ ಸೇರಿಸಿದರೆ ಕುಟುಂಬಗಳಲ್ಲಿ ಮಹಿಳೆಗೆ ಪ್ರಾಮುಖ್ಯತೆ ಮತ್ತು ರಕ್ಷಣೆ ಸಿಗುತ್ತದೆ ಎಂದು ಮುಖ್ಯಮಂತ್ರಿಯವರಿಗೆ ಹೇಳಿದ್ದೇವೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು' ಎಂದು ಅಧಿಕಾರಿ ತಿಳಿಸಿದರು.



ವಿಶ್ವಸಂಸ್ಥೆ ನಿಗದಿಪಡಿಸಿರುವ ಸುಸ್ಥಿರ ಅಭಿವೃದ್ಧಿ ಗುರಿಯನ್ನು ತಲುಪುವ ಮೂಲಕ ದೇಶದಲ್ಲೇ ಮೊದಲ ಸ್ಥಾನ ಪಡೆಯಲು ಶ್ರಮಿಸಲಾಗುವುದು

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಯಡಿಯೂರಪ್ಪ, ಸುಸ್ಥಿರ ಅಭಿವೃದ್ಧಿಯ ಸೂಚ್ಯಂಕದಲ್ಲಿ ಗಣನೀಯ ಅಭಿವೃದ್ಧಿ ಆಗಿದೆ. ಮುಂದೆ ಗರ್ಭಿಣಿಯರು ಮತ್ತು ಮಕ್ಕಳ ಅಪೌಷ್ಟಿಕತೆ, ಲಿಂಗ ಸಮಾನತೆ, ವಸತಿ ಶಿಕ್ಷಣದ ಕುರಿತು ಹೆಚ್ಚಿನ ಗಮನಹರಿಸಲು ಉದ್ದೇಶಿಸಲಾಗಿದೆ ಎಂದರು.

ಸುಸ್ಥಿರ ಅಭಿವೃದ್ಧಿ ಗುರಿ ಸೂಚ್ಯಂಕದಲ್ಲಿ ರಾಜ್ಯದ ಅಂಕ ಮತ್ತು ಸ್ಥಾನದಲ್ಲಿ ಗಣನೀಯ ಸುಧಾರಣೆ ಆಗಿರುವ ಬಗ್ಗೆ ನೀತಿ ಆಯೋಗದ ಅಧಿಕಾರಿಗಳು ತೃಪ್ತಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಸುಸ್ಥಿರ ಅಭಿವೃದ್ಧಿ ಗುರಿ 2020–21ರ ವರದಿ ಪ್ರಕಾರ 73 ಸೂಚ್ಯಂಕ ಪಡೆದು ಕರ್ನಾಟಕ ಮೂರನೇ ಸ್ಥಾನದಲ್ಲಿದೆ. 16 ಸುಸ್ಥಿರ ಅಭಿವೃದ್ಧಿ ಗುರಿಗಳ ಪೈಕಿ ಕರ್ನಾಟಕ ರಾಜ್ಯ 7ನೇ ಗುರಿ ಸಾಧಿಸುವಲ್ಲಿ ಮೊದಲನೇ ಸ್ಥಾನದಲ್ಲಿದೆ. ಉಳಿದ ಒಂಬತ್ತು ಗುರಿಗಳ ಸಾಧನೆಯಲ್ಲಿ ಮುಂಚೂಣಿಯಲ್ಲಿದ್ದು ಬಾಕಿ 5 ಗುರಿಗಳ ಸಾಧನೆಯಲ್ಲಿ ಕೂಡ ಉತ್ತಮ ಸಾಧನೆ ತೋರಿದೆ ಎಂದರು.

ಪ್ರಗತಿ ಅಸೋಸಿಯೇಟ್ಸ್‌ಗೆ ರಾಷ್ಟ್ರೀಯ ಪ್ರಶಸ್ತಿ

ಬೆಂಗಳೂರು: ಪ್ರಗತಿ ಅಸೋಸಿಯೇಟ್ಸ್, 2021ನೇ ಸಾಲಿನ 'ರಾಷ್ಟ್ರೀಯ ವಾಸ್ತುಶಿಲ್ಪ ಮತ್ತು ಒಳಾಂಗಣ ವಿನ್ಯಾಸ ಶ್ರೇಷ್ಠತಾ ಪುರಸ್ಕಾರ'ಕ್ಕೆ ಆಯ್ಕೆಯಾಗಿದೆ.

'ಜುಲೈ 23ರಂದು ನಗರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.



ಮಂಜುಳಾ ಸೋಮಶೇಖರ್

ಪ್ರಗತಿ ಅಸೋಸಿಯೇಟ್ಸ್‌ನ ಮಂಜುಳಾ ಸೋಮಶೇಖರ್ ಅವರು 2021ನೇ ಸಾಲಿನ 'ಭಾರತದ ಅಗ್ರ 10 ಅತ್ಯುತ್ತಮ ಸ್ಫೂರ್ತಿದಾಯಕ ವಾಸ್ತುಶಿಲ್ಪಿ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಮರಗಳ ಸ್ಥಳಾಂತರಕ್ಕೆ ಹೈಕೋರ್ಟ್ ಅನುಮತಿ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿನ ನಾಗವಾರ- ಗೊಟ್ಟಿಗೆರೆ ಮಾರ್ಗದಲ್ಲಿ ಹಲವು ಕಡೆ ಮರಗಳನ್ನು ಸ್ಥಳಾಂತರಿಸಲು ಬೆಂಗಳೂರು ಮೆಟ್ರೊ ರೈಲು ನಿಗಮಕ್ಕೆ (ಬಿಎಂಆರ್‌ಸಿಎಲ್) ಹೈಕೋರ್ಟ್ ಮಂಗಳವಾರ ಅನುಮತಿ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ನೇತೃತ್ವದ ವಿಭಾಗೀಯ ಪೀಠ ಈ ಅನುಮತಿ ನೀಡಿತು. ತೆರವುಗೊಳಿಸುವ ಮರಗಳಿಗೆ ಪರ್ಯಾಯವಾಗಿ ನೆಡಲಾಗುವ ಸಸಿಗಳ (ಅರಣ್ಯೀಕರಣ) ವಿವರ ಒಳಗೊಂಡ ವರದಿ ನೀಡುವಂತೆಯೂ ಸೂಚಿಸಿತು.

ತಜ್ಞರ ಸಮಿತಿ ಸಲಹೆಯಂತೆ ನಿಗಮವು ಮೆಟ್ರೊ ನಿರ್ಮಾಣಕ್ಕಾಗಿ ಈ ಮಾರ್ಗದಲ್ಲಿ ಮರಗಳನ್ನು ಕಡಿಯಲು ಮತ್ತು ಸ್ಥಳಾಂತರಿಸಲು ನ್ಯಾಯಾಲಯದ ಅನುಮತಿ ಕೋರಿತ್ತು. ಅಲ್ಲದೆ, 2021ರ ಮಾರ್ಚ್‌ನಿಂದ ಮೇ ತಿಂಗಳ ಅವಧಿಯಲ್ಲಿ ಈ ಕುರಿತು ಹಲವು ಅಧಿಸೂಚನೆಗಳನ್ನು ಹೊರಡಿಸಿತ್ತು.

'ಮರಗಳನ್ನು ಸ್ಥಳಾಂತರಿಸುವ ವೇಳೆ ತಾನು ನೇಮಿಸಿದ ಅಧಿಕಾರಿ ಅಥವಾ ವೃಕ್ಷ ಅಧಿಕಾರಿಯು ಹಾಜರಿರಬೇಕು. ಮರಗಳ ನಿರ್ವಹಣೆ ಮತ್ತು ಸಂರಕ್ಷಣೆ ಕುರಿತಂತೆ ಪ್ರತಿ 3 ತಿಂಗಳಿಗೊಮ್ಮೆ ಬಿಎಂಆರ್‌ಸಿಎಲ್‌ನಿಂದ ಮಾಹಿತಿ ಪಡೆದು, ಆ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದೂ ಪೀಠವು ನಿರ್ದೇಶಿಸಿತು.

ಮುಖ್ಯಮಂತ್ರಿಯಿಂದ ಎತ್ತಿನಹೊಳೆ ಯೋಜನೆ ಪ್ರಗತಿ ಪರಿಶೀಲನೆ

'ಜುಲೈ ಕೊನೆಗೆ ವೇದಾವತಿ ಕಣಿವೆಗೆ ನೀರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನಹೊಳೆ ಯೋಜನೆಯ ಮೊದಲ ಹಂತವಾಗಿ ಜುಲೈ ಕೊನೆಯೊಳಗೆ ವೇದಾವತಿ ಕಣಿವೆಗೆ ನೀರು ಹರಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಎತ್ತಿನಹೊಳೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿ, ಕಾಮಗಾರಿಗಳನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸುವಂತೆ ಅವರು ಹೇಳಿದರು.

ಎತ್ತಿನಹೊಳೆ ಯೋಜನೆಗೆ ಈವರೆಗೆ ₹9,003.86 ಕೋಟಿ ವೆಚ್ಚವಾಗಿದೆ. ಈ ಯೋಜನೆಯು ಏಳು ಜಿಲ್ಲೆಗಳಲ್ಲಿ 6,557 ಗ್ರಾಮಗಳ 68 ಲಕ್ಷಕ್ಕೂ ಹೆಚ್ಚು ಜನರಿಗೆ ಕುಡಿಯುವ ನೀರು ಒದಗಿಸಲಿದೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆಯಾಗಿ ಘೋಷಣೆ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಕೇಂದ್ರ ಸಚಿವ ಸಂಪುಟದ ಅನುಮೋದನೆ ಬಾಕಿಯಿದೆ. ಈ ಬಗ್ಗೆ ಕೇಂದ್ರ ಸಚಿವರೊಂದಿಗೆ ದೂರವಾಣಿ ಮೂಲಕ ಚರ್ಚಿಸಲಾಗಿದ್ದು ಶೀಘ್ರವೇ ಅನುಮೋದನೆ ನೀಡಲು ಕೋರಲಾಗಿದೆ. ಅಗತ್ಯ ಬಿದ್ದರೆ ಕೇಂದ್ರ ಸಚಿವರನ್ನು ಖುದ್ದು ಭೇಟಿ ಮಾಡಿ ಮಂಜೂರಾತಿಗೆ ಒತ್ತಾಯಿಸಲಾಗುವುದು ಎಂದರು.

ಈ ಯೋಜನೆಯಲ್ಲಿ ಯಾವುದೇ ಅಕ್ರಮಗಳು ನಡೆದರೆ ಅಧಿಕಾರಿಗಳನ್ನು ಹೊಣೆಯಾಗಿಸಲಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣರೆಡ್ಡಿ, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತು ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಕಿಸಾನ್ ರೈಲಿಗೆ ಸಿ.ಎಂ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೋಲಾರ ಜಿಲ್ಲೆ ಚಿಂತಾಮಣಿಯಿಂದ ನವದೆಹಲಿಗೆ 250 ಟನ್ ಮಾವು ಸಾಗಿಸುವ ಕಿಸಾನ್ ರೈಲಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಇಲ್ಲಿನ ರೈಲುನಿಲ್ದಾಣದಲ್ಲಿ ಮಂಗಳವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ರೈತರು ಬೆಳೆದ ಬೆಳೆಗಳಿಗೆ ಉತ್ತಮ ಮೌಲ್ಯ ಒದಗಿಸುವಲ್ಲಿ ಕಿಸಾನ್ ರೈಲು ಮಹತ್ವದ ಪಾತ್ರ ವಹಿಸಲಿದೆ. ಹಣ್ಣು, ತರಕಾರಿ ಮತ್ತು ಡೇರಿ ಉತ್ಪನ್ನಗಳನ್ನು ತ್ವರಿತಗತಿಯಲ್ಲಿ ಮಾರುಕಟ್ಟೆಗೆ ತಲುಪಿಸುವಲ್ಲಿ ಈ ರೈಲು ಸಹಕಾರಿಯಾಗಲಿದೆ' ಎಂದು ತಿಳಿಸಿದರು.

'ಕಿಸಾನ್ ರೈಲು ಯೋಜನೆಯಡಿ ಹಣ್ಣು-ತರಕಾರಿಗಳ ಸಾಗಣೆ ಮತ್ತು ಶೇಖರಣೆಗೆ ಶೇ 50 ರಷ್ಟು ಸಹಾಯಧನ ವಿತರಿಸಲು ಅವಕಾಶವಿದ್ದು, ರೈತರು, ರೈತ ವರ್ತಕರು ಹಾಗೂ ಇನ್ನಿತರ ಪಾಲುದಾರರು ರೈಲ್ವೆ ಸಾಗಣೆ ದರದಲ್ಲಿ ಶೇ 50ರಷ್ಟು ರಿಯಾಯಿತಿ ಪಡೆಯಬಹುದು. ರೈತರು ಬೆಳೆದ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗಬೇಕೆಂಬ ಪ್ರಧಾನಿ ನರೇಂದ್ರ ಮೋದಿಯವರ ಅಪೇಕ್ಷೆಯನ್ನು ಈ ಮೂಲಕ ಪೂರೈಸಲಾಗುತ್ತಿದ್ದು, ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ಹೇಳಿದರು.

'ಕಿಸಾನ್ ರೈಲು ಆಗಸ್ಟ್ 2020ರಲ್ಲಿ ಆರಂಭವಾಗಿದ್ದು, ಇದು ರೈತರಿಗೆ ಕೃಷಿ ಉತ್ಪನ್ನಗಳನ್ನು ಒಟ್ಟುಗೂಡಿಸುವಲ್ಲಿ ಪ್ರಯೋಜನಕಾರಿಯಾಗಿದೆ. ಈ ರೈಲಿಗೆ ಸರಕು ಶುಲ್ಕದಲ್ಲಿ ಶೇ 50ರಷ್ಟು ಮುಂಗಡ ಸಹಾಯಧನ ಒದಗಿಸಲಾಗಿದ್ದು, ಇದರಿಂದ ರೈತರು ತಮ್ಮ ಉತ್ಪನ್ನಗಳನ್ನು ದೂರದ ಮಾರುಕಟ್ಟೆಗಳಿಗೆ ಸಾಗಿಸಲು ನೆರವಾಗಲಿದೆ' ಎಂದರು.



ಯಲಹಂಕದ ರೈಲುನಿಲ್ದಾಣದಲ್ಲಿ ಕಿಸಾನ್ ರೈಲಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಗಳವಾರ ಚಾಲನೆ ನೀಡಿದರು

ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ, ಎಸ್.ಟಿ.ಸೋಮಶೇಖರ್, ಆರ್.ಶಂಕರ್, ಶಾಸಕ ಎಸ್.ಆರ್.ವಿಶ್ವನಾಥ್, ಬೆಂಗಳೂರು ರೈಲ್ವೆ ವಿಭಾಗದ ವ್ಯವಸ್ಥಾಪಕ ಅಶೋಕ್ ಕುಮಾರ್ ವರ್ಮ ಉಪಸ್ಥಿತರಿದ್ದರು.

ಬಿಜಿಎಸ್ ಸುಧಾರಿತ ಬ್ಲಡ್ ಸೆಂಟರ್ ಇಂದು ಲೋಕಾರ್ಪಣೆ

ಕೆಂಗೇರಿ: ಬಿಜಿಎಸ್ ಜಿಮ್ಸ್ ವತಿಯಿಂದ ₹1.5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಬಿಜಿಎಸ್ ಗ್ಲೋಬಲ್ ಬ್ಲಡ್ ಸೆಂಟರ್ ಬುಧವಾರ ಬೆಳಿಗ್ಗೆ 10ಗಂಟೆಗೆ ಲೋಕಾರ್ಪಣೆಗೊಳ್ಳಲಿದೆ.

ಬಿಜಿಎಸ್ ಗ್ಲೋಬಲ್ ಬ್ಲಡ್ ಸೆಂಟರ್ ಅತ್ಯಂತ ಸುಧಾರಿತ ತಂತ್ರಜ್ಞಾನವನ್ನು ಒಳಗೊಂಡಿದೆ. ರಕ್ತ ಸಂಗ್ರಹಣೆಯೊಂದಿಗೆ ರಕ್ತದ ಕಣಗಳನ್ನು ಪ್ರತ್ಯೇಕಿಸಿ ಪ್ಲಾಸ್ಮಾ ಸಂಗ್ರಹಣೆ, ಪ್ಲೇಟ್‌ಲೆಟ್ ಹಾಗೂ ಲ್ಯೂಕೋ ಸಂಗ್ರಹ ಮಾಡುವ ಸೌಲಭ್ಯವನ್ನು ಒಳಗೊಂಡಿದೆ. ಈ ಕೇಂದ್ರವು ದಿನದ 24 ಗಂಟೆ ಕಾರ್ಯನಿರ್ವಹಿಸಲಿದೆ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಬಿಜಿಎಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ರೋಟೇರಿಯನ್ ಬಿ.ಎಲ್.ನಾಗೇಂದ್ರ, ಪ್ರಾಂಶುಪಾಲ ಎಂ.ಎ.ಮೋಹನ್, ಡಾ.ಶ್ರೀಕಾಂತ್ ಕುಲಕರ್ಣಿ ಭಾಗವಹಿಸಲಿದ್ದು, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ.

ಮಿದುಳು ನಿಷ್ಕ್ರಿಯ- ಅಂಗಾಂಗ ದಾನಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: ರಸ್ತೆ ಅಪಘಾತದಲ್ಲಿ ಗಾಯಗೊಂಡು ಮಿದುಳು ನಿಷ್ಕ್ರಿಯಗೊಂಡಿರುವ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಅಜ್ಜಹಳ್ಳಿ ಗ್ರಾಮದ ರೈತ ಪಿ.ರಾಮಕೃಷ್ಣ (50) ಎಂಬುವವರು ಅಂಗಾಂಗ ದಾನ ಮಾಡಲು ಕುಟುಂಬದವರು ಮುಂದಾಗಿದ್ದಾರೆ.

'ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಯ ದೇಹವನ್ನು ಮಂಗಳವಾರ ಆಂಬುಲೆನ್ಸ್‌ನಲ್ಲಿ 'ಗ್ರೀನ್ ಕಾರಿಡಾರ್' (ಜೀರೊ ಟ್ರಾಫಿಕ್) ವ್ಯವಸ್ಥೆ ಮೂಲಕ ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ಸಾಗಿಸಲಾಗಿದೆ. ಬಿಜಿಎಸ್ ಆಸ್ಪತ್ರೆಯಲ್ಲಿ ವೈದ್ಯರು ಹೆಚ್ಚಿನ ಪರಿಶೀಲನೆ ನಡೆಸಿ ಅಂಗಾಂಗ ಬೇರ್ಪಡಿಸುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳುತ್ತಾರೆ. ಅಂಗಾಂಗ ದಾನಕ್ಕೆ ಕುಟುಂಬ ಸದಸ್ಯರು ಒಪ್ಪಿಗೆ ಸೂಚಿಸಿದ್ದಾರೆ' ಎಂದು ಸುಯೋಗ್ ಆಸ್ಪತ್ರೆಯ ಹಿರಿಯ ವ್ಯವಸ್ಥಾಪಕ (ಕಾರ್ಯಾಚರಣೆ) ಅರುಣ್ ಕುಮಾರ್ ತಿಳಿಸಿದರು.

ಯಡಿಯೂರಪ್ಪ ನೀಡಿದ ಭರವಸೆಯಂತೆ ಪರಿಷ್ಕೃತ ಆದೇಶ ಹೊರಡಿಸಲಿ: ಶುಶ್ರೂಷಕರ ಸಂಘ ಆಗ್ರಹ

ಅಪಾಯ ಭತ್ಯೆ: ಶುಶ್ರೂಷಕರ ಅಸಮಾಧಾನ

• ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ಕೋವಿಡ್ ಸೇನಾನಿಗಳಾಗಿ ಮುಂಚೂಣಿಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಶುಶ್ರೂಷಕರಿಗೆ ಸರ್ಕಾರ ಆರು ತಿಂಗಳವರೆಗೆ ಕೋವಿಡ್ 'ಅಪಾಯ ಭತ್ಯೆ'ಯಾಗಿ ₹8 ಸಾವಿರ ನೀಡಲು ಆದೇಶಿಸಿದೆ. ಆದರೆ, ಪಿಪಿಇ ಕಿಟ್ ಧರಿಸಿ ಕೋವಿಡ್ ಕೇಂದ್ರದಲ್ಲಿ ಕೆಲಸ ನಿರ್ವಹಿಸಿದವರಿಗಷ್ಟೇ ಈ ಭತ್ಯೆ ಎಂದು ಆದೇಶದಲ್ಲಿ ಉಲ್ಲೇಖಿಸಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಅಂದಾಜು 20 ಸಾವಿರ ಶುಶ್ರೂಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಅಂದಾಜು 11 ಸಾವಿರ, ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ 4,500 ಹಾಗೂ ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ 4,500 ಮಂದಿ ಇದ್ದಾರೆ. ಕೋವಿಡ್ ನಿರ್ವಹಣೆಯಲ್ಲಿ ಇವರ ಪಾತ್ರ ಗಣನೀಯವಾಗಿದೆ ಎಂದು ಸರ್ಕಾರ, ಪ್ರೋತ್ಸಾಹ ಧನವಾಗಿ ಅಪಾಯ ಭತ್ಯೆ ನೀಡಲು ನಿರ್ಧರಿಸಿದೆ. 'ಆದು ಆಸ್ಪತ್ರೆಯ ಇತರ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕರ ಅಸಮಾಧಾನಕ್ಕೂ ಎಡೆಮಾಡಿಕೊಟ್ಟಿದೆ.

'ಕೊರೊನಾ ಸೋಂಕಿನ ಎರಡನೇ ಅಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ಶುಶ್ರೂಷಕರು ಕೋವಿಡ್ ಕರ್ತವ್ಯದ ಒಂದಿಲ್ಲೊಂದು ಕಾರ್ಯದಲ್ಲಿ ನಿರತರಾಗಿದ್ದರು. ತುರ್ತು ಚಿಕಿತ್ಸಾ ವಿಭಾಗದಲ್ಲಿ ದಾಖಲಾದ ರೋಗಿಗಳಿಗೆ ತಕ್ಷಣ ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ಅವರಿಗೆಲ್ಲ ಸೋಂಕು ತಗುಲಿದೆಯೇ, ಇಲ್ಲವೇ ಎಂದು ಗೊತ್ತಿರುವುದಿಲ್ಲ. ರೋಗಿಗಳ ಮತ್ತು ಸಾರ್ವಜನಿಕರ ನೇರ ಸಂಪರ್ಕದಲ್ಲಿರುವ ಇವರಿಗೂ ಅಪಾಯ ಭತ್ಯೆ ನೀಡಬೇಕು' ಎಂದು ಶುಶ್ರೂಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ರಾಜಕುಮಾರ ಮಳಗಿ ಆಗ್ರಹಿಸಿದ್ದಾರೆ.

'ಮುಖ್ಯಮಂತ್ರಿ ಯಡಿಯೂರಪ್ಪ ಎಲ್ಲ ಶುಶ್ರೂಷಕರಿಗೆ ಈ ಭತ್ಯೆ ನೀಡಲಾಗುವುದು ಎಂದಿದ್ದರು. ಈಗ ಹೊಸ ನಿಯಮ ಹೇಳುತ್ತಿದ್ದಾರೆ. ಗೊಂದಲದಲ್ಲಿದ್ದ ಉನ್ನತ ಅಧಿಕಾರಿಗಳನ್ನು ಸಂಪರ್ಕಿಸಿ ಬಗೆಹರಿಸಿಕೊಳ್ಳಿ' ಎಂದರು.

'ಕೋವಿಡ್ ಕೇಂದ್ರದಲ್ಲಿ ಪಿಪಿಇ ಕಿಟ್ ಧರಿಸಿ ಕರ್ತವ್ಯ ನಿರ್ವಹಿಸುವವರಿಗಿಂತ ಹೆಚ್ಚು ಅಪಾಯ, ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಶುಶ್ರೂಷಕರಿಗೆ ಇರುತ್ತದೆ. ಎಲ್ಲ ಶುಶ್ರೂಷಕರಿಗೂ ಅಪಾಯ ಭತ್ಯೆ ನೀಡಬೇಕು' ಎಂದು ಶುಶ್ರೂಷಕರ ಸಂಘದ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷೆ ಸುನಿತಾ ನಾಯ್ಕ ಆಗ್ರಹಿಸಿದರು.

'ಪಿಪಿಇ ಕಿಟ್ ಧರಿಸಿ ಎಷ್ಟು ಮಂದಿ ಶುಶ್ರೂಷಕರು ಕೋವಿಡ್ ವಾರ್ಡ್‌ಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ ಎಂಬ ಲೆಕ್ಕ ಎಲ್ಲಿಯೂ ಇಲ್ಲ. ಕೆಲವು ಆಸ್ಪತ್ರೆಗಳನ್ನು ಕೋವಿಡ್ ಆಸ್ಪತ್ರೆ ಎಂದು ಘೋಷಿಸಲಾಗಿತ್ತು. ಹೀಗಾಗಿ ಅಪಾಯ ಭತ್ಯೆಗೆ ಯಾರ್‍ಯಾರ ಹೆಸರು ಸೂಚಿಸಬೇಕೆನ್ನುವ ಗೊಂದಲ ಸಹ ಆರೋಗ್ಯ ಇಲಾಖೆ ಅಧಿಕಾರಿಗಳಲ್ಲಿದೆ. ಅಲ್ಲದೆ, ತಮಗೆ ಆಪ್ತರಾದ ಶುಶ್ರೂಷಕರ ಹೆಸರನ್ನು ಸಹ ಶಿಫಾರಸು ಮಾಡುವ ಸಾಧ್ಯತೆಯಿದೆ' ಎಂದು ತಿಳಿಸಿದರು.

'ಪಟ್ಟಿ ತಿರಸ್ಕಾರ, ತಾರತಮ್ಯ ಏಕೆ?'

'ಕೋವಿಡ್ ಮೊದಲ ಅಲೆಯಲ್ಲಿ ಶುಶ್ರೂಷಕರಿಗೆ ಸರ್ಕಾರ ₹5 ಸಾವಿರ ಅಪಾಯ ಭತ್ಯೆ ಘೋಷಿಸಿತ್ತು. ಆಗ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಅಪಾಯ ಭತ್ಯೆ ಪಡೆಯಲು ಅರ್ಹರಾದ ಶುಶ್ರೂಷಕರ ಪಟ್ಟಿಯನ್ನು ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಿಗೆ ನೀಡಿತ್ತು. ಕೋವಿಡ್ ಕೇಂದ್ರದ ಹೊರತಾಗಿ, ಇತರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದವರ ಹೆಸರನ್ನೂ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಅದನ್ನು ತಿರಸ್ಕರಿಸಲಾಗಿತ್ತು. ಪರಿಷ್ಕೃತ ಪಟ್ಟಿ ನೀಡಲು ಅಧಿಕೃತರಿಗೆ ಸೂಚಿಸಲಾಗಿತ್ತು. ಇತರೆ ವಿಭಾಗದಲ್ಲಿ ಕೆಲಸ ಮಾಡುವ ಶುಶ್ರೂಷಕರಿಗೆ ಕೋವಿಡ್ ಅಪಾಯವಿಲ್ಲವೇ? ಈ ತಾರತಮ್ಯ ಯಾಕೆ' ಎಂದು ಹೆಸರು ಹೇಳಲಿಚ್ಛಿಸದ ಶುಶ್ರೂಷಕರೊಬ್ಬರು ಪ್ರಶ್ನಿಸಿದರು.

ವಿಡಿಯೊ ಸಂವಾದದಲ್ಲಿ ಸಿ.ಎಂ. ನೀಡಿದ ಭರವಸೆಯಂತೆ ಎಲ್ಲರಿಗೂ 'ಅಪಾಯ ಭತ್ಯೆ' ನೀಡಬೇಕು. ಈಗಾಗಲೇ ಹೊರಡಿಸಿರುವ ಆದೇಶ ಹಿಂಪಡೆದು, ಪರಿಷ್ಕೃತ ಆದೇಶ ಹೊರಡಿಸಬೇಕು

ರಾಜಕುಮಾರ ಮಳಗಿ, ಅಧ್ಯಕ್ಷ, ಶುಶ್ರೂಷಕರ ಸಂಘದ ರಾಜ್ಯ ಘಟಕ

'ಫ್ರಾಂಕ್ಲಿನ್ ಥಿಯೇಟರ್'ನಿಂದ ಸಂಚಾರಿ ವಿಜಯ್‌ಗೆ ಗೌರವ



ಬೆಂಗಳೂರು: ಇತ್ತೀಚೆಗೆ ಬೈಕ್ ಅಪಘಾತದಲ್ಲಿ ಮೃತಪಟ್ಟ ರಾಷ್ಟ್ರಪ್ರಶಸ್ತಿ ವಿಜೇತ ನಟ ಸಂಚಾರಿ ವಿಜಯ್ ಅವರಿಗೆ ಅಮೆರಿಕದ 'ಫ್ರಾಂಕ್ಲಿನ್ ಥಿಯೇಟರ್' ಗೌರವ ಸೂಚಿಸಿದೆ.

ಥಿಯೇಟರ್ ಎದುರಿಗಿರುವ ಎಲ್‌ಇಡಿ ಪರದೆಯಲ್ಲಿ 'ಸಂಚಾರಿ ವಿಜಯ್ ನಮ್ಮನ್ನಗಲಿದ್ದಾರೆ. ಆದರೆ ನಾವು ಅವರನ್ನು ಮರೆತಿಲ್ಲ' ಎಂದು ನಿರಂತರವಾಗಿ 24 ಗಂಟೆ ಈ ಸಂದೇಶವನ್ನು ಪ್ರದರ್ಶಿಸುವ ಮೂಲಕ, ವಿಜಯ್ ಅವರನ್ನು ಸ್ಮರಿಸಿದೆ. 'ಅಮೆರಿಕದಲ್ಲಿ ಕನ್ನಡ ಸಿನಿಮಾಗಳ ಪ್ರದರ್ಶಕರಾದ, ನಿರ್ಮಾಪಕ ರವಿ ಕಶ್ಯಪ್ ಅವರ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ಅಗಲಿದ ಕನ್ನಡದ ಕಲಾವಿದನನ್ನು ಗುರುತಿಸಿದ ಫ್ರಾಂಕ್ಲಿನ್ ಥಿಯೇಟರ್ ಮತ್ತು ಕಾರಣಕರ್ತರಾದ ರವಿಯವರಿಗೆ ವಂದನೆ. ವಿಜಯ್ ಅವರ ಪ್ರತಿಭೆಯನ್ನು ದೂರದ ಅಮೆರಿಕದಲ್ಲಿದ್ದುಕೊಂಡು ಸ್ಮರಿಸಿರುವುದು ಸಂತೋಷ' ಎಂದು ನಿರ್ದೇಶಕ ಬಿ.ಎಸ್. ಲಿಂಗದೇವರು ತಿಳಿಸಿದರು.

ಸಂಚಾರಿ ವಿಜಯ್ ನಿಧನವಾದ ಸಂದರ್ಭದಲ್ಲಿ ಚೆನ್ನೈಯಲ್ಲಿರುವ ಅಮೆರಿಕ ರಾಯಭಾರ ಕಚೇರಿ ಕೂಡಾ ಸಂತಾಪ ವ್ಯಕ್ತಪಡಿಸಿತ್ತು. 'ಚೆನ್ನೈನಲ್ಲಿರುವ ಅಮೆರಿಕ ದೂತಾವಾಸ ಕಚೇರಿಯಲ್ಲಿ 2018ರಲ್ಲಿ 'ಪ್ರೈಡ್' ತಿಂಗಳ ಆಚರಣೆಯ ಪ್ರಯುಕ್ತ ತೃತೀಯ ಲಿಂಗಿಗಳ ಸಮುದಾಯದ ಸಂಘರ್ಷವನ್ನು ಬಿಂಬಿಸುವ ಪ್ರಶಸ್ತಿ ವಿಜೇತ ಚಿತ್ರ 'ನಾನು ಅವನಲ್ಲ–ಅವಳು' ಪ್ರದರ್ಶನ ಮತ್ತು ಸಂವಾದದಲ್ಲಿ ಸಂಚಾರಿ ವಿಜಯ್ ಭಾಗಿಯಾಗಿದ್ದರು' ಎಂದು ಟ್ವೀಟ್ ಮೂಲಕ ಕಚೇರಿಯು ನೆನಪಿಸಿಕೊಂಡಿತ್ತು.

ಮೃತರ ಸಂಖ್ಯೆ 35 ಸಾವಿರದತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರಲ್ಲಿ 93 ಮಂದಿ ಮೃತಪಟ್ಟಿರುವುದು ಮಂಗಳವಾರ ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 35 ಸಾವಿರದತ್ತ (34,929) ಸಾಗಿದೆ.

ಮರಣ ಪ್ರಮಾಣ ದರವು ಶೇ 2.88ರಷ್ಟು ವರದಿಯಾಗಿದೆ. ಈ ತಿಂಗಳು 29 ದಿನಗಳಲ್ಲಿ 5,839 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಮೇ ತಿಂಗಳ ಮೊದಲ ವಾರದಲ್ಲಿ 500ರ ಗಡಿಗೆ ಏರಿಕೆ ಕಂಡಿದ್ದ ಮರಣ ಪ್ರಕರಣಗಳ ಸಂಖ್ಯೆ, ಕೆಲ ದಿನಗಳಿಂದ ನೂರರ ಗಡಿಯೊಳಗೆ ವರದಿಯಾಗುತ್ತಿದೆ.

ರಾಜ್ಯದಲ್ಲಿ ಹೊಸದಾಗಿ 3,222 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.26 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 2.54 ರಷ್ಟು ವರದಿಯಾಗಿದೆ. ರಾಜ್ಯದ 29 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ರ ಗಡಿಯೊಳಗಿವೆ. ಬೆಂಗಳೂರಿನಲ್ಲಿ 753 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಸಂಖ್ಯೆ 16 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.40 ಲಕ್ಷ ದಾಟಿದೆ.

ರಾಜ್ಯದ 21 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರಿನಲ್ಲಿ 16 ಮಂದಿ, ದಕ್ಷಿಣ ಕನ್ನಡದಲ್ಲಿ 15 ಹಾಗೂ ಮೈಸೂರಿನಲ್ಲಿ 10 ಮಂದಿ ಮೃತಪಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 85,997 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 14,724 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.19 ಲಕ್ಷ ದಾಟಿದೆ.

'ವಾತ್ಸಲ್ಯ ಕಾರ್ಯಕ್ರಮ' ರಾಜ್ಯಕ್ಕೆ ವಿಸ್ತರಿಸಲು ಚಿಂತನೆ

ಹಾವೇರಿ: 'ಕೊರೊನಾ ಮೂರನೇ ಅಲೆಯಿಂದ ಮಕ್ಕಳನ್ನು ರಕ್ಷಿಸಲು ಹಾವೇರಿ ಜಿಲ್ಲೆಯಲ್ಲಿ ಕೈಗೊಂಡಿರುವ 'ವಾತ್ಸಲ್ಯ' ಮಕ್ಕಳ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲು ಆರೋಗ್ಯ ಇಲಾಖೆ ಚಿಂತನೆ ನಡೆಸಿದೆ' ಎಂದು ಜಿಲ್ಲಾ ಪಂಚಾಯಿತಿ ಸಿಇಒ ಮೊಹಮ್ಮದ್ ರೋಶನ್ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲೆಯ 18 ವರ್ಷದೊಳಗಿನ 2.98 ಲಕ್ಷ ಮಕ್ಕಳ ಆರೋಗ್ಯ ತಪಾಸಣೆ ಮಾಡುವ ಗುರಿಯನ್ನು ರಾಜ್ಯದಲ್ಲೇ ಮೊದಲ ಬಾರಿಗೆ ಹಾಕಿಕೊಳ್ಳಲಾಗಿದೆ. ಜೂನ್ 25ರಿಂದ ಆರಂಭಗೊಂಡಿರುವ ಈ ಕಾರ್ಯಕ್ರಮ ಜುಲೈ 30ರೊಳಗೆ ಪೂರ್ಣಗೊಳ್ಳಲಿದೆ ' ಎಂದರು.



ಟ್ರ್ಯಾಕ್ಟರ್ ಚಲಾಯಿಸಿದ ಶಾಸಕಿ

ಕಾರವಾರ ಅಂಕೋಲಾ ಕ್ಷೇತ್ರದ ಶಾಸಕಿ ರೂಪಾಲಿ ನಾಯ್ಕ ಅಂಕೋಲಾ ತಾಲ್ಲೂಕಿನ ವಂದಿಗೆ ಗ್ರಾಮದಲ್ಲಿನ ಗದ್ದೆಯಲ್ಲಿ ಮಂಗಳವಾರ ಟ್ರ್ಯಾಕ್ಟರ್ ಚಲಾಯಿಸಿ 'ಫಲವತ್ತತೆಯೆಡೆಗೆ ಮೊದಲ ಹೆಜ್ಜೆ' ಎಂಬ ಕೃಷಿ ಚಟುವಟಿಕೆಗೆ ವಿನೂತನವಾಗಿ ಚಾಲನೆ ನೀಡಿದರು. ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಸಾಥ್ ನೀಡಿದರು

ಸರ್ಕಾರದ ವಿರುದ್ಧ ಎಚ್‌. ವಿಶ್ವನಾಥ್ ವಾಗ್ದಾಳಿ

'ಪರೀಕ್ಷೆ ನಡೆಸಿ ಸಾವಿನ ಕೂಪಕ್ಕೆ ತಳ್ಳುತ್ತಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಮೂಲಕ ಮಕ್ಕಳನ್ನು ಸಾವಿನ ಕೂಪಕ್ಕೆ ತಳ್ಳುತ್ತಿದೆ. ಇದು ಮಗುವನ್ನು ಮರೆತ ಸರ್ಕಾರ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಮಂಗಳವಾರ ಇಲ್ಲಿ ವಾಗ್ದಾಳಿ ನಡೆಸಿದರು.

'ಕೋವಿಡ್ ಮೂರನೇ ಅಲೆ ಹಾಗೂ ಡೆಲ್ಟಾ ಪ್ಲಸ್ ವೈರಾಣುವಿನ ಆತಂಕ ಎದುರಾಗಿದೆ. ಇಂಥ ಸಂದರ್ಭದಲ್ಲಿ ಪರೀಕ್ಷೆ ನಡೆಸಲು ಇವರಿಗೆ ಸಲಹೆ ನೀಡಿದವರು ಯಾರು? ಪರೀಕ್ಷೆ ನಡೆಸಲು ಏಕಿಷ್ಟು ಆತುರ? ಮಕ್ಕಳ ಮೇಲೆ ಈ ಸರ್ಕಾರಕ್ಕೆ ಸ್ವಲ್ಪವೂ ಕಾಳಜಿ ಇಲ್ಲವಾಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

'ಮನುಷ್ಯನ ಸಾವನ್ನು ಈ ಸರ್ಕಾರ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಈಗ, ಮಕ್ಕಳ ಜೀವದ ಜೊತೆ ಆಟವಾಡುತ್ತಿದೆ. ಮಕ್ಕಳು, ಶಿಕ್ಷಕರು ಹಾಗೂ ಪೋಷಕರನ್ನೂ ಸಾಯಿಸಲು ಹೊರಟಂತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಯನ್ನು ಕೇಂದ್ರ ಸರ್ಕಾರವೇ ರದ್ದು ಮಾಡಿದೆ. ಹಲವು ರಾಜ್ಯಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನೂ ರದ್ದು ಮಾಡಿವೆ. ಇಂಥ ಕಠಿಣ ಸಂದರ್ಭದಲ್ಲಿ ರಾಜ್ಯ ಸರ್ಕಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುತ್ತಿರುವುದೇ ಅವೈಜ್ಞಾನಿಕ. ಪಾಠ ಮಾಡದೆ ಪರೀಕ್ಷೆ ನಡೆಸುತ್ತಿರುವುದು ಜಗತ್ತಿನಲ್ಲಿ ಇದೇ ಮೊದಲು' ಎಂದರು.

'ಯಾವ ಹಾಗೂ ಯಾರ ಹಟಕ್ಕಾಗಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ಪರೀಕ್ಷೆ ನಡೆಸುತ್ತಿದ್ದಾರೋ ಗೊತ್ತಿಲ್ಲ. ಮಾಜಿ ಶಿಕ್ಷಣ ಸಚಿವರ ಸಲಹೆಯನ್ನೂ ಕೋರಿಲ್ಲ. ಆರೋಗ್ಯ ಸಚಿವರ ಗಮನಕ್ಕೂ ತಂದಿಲ್ಲ. ತಮಗೇ ಎಲ್ಲಾ ಗೊತ್ತು ಎಂಬ ಅಹಂ ಸುರೇಶ್ ಕುಮಾರ್ ಅವರಲ್ಲಿದೆ. ಸರ್ಕಾರ ನಡೆಸುವವರಿಗೆ ಬುದ್ಧಿ ಇದ್ದರೆ ಈ ಶಿಕ್ಷಣ ಸಚಿವರನ್ನು ಬದಲಾಯಿಸಬೇಕು' ಎಂದರು.

'ಶಿಕ್ಷಣ ಇಲಾಖೆ ಎಂಬುದು ಮಾರುಕಟ್ಟೆ ಅಲ್ಲ. ಇದು ಎಂಟೂವರೆ ಲಕ್ಷ ಮಕ್ಕಳ ಜೀವದ ಪ್ರಶ್ನೆ. ಅವರಲ್ಲಿ ಸುಮಾರು 2,300 ಮಕ್ಕಳು ಅಂಗವಿಕಲರಿದ್ದಾರೆ. ಹೀಗಾಗಿ, ಕೂಡಲೇ ಪರೀಕ್ಷೆ ನಡೆಸುವ ತೀರ್ಮಾನದಿಂದ ಹಿಂದೆ ಸರಿಯಬೇಕು' ಎಂದು ಆಗ್ರಹಿಸಿದರು.

'ಕೆಲ ತಜ್ಞರು ಸರ್ಕಾರದ ಮರ್ಜಿಯಲ್ಲಿದ್ದಾರೆ. ಡಾ.ದೇವಿಶೆಟ್ಟಿ ಅವರೇ ಮೂರನೇ ಅಲೆ ಬರುತ್ತದೆ ಎನ್ನುತ್ತಿದ್ದಾರೆ. ಆದರೆ, ಶಾಲೆ ತೆರೆಯಬಹುದು, ಪರೀಕ್ಷೆ ಮಾಡಬಹುದು ಎಂಬ ಸಲಹೆ ನೀಡುತ್ತಿದ್ದಾರೆ. ಏಕೆ ಎರಡೂ ರೀತಿಯ ಸಲಹೆ ನೀಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ' ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ: ಸಿಎಂ ಅವಕಾಶ ಕೊಟ್ಟ ಮೇಲೆ ಮುಗೀತು– ಸುಧಾಕರ್

ಮೈಸೂರು: 'ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಬಗ್ಗೆ ಮುಖ್ಯಮಂತ್ರಿ ಟ್ವೀಟ್ ಮಾಡಿದ ಮೇಲೆ, ಎಲ್ಲ ಗೊಂದಲ ಮುಗಿದಿದೆ. ಮುಖ್ಯಮಂತ್ರಿಗಳೇ ನಮ್ಮ ನಾಯಕರು. ಅವರು, ಪರೀಕ್ಷೆ ನಡೆಸಲು ಅವಕಾಶ ಕೊಟ್ಟ ಮೇಲೆ ಮುಗೀತು. ನನ್ನ ವೈಯಕ್ತಿಕ ಅಭಿಪ್ರಾಯ ಏನೂ ಇಲ್ಲ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಂಗಳವಾರ ಇಲ್ಲಿ ಪ್ರತಿಕ್ರಿಯಿಸಿದರು.

ಮತ್ತೊಂದು ಲಸಿಕೆಗೆ ಒಪ್ಪಿಗೆ

ಒಂದನೇ ಪುಟದಿಂದ

ಹಾಗಾಗಿ, ಲಸಿಕೆಯ ತುರ್ತು ಬಳಕೆಗೆ ಅನುಮೋದನೆ ಕೊಡಬೇಕು ಎಂದು ಮೊಡೆರ್ನಾ ಸಂಸ್ಥೆಯು ಔಷಧ ನಿಯಂತ್ರಕರಿಗೆ ಅರ್ಜಿ ಸಲ್ಲಿಸಿತ್ತು.

ಅಮೆರಿಕ, ಬ್ರಿಟನ್, ಐರೋಪ್ಯ ಒಕ್ಕೂಟ ಅಥವಾ ಜಪಾನ್ ಈ ಯಾವುದಾದರೂ ಒಂದು ದೇಶದ ಅನುಮೋದನೆ ಪಡೆದಿರುವ ಲಸಿಕೆಯನ್ನು ಭಾರತದಲ್ಲಿ ತುರ್ತು ಬಳಕೆಗೆ ಪರಿಗಣಿಸಬಹುದು ಎಂದು ಸರ್ಕಾರವು ನಿಯಮವನ್ನು ಇತ್ತೀಚೆಗೆ ಸಡಿಲಿಸಿದೆ.

– (ಮೈನಸ್) 25 ಡಿಗ್ರಿಯಿಂದ – (ಮೈನಸ್) 15 ಡಿಗ್ರಿ ಸೆಲ್ಸಿಯಸ್ ತಾಪದಲ್ಲಿ ಮೊಡೆರ್ನಾ ಲಸಿಕೆಯನ್ನು ಇರಿಸಬೇಕಾಗುತ್ತದೆ. ಈ ರೀತಿ ಇದನ್ನು ಏಳು ತಿಂಗಳವರೆಗೆ ಇರಿಸಬಹುದು. 30 ದಿನಗಳ ಒಳಗಿನ ಬಳಕೆಗಾದರೆ, ತೆರೆದಿಲ್ಲದ ಸೀಸೆಯನ್ನು 2–8 ಡಿಗ್ರಿ ಸೆಲ್ಸಿಯಸ್ ತಾಪದಲ್ಲಿ ಇರಿಸಬಹುದು.

ಗರ್ಭಿಣಿಯರಿಗೆ ಲಸಿಕೆ ಮಾರ್ಗಸೂಚಿ

ಒಂದನೇ ಪುಟದಿಂದ

ಗರ್ಭಧಾರಣೆಯಿಂದ ಕೊರೊನಾ ಸೋಂಕಿನ ಅಪಾಯ ಹೆಚ್ಚುವುದಿಲ್ಲ ಎಂದೂ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಗರ್ಭಿಣಿಯರಲ್ಲಿ ಲಕ್ಷಣಗಳಿಂದ ಕೂಡಿದ ಕೋವಿಡ್ ರೋಗ ಕಂಡು ಬಂದರೆ, ಅದು ತೀವ್ರವಾಗುವ ಅಪಾಯ ಇದೆ. ಸಾವು ಕೂಡ ಸಂಭವಿಸಬಹುದು. ರೋಗ ಲಕ್ಷಣಗಳು ತೀವ್ರಗೊಂಡರೆ, ಗರ್ಭಿಣಿಯರನ್ನು ಆಸ್ಪತ್ರೆಗೆ ದಾಖಲಿಸಬೇಕಾಗುತ್ತದೆ. ಅಧಿಕ ರಕ್ತದೊತ್ತಡ, ದಢೂತಿ ದೇಹ ಹೊಂದಿರುವವಿಗೆ ಕೋವಿಡ್‌ನಿಂದ ಅಪಾಯ ಹೆಚ್ಚು. 35 ವರ್ಷ ದಾಟಿದವರಲ್ಲಿ ರೋಗ ಲಕ್ಷಣಗಳು ತೀವ್ರಗೊಳ್ಳುವ ಸಾಧ್ಯತೆ ಹೆಚ್ಚು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಕೋವಿಡ್ ಲಸಿಕೆ ಲಭ್ಯತೆ, ಅದರ ಮೌಲ್ಯ ಮತ್ತು ಮುನ್ನೆಚ್ಚರಿಕೆಗಳ ಬಗ್ಗೆ ಮಾರ್ಗಸೂಚಿಯಲ್ಲಿ ವಿವರಗಳು ಇವೆ. ಇವುಗಳ ಆಧಾರದಲ್ಲಿ ಗರ್ಭಿಣಿಯರಿಗೆ ಮುಂಚೂಣಿ ಕಾರ್ಯಕರ್ತರು ಮತ್ತು ಲಸಿಕೆ ಹಾಕುವವರು ಆಪ್ತಸಮಾಲೋಚನೆ ಒದಗಿಸಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಮಾರ್ಗಸೂಚಿಯನ್ನು ಟಿಪ್ಪಣಿ ಅಥವಾ ಪ್ರಶ್ನೋತ್ತರ ರೂಪದಲ್ಲಿ ಸಿದ್ಧಪಡಿಸಲಾಗಿದೆ. ಹಾಗಾಗಿ, ಗರ್ಭಿಣಿಯರು ಮತ್ತು ಅವರ ಕುಟುಂಬದವರಿಗೆ ಲಸಿಕೆಗೆ ಸಂಬಂಧಿಸಿ ಎಲ್ಲ ಮಹತ್ವದ ಮಾಹಿತಿಯನ್ನು ಒದಗಿಸುವುದು ಆರೋಗ್ಯ ಕಾರ್ಯಕರ್ತರಿಗೆ ಸುಲಭವಾಗಲಿದೆ.

ಕೋವಿಡ್‌ನಿಂದ ಬಾಧಿತರಾದ ಗರ್ಭಿಣಿಯರಲ್ಲಿ ಶೇ 95 ಮಂದಿಗೆ ಆರೋಗ್ಯವಂತ ಮಗು ಜನಿಸಿದೆ. ಆದರೆ, ಕೆಲವರಿಗೆ ಅವಧಿಪೂರ್ವ ಹೆರಿಗೆ ಸಾಧ್ಯತೆ ಇದೆ. ಮಗುವಿನ ತೂಕ ಕಡಿಮೆ ಇರಬಹುದು ಎಂದೂ ಟಿಪ್ಪಣಿಯಲ್ಲಿ ಹೇಳಲಾಗಿದೆ.

ಭಾರತದಲ್ಲಿ ಲಭ್ಯವಿರುವ ಲಸಿಕೆಗಳು ಸುರಕ್ಷಿತ. ಆದರೆ, ಇತರ ಯಾವುದೇ ಔಷಧದ ಹಾಗೆ ಕೋವಿಡ್ ಲಸಿಕೆ ಕೂಡ ಕೆಲವು ಸೌಮ್ಯವಾದ ಅಡ್ಡಪರಿಣಾಮಗಳನ್ನು ಹೊಂದಿದೆ. ಲಸಿಕೆ ಹಾಕಿಸಿಕೊಂಡ 20 ದಿನಗಳ ಒಳಗೆ ಕೆಲವರಲ್ಲಿ (ಐದು ಲಕ್ಷಕ್ಕೆ ಒಬ್ಬರಲ್ಲಿ) ಕೆಲವು ಲಕ್ಷಣಗಳು ಕಾಣಿಸಿಕೊಳ್ಳಬಹುದು. ಅದರ ಬಗ್ಗೆ ತಕ್ಷಣ ಗಮನ ಹರಿಸಬೇಕು ಎಂದು ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

ಶೇ 50ರಷ್ಟು ಹಿರಿಯ ನಾಗರಿಕರಿಗೆ ಇನ್ನೂ ಸಿಗದ ಲಸಿಕೆ

ದೇಶದಲ್ಲಿ ಲಸಿಕೆ ಅಭಿಯಾನ ಆರಂಭವಾಗಿ ಐದು ತಿಂಗಳೇ ಕಳೆದಿದ್ದರೂ ಈವರೆಗೆ ಹಿರಿಯ ನಾಗರಿಕರಲ್ಲಿ ಶೇ 50ಕ್ಕಿಂತ ಕಡಿಮೆ ಜನರಿಗೆ ಒಂದು ಡೋಸ್ ಲಸಿಕೆಯಷ್ಟೇ ಲಭ್ಯವಾಗಿದೆ. ಇದು, ಅವರಿಗೆ ಸೋಂಕಿನ ವಿರುದ್ಧ ಭಾಗಶಃ ರಕ್ಷಣೆಯನ್ನಷ್ಟೇ ನೀಡಬಲ್ಲದಾಗಿದೆ.

ದೇಶದಲ್ಲಿ 60 ವರ್ಷ ಮೀರಿದ ನಾಗರಿಕರ ಜನಸಂಖ್ಯೆ ಸುಮಾರು 13.8 ಕೋಟಿ. ಇವರಲ್ಲಿ ಶೇ 49ರಷ್ಟು ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆ ದೊರೆತಿದೆ. ಅಪಾಯಕ್ಕೆ ಒಳಗಾಗಬಹುದಾದ ಸಾಧ್ಯತೆ ಹೆಚ್ಚಿರುವ ಈ ವರ್ಗದವರಿಗೆ ಲಸಿಕೆ ನೀಡುವ ಕಾರ್ಯ ಫೆಬ್ರುವರಿಯಲ್ಲಿ ಆರಂಭವಾಗಿತ್ತು.

'ಸದ್ಯ, ಶೇ 49ರಷ್ಟು ಹಿರಿಯ ನಾಗರಿಕರಿಗೆ ಲಸಿಕೆ ನೀಡಲಾಗಿದೆ. ಈ ವಯೋಮಾನದವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಿದ್ದು, ಹಿರಿಯ ನಾಗರಿಕರ ರಕ್ಷಣೆ ದೃಷ್ಟಿಯಿಂದ ಇದು ಕಡಿಮೆ ಸಾಧನೆಯಲ್ಲ' ಎಂದು ನೀತಿ ಆಯೋಗದ ಸದಸ್ಯ, ಕೋವಿಡ್ ಕುರಿತು ಸರ್ಕಾರದ ಪ್ರಧಾನ ಸಲಹೆಗಾರರೂ ಆದ ವಿ.ಕೆ.ಪಾಲ್ ಬಣ್ಣಿಸಿದರು.

ಅಂತೆಯೇ 45–59 ವರ್ಷದವರಲ್ಲಿ ಶೇ 42 ಜನರಿಗೆ, 18ರಿಂದ 44 ವರ್ಷದವರಲ್ಲಿ ಶೇ 15ರಷ್ಟು ಜನರಿಗೆ ಲಸಿಕೆಯ ಒಂದು ಡೋಸ್ ನೀಡಲಾಗಿದೆ. ಈ ವಯೋಮಾನದವರ ಜನಸಂಖ್ಯೆ ಕ್ರಮವಾಗಿ 20.9 ಕೋಟಿ ಮತ್ತು 59.7 ಕೋಟಿ ಇದೆ ಎಂದು ಪಾಲ್ ವಿವರಿಸಿದರು.

ಹಿರಿಯ ನಾಗರಿಕರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲು ಕೇಂದ್ರ ಸರ್ಕಾರವು ಕಳೆದ ತಿಂಗಳು ಮನೆಯ ಸಮೀಪದಲ್ಲಿಯೇ ಲಸಿಕೆ ಲಭ್ಯವಾಗುವಂತೆ ಲಸಿಕೆ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಿತ್ತು.

'ನಿರ್ದಿಷ್ಟ ವಯೋಮಾನದವರನ್ನು ಸೋಂಕು ಗುರುತಿಸಿ ಆಯ್ಕೆ ಮಾಡಿಕೊಳ್ಳುವುದಿಲ್ಲ. ಡೆಲ್ಟಾ ಪ್ಲಸ್ ರೂಪಾಂತರಿ ಸೋಂಕನ್ನೇ ಆಧರಿಸಿ ಹೇಳುವುದಾದರೆ ಲಸಿಕೆಯನ್ನೇ ಪಡೆಯದಿರುವ ಸಮೂಹದಿಂದ ಸೋಂಕು ಹಬ್ಬುವ ಆತಂಕ ಇದ್ದೇ ಇದೆ' ಎಂದು ಜಾರ್ಜ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಹೆಲ್ತ್‌ನ ಆರೋಗ್ಯ ಸಂಶೋಧಕ ಓಮನ್ ಜಾನ್ ಪ್ರತಿಕ್ರಿಯಿಸಿದರು.

ಸೇವಾ ಸಿಂಧು ಕೇಂದ್ರ: ಕಮಿಷನ್ ಹಾವಳಿ

ಒಂದನೇ ಪುಟದಿಂದ

ಖುದ್ದು ಹಾಜರಿಗೆ ಸೂಚನೆ: ಗುರುವಾರ ಪ್ರಕರಣದ ಮುಂದಿನ ವಿಚಾರಣೆ ನಡೆಯುವಾಗ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಿರುವಂತೆ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗೆ ವಿಭಾಗೀಯ ಪೀಠ ನಿರ್ದೇಶನ ನೀಡಿದೆ.

'₹ 2,000ದಂತಹ ಸಣ್ಣ ಮೊತ್ತ ಪಡೆಯಲು ಕಾರ್ಮಿಕರು ಎಷ್ಟು ಕಷ್ಟ ಪಡಬೇಕಿದೆ ಎಂಬುದನ್ನು ವರದಿ ತೆರೆದಿಟ್ಟಿದೆ. ನೋಂದಣಿ ಪ್ರಕ್ರಿಯೆ ಕ್ಲಿಷ್ಟಕರವಾಗಿರುವುದೂ ಉಲ್ಲೇಖವಾಗಿದೆ. ಇದರಿಂದಾಗಿಯೇ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಸೌಲಭ್ಯ ವಂಚಿತರಾಗುವ ಅಪಾಯವಿದೆ. ಇತರ ಕ್ಷೇತ್ರಗಳ ಅಸಂಘಟಿತ ಕಾರ್ಮಿಕರ ನೋಂದಣಿಯಲ್ಲಿ ಇರುವ ಸಮಸ್ಯೆಗಳನ್ನೂ ವರದಿ ವಿವರಿಸಿದೆ' ಎಂದು ನ್ಯಾಯಪೀಠ ಹೇಳಿದೆ.

ಕೇರಳದ ಗ್ರಾಮಗಳ ಹೆಸರು ಬದಲಾವಣೆ ಇಲ್ಲ: ಶಾಸಕ ಅಶ್ರಫ್

ಒಂದನೇ ಪುಟದಿಂದ

'ಕೇರಳ ಮುಖ್ಯಮಂತ್ರಿ ಕಚೇರಿಯನ್ನು ಮತ್ತು ಅವರ ಆಪ್ತ ಸಹಾಯಕರನ್ನು ಸಂಪರ್ಕಿಸಿ ಮಾಹಿತಿ ಪಡೆಯಲಾಗಿದೆ. ಕಾಸರಗೋಡು ಜಿಲ್ಲಾಧಿಕಾರಿಯನ್ನೂ ಫೋನ್ ಮೂಲಕ ಸಂಪರ್ಕಿಸಿ ಮಾಹಿತಿ ಪಡೆದಿದ್ದೇನೆ. ಈ ಮಾಹಿತಿ ಪ್ರಕಾರ ಸ್ಥಳ ನಾಮ ಬದಲಾವಣೆ ಬಗ್ಗೆ ಸುತ್ತೋಲೆಯನ್ನು ಕೇರಳ ಸರ್ಕಾರ ಹೊರಡಿಸಿಲ್ಲ' ಎಂದು ಹೇಳಿದ್ದಾರೆ.

'ಈ ನಡುವೆ ಪಡಿತರ ಚೀಟಿಯಲ್ಲಿ ಸಾಫ್ಟ್‌ವೇರ್ ಕಾರಣದಿಂದ ಕೆಲವು ಹೆಸರುಗಳ ಬದಲಾವಣೆ ಆಗಿರುವುದು ನಿಜ. ಇದು ತಾಂತ್ರಿಕ ಕಾರಣದಿಂದ ಉಂಟಾದ ಲೋಪ. ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ' ಎಂದು ಅಶ್ರಫ್ ತಿಳಿಸಿದ್ದಾರೆ.

'ಕಿರಿಕ್ ಪಾರ್ಟಿ' ಸಿನಿಮಾ ಹಾಡಿನ ವಿವಾದ ಸುಖಾಂತ್ಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನ್ಯಾಯಾಲಯದ ಮೆಟ್ಟಿಲೇರಿದ್ದ ಲಹರಿ ಸಂಸ್ಥೆ ಹಾಗೂ ನಟ ರಕ್ಷಿತ್ ಶೆಟ್ಟಿ ಅವರ ನಡುವಿನ ಹಕ್ಕುಸ್ವಾಮ್ಯದ ವಿವಾದ ಇದೀಗ ಮಾತುಕತೆ ಮೂಲಕವೇ ಬಗೆಹರಿದಿದೆ. ಇದಕ್ಕೆ ಸಾಕ್ಷ್ಯವೆಂಬಂತೆ, ಲಹರಿ ವೇಲು ಹಾಗೂ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಅವರ ಜೊತೆಗಿರುವ ಸೆಲ್ಫಿಯೊಂದನ್ನು ರಕ್ಷಿತ್ ಶೆಟ್ಟಿ ಟ್ವಿಟರ್‌ನಲ್ಲಿ ಅಪ್‌ಲೋಡ್ ಮಾಡಿದ್ದಾರೆ.


2016ರ ಡಿಸೆಂಬರ್‌ನಲ್ಲಿ ರಿಷಬ್ ಶೆಟ್ಟಿ ನಿರ್ದೇಶನದ 'ಕಿರಿಕ್ ಪಾರ್ಟಿ' ಚಿತ್ರದ ಬಿಡುಗಡೆ ವೇಳೆ ಲಹರಿ ಸಂಸ್ಥೆಯು ಸಿನಿಮಾ ಬಿಡುಗಡೆಗೆ ತಡೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿತ್ತು. 'ಶಾಂತಿ ಕ್ರಾಂತಿ' ಚಿತ್ರದ ಹಾಡನ್ನು ಅನುಮತಿ ಇಲ್ಲದೇ ಬಳಸಲಾಗಿದೆ ಎಂದು ಸಂಸ್ಥೆಯು ಆರೋಪಿಸಿತ್ತು. ಲಹರಿ ಸಂಸ್ಥೆಯು ದಾಖಲಿಸಿದ್ದ ಎರಡನೇ ಪ್ರಕರಣದ ವಿಚಾರಣೆಗೆ ಹಲವು ಬಾರಿ ಗೈರಾಗಿದ್ದರಿಂದಾಗಿ ರಕ್ಷಿತ್ ಶೆಟ್ಟಿ, ಅಜನೀಶ್ ಲೋಕನಾಥ್ ಅವರ ವಿರುದ್ಧ ಇತ್ತೀಚೆಗೆ ಜಾಮೀನುರಹಿತ ವಾರೆಂಟ್ ಜಾರಿಯಾಗಿತ್ತು.

2.24 ಕೋಟಿ ಡೋಸ್ ವಿತರಣೆ

ಒಂದನೇ ಪುಟದಿಂದ

ಕೇಂದ್ರ ಸಚಿವರ ಜತೆಗೆ ಚರ್ಚೆ: 'ಸದ್ಯವೇ ದೆಹಲಿ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ಲಸಿಕೆ ಪೂರೈಕೆಗೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಸಚಿವರಿಗೆ ಮನವಿ ಸಲ್ಲಿಸಲಾಗುವುದು. ರಾಜ್ಯದಲ್ಲಿ ಲಸಿಕೆ ಕೊರತೆಯಿಂದ ಒಂದು ದಿನವೂ ಅಭಿಯಾನ ಸ್ಥಗಿತವಾಗಿಲ್ಲ. ಪ್ರತಿ ದಿನ 2ಲಕ್ಷದಿಂದ 3 ಲಕ್ಷ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ಸುಮಾರು 5 ಲಕ್ಷ ಡೋಸ್ ಲಸಿಕೆ ದಾಸ್ತಾನು ಇದೆ. ಸಮಸ್ಯೆಯಾಗದಂತೆ ಕೇಂದ್ರ ಸರ್ಕಾರವು ಪೂರೈಕೆ ಮಾಡುತ್ತಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಅಂಕಿ ಅಂಶ



ರಾಜ್ಯದಲ್ಲಿ ಕೋವಿಡ್ ಲಸಿಕೆ ಪಡೆದವರ ವಿವರ (ಜೂ.29)

ವಿಂಗಡಣೆ	ಮೊದಲ ಡೋಸ್	ಎರಡನೇ ಡೋಸ್
ಆರೋಗ್ಯ ಕಾರ್ಯಕರ್ತರು	7,50,194	5,00,658
ಮುಂಚೂಣಿ ಕೋವಿಡ್ ಯೋಧರು	8,29,807	2,50,609
18ರಿಂದ 44 ವರ್ಷದವರು	62,85,222	90,428
45 ವರ್ಷ ಮೇಲ್ಪಟ್ಟವರು	1,08,77,243	8,34,460





ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	93.64	2,183	4,665
ಹಾರಂಗಿ	2,859	2,840.50	495	80
ಕಬಿನಿ	2284.00	2,275.72	1,262	700
ಹೇಮಾವತಿ	2,922	2,895.52	1,289	200
ಲಿಂಗನಮಕ್ಕಿ	1,819	1,785.40	2,199	-
ಸೂಪಾ (ಮೀ)	564	539.10	2,739	4,490
ಮಾಣಿ	594	573.76	530	-
ತುಂಗಭದ್ರಾ	1,633	1,608.50	3,895	260
ಮಲಪ್ರಭಾ	2079.5	2,062.60	1,201	194
ಘಟಪ್ರಭಾ	2175	2,133.48	4,441	120
ಭದ್ರಾ	186	154.5	1,737	82
ಆಲಮಟ್ಟಿ (ಮೀ)	519.6	517.43	20,451	20,451
ನಾರಾಯಣಪುರ (ಮೀ)	492.25	489.01	23,000	21,800

* ನೆಲಮಟ್ಟದಿಂದ

ಬೆಳಗಾವಿಯಲ್ಲಿ ಅಧಿವೇಶನ: ಸಿ.ಎಂ.ಗೆ ಸಭಾಪತಿ ಪತ್ರ

ಹುಬ್ಬಳ್ಳಿ: 'ಈ ಸಲ ಮುಂಗಾರು ಅಧಿವೇಶನವನ್ನು ಜುಲೈ ತಿಂಗಳಿನಲ್ಲಿ ಬೆಳಗಾವಿಯಲ್ಲೇ ನಡೆಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದೇನೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2018ರ ಬಳಿಕ ಬೆಳಗಾವಿಯಲ್ಲಿ ಅಧಿವೇಶನ ನಡೆದಿಲ್ಲ. ಅಲ್ಲೇ ನಡೆಸುವಂತೆ ಬರೆದ ಪತ್ರಕ್ಕೆ ಮುಖ್ಯಮಂತ್ರಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸಂಪುಟದಲ್ಲೂ ಈ ವಿಷಯ ಚರ್ಚೆಯಾಗಿಲ್ಲ. ಪರಿಷತ್ ಮುಖ್ಯಸಚೇತಕ ಮಹಾಂತೇಶ ಕವಟಗಿಮಠ ಅವರೂ ಬೆಳಗಾವಿಯಲ್ಲೇ ಅಧಿವೇಶನ ಕರೆಯಲು ವ್ಯವಸ್ಥೆ ಮಾಡಿ ಎಂದಿದ್ದಾರೆ' ಎಂದರು.

'ಶುಲ್ಕ ಪಾವತಿ: ಮಾರ್ಗಸೂಚಿ ರೂಪಿಸಿ''

ಹುಬ್ಬಳ್ಳಿ: 'ಲಾಕ್‌ಡೌನ್ ಮತ್ತು ಕೋವಿಡ್ ಕಾರಣದಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಶುಲ್ಕ ಸಂಗ್ರಹ ಕುರಿತು ಸಂಸ್ಥೆಗಳು ಹಾಗೂ ಪೋಷಕರ ಮಧ್ಯೆ ಗೊಂದಲ ಸೃಷ್ಟಿಯಾಗಿದೆ. ಇದನ್ನು ನಿವಾರಿಸಲು ಶುಲ್ಕ ಪಾವತಿಗೆ ಸರ್ಕಾರ ಮಾರ್ಗಸೂಚಿ ರೂಪಿಸಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ ನೀಡಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರಿಗಳು ಶಿಕ್ಷಣ ಸಂಸ್ಥೆಗಳನ್ನು ಅವುಗಳ ಆರ್ಥಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ಎ, ಬಿ, ಸಿ ಹಾಗೂ ಡಿ ಎಂದು ವರ್ಗೀಕರಿಸಬೇಕು. ಯಾರಿಗೂ ಹೊರೆಯಾಗದಂತೆ ರೂಪಿಸುವ ಅಗತ್ಯವಿದೆ. ಈ ಕುರಿತು, ಶಿಕ್ಷಣ ಸಚಿವರಿಗೆ ಪತ್ರ ಕೂಡ ಬರೆದಿದ್ದೇನೆ ಎಂದು ಅವರು ತಿಳಿಸಿದರು.

'ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿರುವ ಶಿಕ್ಷಣ ಸಂಸ್ಥೆಗಳು ಲಕ್ಷಗಟ್ಟಲೆ ಹಾಗೂ ಜಿಲ್ಲಾ ಮಟ್ಟದಲ್ಲಿರುವವು ಶೇ 50ರಷ್ಟು ಶುಲ್ಕ ಪಡೆಯುತ್ತವೆ. ಶೇ 30ರಷ್ಟು ಪಡೆಯುವ ತಾಲ್ಲೂಕು ಮಟ್ಟದಲ್ಲಿರುವ ಸಂಸ್ಥೆಗಳು ತೀರಾ ಕೆಳಮಟ್ಟದಲ್ಲಿವೆ. ಇಲ್ಲಿರುವ ಸಿಬ್ಬಂದಿ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಾರೆ. ಶುಲ್ಕವನ್ನೇ ಪಡೆಯದಿದ್ದರೆ ಈ ಸಂಸ್ಥೆಗಳು ಶೋಚನೀಯ ಸ್ಥಿತಿ ತಲುಪಲಿವೆ. ಹಾಗಾಗಿ, ಯಾರಿಗೂ ಹೊರೆಯಾಗದಂತೆ ಅಧಿಕಾರಿಗಳು ಶುಲ್ಕಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ರೂಪಿಸಿ, ಗೊಂದಲ ನಿವಾರಿಸಬೇಕು' ಎಂದರು.

ಬಂಡೀಪುರ ಸಫಾರಿ ಇಂದಿನಿಂದ ಆರಂಭ

ಗುಂಡ್ಲುಪೇಟೆ: ಲಾಕ್‌ಡೌನ್ ಕಾರಣಕ್ಕೆ ಸ್ಥಗಿತಗೊಂಡಿದ್ದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ, ಬುಧವಾರ ದಿಂದ (ಜೂನ್ 30) ಆರಂಭವಾಗಲಿದೆ.

'ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಬರುತ್ತಿದ್ದು, ಲಾಕ್‌ಡೌನ್ ನಿಯಮಗಳನ್ನು ಸಡಿಲಗೊಳಿಸಿರುವುದರಿಂದ ಬಂಡೀಪುರ ಹುಲಿಯೋಜನೆ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಚಟುವಟಿಕೆಯನ್ನು ಪುನರಾರಂಭ ಮಾಡಲಾಗುತ್ತಿದೆ. ಜೂನ್ 30ರಿಂದ ಸಫಾರಿ ಆರಂಭಿಸಲಾಗುತ್ತಿದೆ' ಎಂದು ಹುಲಿಯೋಜನೆ ನಿರ್ದೇಶಕ ಎಸ್.ಆರ್. ನಟೇಶ್ ತಿಳಿಸಿದ್ದಾರೆ.

ಮಕ್ಕಳಲ್ಲಿ ಅಪೌಷ್ಟಿಕತೆ: ತಜ್ಞರ ತಂಡದಿಂದ ಅಧ್ಯಯನ

ರಾಯಚೂರು: ಜಿಲ್ಲೆಯಲ್ಲಿ 40 ಸಾವಿರ ಮಕ್ಕಳು ಸಾಧಾರಣ ಅಪೌಷ್ಟಿಕ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅವರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಕ್ರಮಗಳನ್ನು ಶಿಫಾರಸು ಮಾಡುವುದಕ್ಕಾಗಿ ಚೆನ್ನೈ ಹಾಗೂ ಹೈದರಾಬಾದ್‌ನಿಂದ ಆರು ವಿಜ್ಞಾನಿಗಳ ತಂಡ ಜಿಲ್ಲೆಗೆ ಬಂದಿದೆ.

ಚೆನ್ನೈನ ರಾಷ್ಟ್ರೀಯ ಕೀಟವಿಜ್ಞಾನ ಸಂಸ್ಥೆ (ಎನ್‌ಐಇ) ವಿಜ್ಞಾನಿಗಳಾದ ಡಾ. ಮುರುಗನ್, ಡಾ.ಸುಬ್ರಮಣಿ, ಡಾ.ಹೇಮಂತ, ಡಾ.ದೀಪಕ್ ಸಾವಡೆ, ಹೈದರಾಬಾದ್‌ನ ರಾಷ್ಟ್ರೀಯ ಪೌಷ್ಟಿಕ ಸಂಸ್ಥೆ (ಎನ್‌ಐಎನ್)ಯ ವಿಜ್ಞಾನಿಗಳಾದ ಡಾ.ಲಕ್ಷ್ಮಯ್ಯ, ಡಾ. ರಾಮಕೃಷ್ಣ ಅವರು ಎರಡು ದಿನಗಳಿಂದ ಜಿಲ್ಲೆಯ ಆಯ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಅಪೌಷ್ಟಿಕ ಮಕ್ಕಳ ಪೋಷಕರನ್ನು ಭೇಟಿ ಮಾಡಿ ಅಧ್ಯಯನ ಮಾಡುತ್ತಿದ್ದಾರೆ.

ಜಿಲ್ಲಾಧಿಕಾರಿ ಆರ್. ವೆಂಕಟೇಶಕುಮಾರ್ ಈ ಬಗ್ಗೆ ಪ್ರತಿಕ್ರಿಯಿಸಿ, 'ಕೋವಿಡ್ 3ನೇ ಅಲೆ ಸಾಧ್ಯತೆ ಇರುವುದರಿಂದ ಅಪೌಷ್ಟಿಕ ಮಕ್ಕಳ ಸುರಕ್ಷತೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡುವಂತೆ ಕೋರಿಕೆ ಸಲ್ಲಿಸಿದ್ದೆವು. ಹೀಗಾಗಿ ಅವರು ಅಧ್ಯಯನ ನಡೆಸಿದ್ದಾರೆ' ಎಂದರು.

'ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿಯಲ್ಲಿ ವಿಜ್ಞಾನಿಗಳು ಮಾಹಿತಿ ಕಲೆ ಹಾಕುತ್ತಿದ್ದಾರೆ. ಇನ್ನೂ ಮೂರು ದಿನ ಇಲ್ಲಿಯೇ ಉಳಿಯಲಿದ್ದಾರೆ. ಮುಂದಿನ ಆರು ತಿಂಗಳಲ್ಲಿ ಈ ಮಕ್ಕಳಿಗೆ ಏನು ಕೊಡಬೇಕು ಎಂಬುದರ ಬಗ್ಗೆ ಅವರು ತ್ವರಿತವಾಗಿ ವರದಿ ನೀಡಲಿದ್ದಾರೆ. ದೀರ್ಘಾವಧಿ ಕ್ರಮಗಳ ಬಗ್ಗೆಯೂ ನಂತರ ವರದಿ ಕೊಡಲಿದ್ದಾರೆ' ಎಂದರು.

ಗೌರಿ ಲಂಕೇಶ್ ಹತ್ಯೆ: ರಾಜ್ಯ ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ



ನವದೆಹಲಿ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಆರೋಪಿಯ ವಿರುದ್ಧ ದಾಖಲಾಗಿದ್ದ ಆರೋಪಗಳನ್ನು ರದ್ದುಗೊಳಿಸಿರುವ ರಾಜ್ಯ ಹೈಕೋರ್ಟ್‌ನ ಆದೇಶ ಪ್ರಶ್ನಿಸಲಾದ ಅರ್ಜಿಯ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಈ ಸಂಬಂಧ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಕೆಸಿಒಸಿಎ) ಅಡಿ ಮೋಹನ್ ನಾಯಕ್ ವಿರುದ್ಧ ದಾಖಲಾಗಿದ್ದ ಆರೋಪಗಳನ್ನು ರದ್ದುಪಡಿಸಿ ರಾಜ್ಯ ಹೈಕೋರ್ಟ್ ಏಪ್ರಿಲ್ 22ರಂದು ಆದೇಶ ನೀಡಿತ್ತು.

ಈ ಆದೇಶ ಪ್ರಶ್ನಿಸಿ ಗೌರಿ ಅವರ ಸೋದರಿ ಕವಿತಾ ಲಂಕೇಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಮಂಗಳವಾರ ನಡೆಸಿದ ನ್ಯಾಯಮೂರ್ತಿ ಎ.ಎಂ. ಖನ್ವಿಲ್ಕರ್ ನೇತೃತ್ವದ ಪೀಠವು, ರಾಜ್ಯ ಸರ್ಕಾರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮೂಲದ ಆರೋಪಿ ಮೋಹನ್ ನಾಯಕ್‌ಗೆ ನೋಟಿಸ್ ನೀಡಿದ್ದು, ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ಹೈಕೋರ್ಟ್ ಆದೇಶದ ನಂತರ ಆರೋಪಿಯು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದು, ವಿಚಾರಣೆಯು ಪೂರ್ಣಗೊಂಡಿದೆ. ಆದರೆ, ಇದೀಗ ವಿಚಾರಣೆ ನಡೆದಿರುವ ಪ್ರಕರಣದ ವಿಲೇವಾರಿ ಆಗುವವರೆಗೆ ಆರೋಪಿಗೆ ಜಾಮೀನು ನೀಡಕೂಡದು ಎಂದು ಕವಿತಾ ಪರ ವಕೀಲರಾದ ಹುಜೇಫಾ ಅಹ್ಮದಿ ಹಾಗೂ ಅಪರ್ಣಾ ಭಟ್ ನ್ಯಾಯಪೀಠದ ಎದುರು ವಾದ ಮಂಡಿಸಿದರು.

ಗೌರಿ ಹತ್ಯೆ ಮಾತ್ರವಲ್ಲದೆ, ಇತರ ಅನೇಕ ಸಂಘಟಿತ ಅಪರಾಧಗಳಲ್ಲಿ ಭಾಗಿಯಾಗಿರುವ ಪುಣೆಯ ಅಮೋಲ್ ಕಾಳೆ ನೇತೃತ್ವದ ಗುಂಪಿನಲ್ಲಿ ಮೋಹನ್ ನಾಯಕ್ ಸದಸ್ಯನಾಗಿದ್ದಾನೆ ಎಂಬುದು ಪ್ರಕರಣದ ತನಿಖೆ ನಡೆಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಲ್ಲಿಸಿರುವ ವರದಿಯಿಂದ ತಿಳಿದುಬಂದಿದೆ ಎಂದು ಅವರು ಹೇಳಿದರು.

2017ರ ಸೆಪ್ಟೆಂಬರ್ 5ರಂದು ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ತಮ್ಮ ನಿವಾಸದ ಎದುರು ಗೌರಿ ಲಂಕೇಶ್ ಅವರು ಹತ್ಯೆಗೊಳಗಾಗುವ ಮೊದಲು ಮತ್ತು ನಂತರ ಮೋಹನ್ ನಾಯಕ್ ಆರೋಪಿಗಳಿಗೆ ಆಶ್ರಯ ದೊರಕಿಸುವಲ್ಲಿ ಸಕ್ರಿಯನಾಗಿದ್ದಲ್ಲದೆ, ಹಲವಾರು ಪಿತೂರಿಗಳಲ್ಲಿ ಭಾಗಿಯಾಗಿದ್ದಾನೆ ಎಂದೂ ಅವರು ವಿವರಿಸಿದರು.

ದೆಹಲಿ: ಮತ್ತೆ ಫಡಣವೀಸ್ ಭೇಟಿಯಾದ ರಮೇಶ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಗಳವಾರ ಮಧ್ಯಾಹ್ನ ದಿಢೀರ್ ಇಲ್ಲಿಗೆ ಬಂದಿರುವ ಗೋಕಾಕ ಶಾಸಕ ರಮೇಶ್ ಜಾರಕಿಹೊಳಿ, ಬಿಜೆಪಿ ಮುಖಂಡ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಆರ್‌ಎಸ್‌ಎಸ್ ಮುಖಂಡರೊಬ್ಬರ ನಿವಾಸದಲ್ಲಿದ್ದ ಫಡಣವೀಸ್ ಅವರೊಂದಿಗೆ ರಮೇಶ್ 45 ನಿಮಿಷ ಮಾತುಕತೆ ನಡೆಸಿದರು.

'ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಕಾರಣವಾಗಿರುವ ಲೈಂಗಿಕ ಹಗರಣದ ಸಿ.ಡಿ.ಬಿಡುಗಡೆ ಪ್ರಕರಣದಿಂದ ಮುಕ್ತಗೊಳಿಸಿ, ಮತ್ತೆ ಸಚಿವ ಸ್ಥಾನ ಕೊಡಿಸಬೇಕು' ಎಂದು ಅವರು ಫಡಣವೀಸ್ ಬಳಿ ಮನವಿ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಕಳೆದ ವಾರವೂ ಫಡಣವಿಸ್ ಅವರನ್ನು ಮುಂಬೈನಲ್ಲಿ ಭೇಟಿ ಮಾಡಿದ್ದ ಜಾರಕಿಹೊಳಿ, ದೆಹಲಿಯಲ್ಲಿ ಬಿಜೆಪಿಯ ಇನ್ನೂ ಕೆಲವು ಹಿರಿಯ ಮುಖಂಡರನ್ನು ಭೇಟಿ ಮಾಡಿ ಈ ಸಂಬಂಧ ಮನವಿ ಸಲ್ಲಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಫಡಣವೀಸ್ ಭೇಟಿಗೂ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಿನ್ನೆ ರಾತ್ರಿ ನನಗೆ ಪ್ರಮುಖರೊಬ್ಬರಿಂದ ಕರೆ ಬಂದಿದ್ದು, ಅವರ ಭೇಟಿಗೆ ಬಂದಿದ್ದೇನೆ' ಎಂದರು.

'ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಂದ ನನಗೆ ಅನ್ಯಾಯ ಆಗಿಲ್ಲ. ಪಕ್ಷದಲ್ಲಿ ಇರುವ ಮೂವರು ನನ್ನ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸಲೆಂದೇ ಇಲ್ಲಿಗೆ ಬಂದಿದ್ದೇನೆ. ಶೀಘ್ರವೇ ನಿಮಗೆ ವಿಷಯ ತಿಳಿಯಲಿದೆ' ಎಂದು ಹೇಳಿದರು.

ಆದರೆ ಮೂವರ ಹೆಸರು ಬಹಿರಂಗ ಪಡಿಸಲಿಲ್ಲ. ಎರಡು ದಿನಗಳ ಹಿಂದಷ್ಟೇ ಮೈಸೂರಿನಲ್ಲಿ ಸುತ್ತೂರು ಮಠದ ಸ್ವಾಮೀಜಿಯವರನ್ನು ಭೇಟಿಯಾಗಿ ಬಂದಿದ್ದ ರಮೇಶ್ ಜಾರಕಿಹೊಳಿ, ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಪ್ರಕಟಿಸಿದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ನೇಮಕದ ಕುರಿತು ಚರ್ಚೆ

ಡಿಕೆಶಿ ನಿವಾಸಕ್ಕೆ ಮುಖಂಡರ ದಂಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಪದಾಧಿಕಾರಿಗಳು, ಜಿಲ್ಲಾ ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಬದಲಾವಣೆ ಪ್ರಕ್ರಿಯೆ ಆರಂಭವಾಗಿರುವ ಕಾರಣದಿಂದ ಕಾಂಗ್ರೆಸ್‌ನ ಹಲವು ಮುಖಂಡರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮನೆಗೆ ಮಂಗಳವಾರ ತಂಡೋಪತಂಡವಾಗಿ ಭೇಟಿ ನೀಡಿ, ಸಮಾಲೋಚನೆ ನಡೆಸಿದರು.

ಶಾಸಕ ಯಶವಂತರಾಯಗೌಡ ಪಾಟೀಲ, ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ ಮಾನೆ, ಮಾಜಿ ಶಾಸಕ ಸಿ.ಎಸ್.ನಾಡಗೌಡ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಎಂ.ಡಿ. ಲಕ್ಷ್ಮೀನಾರಾಯಣ ಒಂದು ತಂಡದಲ್ಲಿ ಭೇಟಿ ಮಾಡಿದರು. ಇದಾದ ಕೆಲ ಹೊತ್ತಿನಲ್ಲೇ ಶಾಸಕ ಬಿ. ನಾಗೇಂದ್ರ, ಕೆಪಿಸಿಸಿ ಮಾಜಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ ಮತ್ತು ಎಐಸಿಸಿ ಕಾರ್ಯದರ್ಶಿ ಐವನ್ ಡಿಸೋಜ ಪ್ರತ್ಯೇಕವಾಗಿ ಶಿವಕುಮಾರ್ ಅವರನ್ನು ಭೇಟಿಮಾಡಿ, ಚರ್ಚಿಸಿದರು.

ಶಾಸಕರಾದ ಶಿವಶಂಕರ ರೆಡ್ಡಿ, ಡಿ.ಎಸ್. ಹೂಲಗೇರಿ, ಮಾಜಿ ಶಾಸಕ ಕೆ.ಎನ್. ರಾಜಣ್ಣ ಕೂಡ ಕೆಪಿಸಿಸಿ ಅಧ್ಯಕ್ಷರನ್ನು ಭೇಟಿಯಾದರು. ರಾಜಣ್ಣ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಭೇಟಿಗಾಗಿ ಅವರ ಮನೆಗೆ ಬಂದಿದ್ದರು. ಆದರೆ, ರಮೇಶ ಜಾರಕಿಹೊಳಿ ದೆಹಲಿ ಪ್ರವಾಸದಲ್ಲಿರುವ ಕಾರಣದಿಂದ ಭೇಟಿ ಸಾಧ್ಯವಾಗಲಿಲ್ಲ. ಪಕ್ಕದಲ್ಲೇ ಇದ್ದ ಶಿವಕುಮಾರ್ ಮನೆಗೂ ಬಂದ ರಾಜಣ್ಣ, ಕೆಲಕಾಲ ಸಮಾಲೋಚನೆ ನಡೆಸಿದರು.

ಇಬ್ಬರು ಕಾರ್ಯಾಧ್ಯಕ್ಷರ ಭೇಟಿ: ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ಬೆಳಗಾವಿ ವಿಭಾಗದ ಉಸ್ತುವಾರಿ ಸತೀಶ ಜಾರಕಿಹೊಳಿ ಮತ್ತು ಮೈಸೂರು ವಿಭಾಗದ ಉಸ್ತುವಾರಿ ಸಲೀಂ ಅಹ್ಮದ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ನೇಮಕಕ್ಕೆ ಸಂಬಂಧಿಸಿದಂತೆ ಕೆಲವರ ಹೆಸರುಗಳ ಪಟ್ಟಿಗಳನ್ನು ಕೆಪಿಸಿಸಿ ಅಧ್ಯಕ್ಷರಿಗೆ ನೀಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಶಿವಕುಮಾರ್ ಅವರನ್ನು ಭೇಟಿಮಾಡಿದ ಬಹುತೇಕ ಮುಖಂಡರು, ಕೆಪಿಸಿಸಿ ಪದಾಧಿಕಾರಿಗಳು ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ನೇಮಕಾತಿ ಕುರಿತು ಚರ್ಚಿಸಿದರು. ತಮ್ಮ ಆಪ್ತರಿಗೆ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನ ನೀಡುವಂತೆ ಒತ್ತಡ ಹೇರುವ ಪ್ರಯತ್ನ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿ. ನಾರಾಯಣಸ್ವಾಮಿ ಭೇಟಿ: ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕಗಳಲ್ಲಿ ಒಂದಾಗಿರುವ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಮಾಜಿ ಸಂಸದ ಸಿ. ನಾರಾಯಣಸ್ವಾಮಿ ಮತ್ತು ಸಂಚಾಲಕರಾಗಿ ನೇಮಕಗೊಂಡಿರುವ ವಿಜಯ್ ಸಿಂಗ್ ಕೂಡ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಮಾಡಿ, ಚರ್ಚಿಸಿದರು.

ಯತ್ನಾಳ್– ಯೋಗೇಶ್ವರ್ ಮಾತುಕತೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಪ್ರವಾಸೋದ್ಯಮ ಸಚಿವ ಸಿ.ಪಿ.ಯೋಗೇಶ್ವರ್ ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಂಗಳವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಕೆಲ ಹೊತ್ತು ಗೋಪ್ಯ ಮಾತುಕತೆ ನಡೆಸಿದ್ದು, ರಾಜಕೀಯವಾಗಿ ಸಾಕಷ್ಟು ಕುತೂಹಲ ಕೆರಳಿಸಿದೆ.


ನಗರದಲ್ಲಿ ಮಂಗಳವಾರ ಪ್ರವಾಸೋದ್ಯಮ ಇಲಾಖೆ ವತಿಯಿಂದ ಕೈಗೊಂಡಿರುವ ಐತಿಹಾಸಿಕ ಸ್ಮಾರಕ ಆನಂದ್ ಮಹಲ್ ನವೀಕರಣ ಕಾರ್ಯಕ್ಕೆ ಚಾಲನೆ ನೀಡಲು ಯೋಗೇಶ್ವರ್ ಆಗಮಿಸಿದ್ದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಪುತ್ರ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಬಂಡಾಯ ಎದ್ದಿರುವ ಈ ಇಬ್ಬರ ಗೋಪ್ಯ ಭೇಟಿ ಮಹತ್ವ ಪಡೆದಿದೆ.

'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಒಳ್ಳೆಯ ದಿನಗಳು ಬರಲಿ. ಅವರಿಗೆ ಸದಾಕಾಲ ನನ್ನ ಬೆಂಬಲ ಇದೆ. ಅವರು ನನ್ನ ಸ್ನೇಹಿತರು' ಎಂದು ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಯೋಗೇಶ್ವರ್ ಹೇಳಿದರು.

ಸ್ವಾಮೀಜಿ ಭೇಟಿ: ವಿಜಯಪುರದ ಕಾರ್ಯಕ್ರಮದ ಬಳಿಕ ಯೋಗೇಶ್ವರ್ ಅವರು ಸಾಯಂಕಾಲ ಬಾಗಲಕೋಟೆಯ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯಮೃತ್ಯುಂಜಯ ಸ್ವಾಮೀಜಿಯವರನ್ನು ಭೇಟಿಯಾದರು. ಶ್ರೀಗಳ ಕೊಠಡಿಯಲ್ಲಿ ಸುಮಾರು 45 ನಿಮಿಷಗಳ ಕಾಲ ಸಚಿವರು ಚರ್ಚೆ ನಡೆಸಿದರು.

'ತೀರ್ಪಿಗಾಗಿ ಕಾಯುತ್ತಿದ್ದೇವೆ'



ಯೋಗೇಶ್ವರ್

ಕಲಬುರ್ಗಿ: ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಕುರಿತಂತೆ ಮಂಗಳವಾರ ಇಲ್ಲಿ ಮಾತನಾಡಿದ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್, 'ವಾದ–ವಿವಾದ ಮುಗಿದಿದೆ. ಜಡ್ಜ್‌ಮೆಂಟ್‌ಗಾಗಿ ಕಾಯುತ್ತಿದ್ದೇವೆ' ಎಂದು ಚುಟುಕಾಗಿ ತಿಳಿಸಿದರು.

'ನಮ್ಮ ವರಿಷ್ಠರು ಕೊರೊನಾದಲ್ಲಿ ಮಾರ್ಗಸೂಚಿ ಕೊಟ್ಟ ಹಾಗೆ ಇದಕ್ಕೂ ಏನಾದರೂ ಕೊಡುತ್ತಾರೆ. ಭಾರತೀಯ ಜನತಾ ಪಕ್ಷದ ಕಾರ್ಯಕರ್ತನಾಗಿ ನನ್ನ ಭಾವನೆಗಳನ್ನು ಹೇಳಿಕೊಂಡಿದ್ದೇನೆ. ನಮ್ಮ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಏನಾದರೂ ಇದ್ದರೆ ಸರಿ ಮಾಡಿಕೊಂಡು ಹೋಗುತ್ತೇವೆ' ಎಂದು ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ರಮೇಶ ಜಾರಕಿಹೊಳಿ ನಮ್ಮ ಸ್ನೇಹಿತರು. ಅವರು ನಮ್ಮ ಸಂಪರ್ಕದಲ್ಲಿದ್ದಾರೆ. ಎಲ್ಲ ಸರಿ ಹೋಗುತ್ತದೆ. ಪಕ್ಷ ಅವರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ' ಎಂದರು.

'ಸಿದ್ದರಾಮಯ್ಯ ಇರುವವರೆಗೂ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಆಗುವ ಅವಕಾಶ ಕೊಡುವುದಿಲ್ಲ. ಶಿವಕುಮಾರ್ ಕನಸು ಕಾಣುತ್ತಿದ್ದಾರೆ ಕಾಣಲಿ' ಎಂದು ವ್ಯಂಗ್ಯವಾಡಿದರು.

ಜುಲೈ 19ರಿಂದ ಸಂಸತ್ತಿನ ಮುಂಗಾರು ಅಧಿವೇಶನ ಸಾಧ್ಯತೆ

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನವು ಜುಲೈ 19ರಂದು ಆರಂಭವಾಗಿ, ಆಗಸ್ಟ್ 13ಕ್ಕೆ ಅಂತ್ಯಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸುಮಾರು ಒಂದು ತಿಂಗಳ ಕಾಲ ನಡೆಯಬೇಕಾಗಿದ್ದ ಅಧಿವೇಶನವು ಈ ಸಲ 20 ದಿನ ಮಾತ್ರ ನಡೆಯಲಿದೆ. ಸಾಮಾನ್ಯವಾಗಿ ಮುಂಗಾರು ಅಧಿವೇಶನ ಜುಲೈ ಮೂರನೇ ವಾರದಲ್ಲಿ ಆರಂಭವಾಗಿ, ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ಕೊನೆಗೊಳ್ಳುವುದು ವಾಡಿಕೆ. ಆದರೆ, ಈ ಬಾರಿ ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿಯ ಶಿಫಾರಸಿನ ಮೇಲೆ ಅಧಿವೇಶನದ ಅವಧಿಯನ್ನು ನಿಗದಿಪಡಿಸುವ ಸಾಧ್ಯತೆ ಇದೆ. ಕೋವಿಡ್ ಮಾರ್ಗಸೂಚಿ ಪಾಲಿಸಲು ಸಂಸತ್ತಿನ ಆವರಣ ಸಿದ್ಧಗೊಳಿಸಲಾಗುತ್ತದೆ. ಅಧಿವೇಶನ ವೇಳೆ ಸಂಸತ್ ಭವನದ ಆವರಣ ಪ್ರವೇಶಿಸುವವರು ಕನಿಷ್ಠ ಒಂದು ಡೋಸ್ ಲಸಿಕೆ ತೆಗೆದುಕೊಂಡಿರಬೇಕು ಎಂಬುದನ್ನು ಕಡ್ಡಾಯಗೊಳಿಸಲಾಗುತ್ತದೆ.

ಆರ್‌ಜಿಪಿಆರ್‌ಎಸ್ ರಾಜ್ಯ ಘಟಕಕ್ಕೆ ಸಿ. ನಾರಾಯಣಸ್ವಾಮಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ಕೇಂದ್ರೀಕರಿಸಿ ಕಾರ್ಯನಿರ್ವಹಿಸುತ್ತಿರುವ ಕಾಂಗ್ರೆಸ್‌ನ ಮುಂಚೂಣಿ ಘಟಕ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ (ಆರ್‌ಜಿಪಿಆರ್‌ಎಸ್) ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಜಿ ಸಂಸದ ಸಿ. ನಾರಾಯಣಸ್ವಾಮಿ ಅವರನ್ನು ನೇಮಿಸಲಾಗಿದೆ.

ಆರ್‌ಜಿಪಿಆರ್‌ಎಸ್ ರಾಷ್ಟ್ರೀಯ ಅಧ್ಯಕ್ಷೆ ಮೀನಾಕ್ಷಿ ನಟರಾಜನ್ ಆದೇಶ ಹೊರಡಿಸಿದ್ದು, ರಾಜ್ಯದಲ್ಲಿ ಅಧಿಕಾರ ವಿಕೇಂದ್ರೀಕರಣ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಸೂಚಿಸಿದ್ದಾರೆ.

ಆರ್‌ಜಿಪಿಆರ್‌ಎಸ್ ರಾಜ್ಯ ಘಟಕದ ಸಂಚಾಲಕರನ್ನಾಗಿ ವಿಧಾನ ಪರಿಷತ್ ಸದಸ್ಯ ವಿಜಯ್ ಸಿಂಗ್ ಮತ್ತು ಸಹ ಸಂಚಾಲಕರಾಗಿ ಬೆಂಗಳೂರು ನಗರದ ಅಂಜಲಿ (ಬೆಂಗಳೂರು ವಿಭಾಗ), ಬೆಳಗಾವಿ ಜಿಲ್ಲೆಯ ಉಮೇಶ್ ಎಸ್. ಬಾಲಿ (ಬೆಳಗಾವಿ ವಿಭಾಗ), ಉಡುಪಿ ಜಿಲ್ಲೆಯ ರೋಷ್ನಿ ಒಲಿವರ್ (ಮೈಸೂರು ವಿಭಾಗ), ಕಲಬುರ್ಗಿ ಜಿಲ್ಲೆಯ ಶೌಕತ್ ಅಲಿ (ಕಲಬುರ್ಗಿ ವಿಭಾಗ)ಅವರನ್ನು ನೇಮಿಸಲಾಗಿದೆ.

ಬೆಂಗಳೂರು ನಗರದ ವೆಂಕಟೇಶ್ ಅವರನ್ನು ಆರ್‌ಜಿಪಿಆರ್‌ಎಸ್ ರಾಷ್ಟ್ರೀಯ ಸಂಚಾಲಕರನ್ನಾಗಿ ನೇಮಿಸಲಾಗಿದೆ.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ: ಗೌರವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಹರೇಕಳ ಹಾಜಬ್ಬ


ಮಂಗಳೂರು: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ 2021ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ಗೌರವ ಪುರಸ್ಕಾರ ಪಟ್ಟಿಯನ್ನು ಅಕಾಡೆಮಿ ಮಂಗಳವಾರ ಪ್ರಕಟಿಸಿದೆ.

ಗೌರವ ಪ್ರಶಸ್ತಿಗೆ ಹರೇಕಳ ಹಾಜಬ್ಬ (ಬ್ಯಾರಿ ಭಾಷೆ ಮತ್ತು ಶಿಕ್ಷಣ ಕ್ಷೇತ್ರ), ಹುಸೈನ್ ಕಾಟಿಪಳ್ಳ (ಬ್ಯಾರಿ ಕಲೆ ಮತ್ತು ಸಾಹಿತ್ಯ), ಡಾ.ಇ.ಕೆ.ಎ. ಸಿದ್ದೀಕ್ ಅಡ್ಡೂರ್ (ಬ್ಯಾರಿ ಸಂಸ್ಕೃತಿ ಮತ್ತು ಸಮಾಜಸೇವೆ) ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಗೌರವ ಪುರಸ್ಕಾರಕ್ಕೆ ಅಶ್ರಫ್ ಅಪೋಲೊ ಕಲ್ಲಡ್ಕ (ಬ್ಯಾರಿ ಸಂಗೀತ), ಡಾ.ಕೆ.ಎ. ಮುನೀರ್ ಬಾವಾ (ಸಂಘಟಕ), ಮರಿಯಮ್ ಫೌಝಿಯ ಬಿ.ಎಸ್. (ಸಾಧಕಿ), ಬ್ಯಾರಿ ಝುಲ್ಫಿ (ಯುವ ಪ್ರತಿಭೆ), ಮುಹಮ್ಮದ್ ಬಶೀರ್ ಉಸ್ತಾದ್ ಉಡುಪಿ (ಬ್ಯಾರಿ ದಫ್), ಮುಹಮ್ಮದ್ ಫರಾಝ್ ಅಲಿ (ಬಾಲಪ್ರತಿಭೆ) ಅವರನ್ನು ಆಯ್ಕೆ ಮಾಡಲಾಗಿದೆ. ಗೌರವ ಪುರಸ್ಕಾರವು ₹10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಲಾಕ್‌ಡೌನ್ ಸಡಿಲಿಕೆ ನಂತರ ಶಿವಮೊಗ್ಗದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗುವುದು ಎಂದು ಅಕಾಡೆಮಿ ಅಧ್ಯಕ್ಷ ರಹೀಂ ಉಚ್ಚಿಲ್ ತಿಳಿಸಿದ್ದಾರೆ.

ತಂತ್ರಜ್ಞಾನ





[ಮೊನ್ನೆ ಮೊನ್ನೆಯವರೆಗೂ ಮತ್ತೊಂದು ವಿಂಡೋಸ್ ಆವೃತ್ತಿಯನ್ನು ಬಿಡುಗಡೆ ಮಾಡುವುದಿಲ್ಲ ಎಂದು ಹೇಳಿದ್ದ ಮೈಕ್ರೋಸಾಫ್ಟ್, ಇದೀಗ ವಿಂಡೋಸ್ 11 ಆವೃತ್ತಿಯನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ.]

ಬಂತು ಬಂತು ವಿಂಡೋಸ್ 11...

ಹಾರ್ಡ್‌ವೇರ್ ಅಗತ್ಯ: ವಿಂಡೋಸ್ 10ಕ್ಕಿಂತ ಹೆಚ್ಚು ಸುಧಾರಿತ ಓಎಸ್ ಇದಾಗಿದ್ದು, ಹಾರ್ಡ್‌ವೇರ್ ಅಗತ್ಯ ಕೂಡ ಹೆಚ್ಚಾಗಿದೆ. 4 ಜಿಬಿ ರ್‍ಯಾಮ್, ಹಾಗೂ 1 ಗಿಗಾಹರ್ಟ್ಸ್ ಪ್ರೊಸೆಸರ್ ಅಗತ್ಯವಿದೆ. 64 ಬಿಟ್‌ನಲ್ಲಿ ಮಾತ್ರ ಇದು ರನ್ ಆಗಲಿದೆ. ಅಲ್ಲದೆ, 2015 ರ ನಂತರ ಮಾರುಕಟ್ಟೆಗೆ ಬಿಡುಗಡೆಯಾದ ಸಿಸ್ಟಮ್‌ಗಳಲ್ಲಿ ಮಾತ್ರ ಇದು ಕೆಲಸ ಮಾಡಲಿದೆ. ಯಾಕೆಂದರೆ, ಟ್ರಸ್ಟ್ ಪ್ಲಾಟ್‌ಫಾರಂ ಮಾಡ್ಯೂಲ್ ಅಗತ್ಯ ಇದಕ್ಕಿದ್ದು, ಈ ಟಿಪಿಎಂ ಅನ್ನು 2015ರಲ್ಲಿ ಪರಿಚಯಿಸಲಾಗಿತ್ತು. ಇದರಲ್ಲಿ ಬಿಟ್‌ಲಾಕರ್ ಡ್ರೈವ್ ಎನ್‌ಕ್ರಿಪ್ಷನ್, ವಿಂಡೋಸ್ ಹಲೋ ಪಿನ್ ಹಾಗೂ ಬಯೋಮೆಟ್ರಿಕ್ಸ್‌ಗೂ ಇದು ಅನುವು ಮಾಡುತ್ತದೆ. ಹೆಚ್ಚು ಸುರಕ್ಷತೆ ಫೀಚರ್‌ಗಾಗಿ ಟಿಪಿಎಂ ಬಳಸಲಾಗುತ್ತದೆ.

ಕೃಷ್ಣ ಭಟ್

ಮೊನ್ನೆ ಮೊನ್ನೆಯವರೆಗೂ ಮತ್ತೊಂದು ವಿಂಡೋಸ್ ಆವೃತ್ತಿಯನ್ನು ಬಿಡುಗಡೆ ಮಾಡುವುದಿಲ್ಲ; ಬದಲಿಗೆ, ವಿಂಡೋಸ್ 10 ಆವೃತ್ತಿಯೇ ಕೊನೆ ಎಂದು ಹೇಳಿದ್ದ ಮೈಕ್ರೋಸಾಫ್ಟ್, ಕೆಲವೇ ದಿನಗಳ ಹಿಂದೆ ವಿಂಡೋಸ್ 11 ಎಂಬ ಹೊಸ ಆವೃತ್ತಿಯನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ಜೂನ್ 24 ರಂದು ನಡೆಸಿದ ವರ್ಚುವಲ್ ಸಭೆಯಲ್ಲಿ ಹೊಸ ಆವೃತ್ತಿ ವಿಂಡೋಸ್ 11ರ ಗುಣವಿಶೇಷಣಗಳನ್ನು ಮೈಕ್ರೋಸಾಫ್ಟ್ ತೆರೆದಿಟ್ಟಿದೆ.

ಹೊಸ ವಿನ್ಯಾಸ, ಹೊಸ ವೈಶಿಷ್ಟ್ಯಗಳನ್ನೊಳಗೊಂಡ ವಿಂಡೋಸ್ ಮುಂದಿನ ಕೆಲವು ವಾರಗಳಲ್ಲಿ ಡೆವಲಪರ್‌ಗಳಿಗೆ ಲಭ್ಯವಾಗಲಿದ್ದು, ವರ್ಷಾಂತ್ಯದಲ್ಲಿ ಎಲ್ಲರಿಗೂ ಬಳಕೆಗೆ ಸಿಗಲಿದೆ. ಈಗಾಗಲೇ ವಿಂಡೋಸ್ 10 ಹಾಗೂ ಹಳೆಯ ಆವೃತ್ತಿ ಹೊಂದಿರುವವರು ಉಚಿತವಾಗಿ ಈ ಹೊಸ ಆವೃತ್ತಿಯನ್ನು ಅಪ್‌ಡೇಟ್ ಮಾಡಿಕೊಳ್ಳಬಹುದು.



ಏನಿದೆ ಹೊಸತು?

ಹೊಸ ವಿನ್ಯಾಸ: ಮ್ಯಾಕ್ ಕಂಪ್ಯೂಟರ್‌ಗಳನ್ನೇ ಹೋಲುವ ಇಂಟರ್‌ಫೇಸ್ ಅನ್ನು ವಿಂಡೋಸ್ 11 ಹೊಂದಿದೆ. ಸುಂದರವಾದ ಅರೆ ಪಾರದರ್ಶಕ ಟೈಲ್‌ಗಳು, ಹರಿತ ಅಂಚುಗಳ ಬದಲಿಗೆ, ವೃತ್ತಗೊಳಿಸಿದ ಅಂಚುಗಳು, ಸುಂದರ ಶೇಡ್‌ಗಳಿವೆ. ವಿಂಡೋಸ್‌ಗೇ ಅತ್ಯಂತ ವಿಶಿಷ್ಟವಾದ ಸ್ಟಾರ್ಟ್ ಮೆನು ಈ ಹಿಂದಿನ ಎಲ್ಲ ಆವೃತ್ತಿಗಳಲ್ಲಿ ಎಡ ಭಾಗದಲ್ಲಿತ್ತು. ಆದರೆ, ಈ ವಿಂಡೋಸ್ 11 ರಲ್ಲಿ ಇದು ಮಧ್ಯದಲ್ಲಿದೆ. ಇದು ಆಪಲ್‌ನ ಮ್ಯಾಕ್ ಶೈಲಿಯನ್ನೇ ಹೋಲುತ್ತದೆ. ಇದರ ಜೊತೆಗೆ, ಫೋಲ್ಡರ್‌ಗಳ ಐಕಾನ್‌ಗಳು ಬದಲಾಗಿ, ಸುಂದರವಾಗಿವೆ.

ಆಂಡ್ರಾಯ್ಡ್ ಆ್ಯಪ್‌ಗಳೂ ಲಭ್ಯ: ಈವರೆಗೆ ಆಂಡ್ರಾಯ್ಡ್ ಆ್ಯಪ್‌ಗಳು ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳನ್ನು ಹೊರತುಪಡಿಸಿ ಬೇರೆ ಯಾವುದೇ ಸಿಸ್ಟಮ್‌ಗಳಲ್ಲಿ ತೆರೆದುಕೊಳ್ಳುತ್ತಿರಲಿಲ್ಲ. ಆದರೆ, ಈಗ ಮೈಕ್ರೋಸಾಫ್ಟ್ ಹೊಸ ಮೈಲಿಗಲ್ಲಿನತ್ತ ಹೆಜ್ಜೆ ಇಟ್ಟಿದೆ. ಮೈಕ್ರೋಸಾಫ್ಟ್ ಸ್ಟೋರ್‌ನಲ್ಲಿ ಅಮೆಜಾನ್ ಆ್ಯಪ್‌ಸ್ಟೋರ್ ಮೂಲಕ ಆಂಡ್ರಾಯ್ಡ್ ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡುವ ಸೌಲಭ್ಯವನ್ನು ಒದಗಿಸಿದೆ. ಇದಕ್ಕಾಗಿ ಇಂಟೆಲ್ ಬ್ರಿಡ್ಜ್ ಟೆಕ್ನಾಲಜಿಯನ್ನು ಬಳಸಲಾಗುತ್ತಿದೆ ಎಂದು ಮೈಕ್ರೋಸಾಫ್ಟ್ ಹೇಳಿದೆ. ಆದರೆ, ಆಂಡ್ರಾಯ್ಡ್ ಆ್ಯಪ್ ಇನ್‌ಸ್ಟಾಲ್ ಮಾಡುವಿಕೆ ಮತ್ತು ಬಳಕೆಯ ಕುರಿತ ಹೆಚ್ಚಿನ ಮಾಹಿತಿಯನ್ನು ಮೈಕ್ರೋಸಾಫ್ಟ್ ಒದಗಿಸಿಲ್ಲ. ಆದರೆ, ಗೂಗಲ್ ಪ್ಲೇ ಆ್ಯಪ್‌ಸ್ಟೋರ್ ವಿಂಡೋಸ್ 11ನಲ್ಲಿ ಲಭ್ಯವಾಗುವುದಿಲ್ಲ ಎಂದು ಹೇಳಲಾಗಿದೆ.

ವಿಜೆಟ್‌ಗಳ ಪರಿಚಯ: ವಿಂಡೋಸ್ ವಿಸ್ಟಾ ಎಂಬ ಹಳೆಯ ಮೈಕ್ರೋಸಾಫ್ಟ್ ಓಎಸ್ ಬಳಸಿದವರಿಗೆ ಡೆಸ್ಕ್‌ಟಾಪ್ ಗ್ಯಾಜೆಟ್‌ಗಳನ್ನು ಬಳಸಿದ ನೆನಪಿರುತ್ತದೆ. ಅತ್ಯಂತ ಆಪ್ತವಾಗಿದ್ದ ಮತ್ತು ಮೆಚ್ಚುಗೆ ವ್ಯಕ್ತವಾಗಿದ್ದ ವಿಂಡೋಸ್ ಫೀಚರ್ ಅದಾಗಿತ್ತು. ಆದರೆ, ಅದೇಕೋ ಮೈಕ್ರೋಸಾಫ್ಟ್ ವಿಸ್ಟಾ ನಂತರ ಯಾವ ಓಎಸ್‌ನಲ್ಲೂ ಅದನ್ನು ಬಳಸಿರಲಿಲ್ಲ. ಆದರೆ, ಈಗ ವಿಂಡೋಸ್ 11ನಲ್ಲಿ ಇದೇ ರೀತಿಯ ಸೌಲಭ್ಯವನ್ನು ಪುನಃ ಒದಗಿಸಿದೆ. ಆದರೆ, ಅದಕ್ಕೆ ಸ್ವಲ್ಪ ಆಧುನಿಕ ಸ್ಪರ್ಶ ನೀಡಿದೆ. ಇದಕ್ಕೆ ಗ್ಯಾಜೆಟ್ ಬದಲಿಗೆ ವಿಜೆಟ್ ಎಂಬ ಹೆಸರು ನೀಡಲಾಗಿದೆ.

ಸ್ಟಾರ್ಟ್‌ಮೆನು ಪಕ್ಕದಲ್ಲೇ ಈ ವಿಜೆಟ್ ಬಟನ್ ಇರಲಿದೆ. ಇದನ್ನು ಒತ್ತಿದರೆ, ಸುದ್ದಿ, ದಿನಾಂಕ, ಹವಾಮಾನ ಸೇರಿದಂತೆ ಹಲವು ಮಾಹಿತಿ ಲಭ್ಯವಾಗುತ್ತದೆ. ಇದನ್ನು ನಾವು ನಮಗೆ ಬೇಕಾದ ಹಾಗೆ ಕಸ್ಟಮೈಸ್ ಕೂಡ ಮಾಡಿಕೊಳ್ಳಬಹುದು.

ಟೀಮ್ಸ್ ಇನ್ನಷ್ಟು ಸುಲಭ: ವರ್ಕ್ ಫ್ರಮ್ ಹೋಮ್ ಕಲ್ಪನೆ ಹೆಚ್ಚು ಚಾಲ್ತಿಗೆ ಬರುತ್ತಿದ್ದಂತೆಯೇ, ಅದಕ್ಕೆ ವಿಂಡೋಸ್ ಅನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಮೈಕ್ರೋಸಾಫ್ಟ್ ಟೀಮ್ಸ್ ಅನ್ನು ವಿಂಡೋಸ್ 11 ಟಾಸ್ಕ್‌ಬಾರ್‌ನಲ್ಲೇ ಅಳವಡಿಸಲಾಗಿದೆ. ಅಷ್ಟೇ ಅಲ್ಲ, ಟೀಮ್ಸ್‌ನಲ್ಲೇ ಎಲ್ಲ ಸೌಲಭ್ಯಗಳನ್ನೂ ಬಳಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇದು ಆ್ಯಪಲ್‌ನ ಫೇಸ್‌ಟೈಮ್ ರೀತಿಯಲ್ಲೂ ಕೆಲಸ ಮಾಡುತ್ತದೆ.

ಗೇಮಿಂಗ್ ಪ್ರಿಯರಿಗೆ ಅನುಕೂಲ: ಗೇಮ್ ಪ್ರಿಯರಿಗೆ ವಿಂಡೋಸ್ 11 ಮೆಚ್ಚುಗೆಯಾಗಲಿದೆ. ಎಕ್ಸ್‌ಬಾಕ್ಸ್ ಕನ್ಸೋಲ್‌ಗಳಲ್ಲಿ ಲಭ್ಯವಿದ್ದ ಕೆಲವು ಫೀಚರ್‌ಗಳನ್ನು ವಿಂಡೋಸ್ 11ನಲ್ಲಿ ಸೇರಿಸಲಾಗಿದೆ. ಆಟೊ ಎಚ್‌ಡಿಆರ್ ಹಾಗೂ ಡೈರೆಕ್ಟ್ ಸ್ಟೋರೇಜ್‌ನಂತಹ ಸೌಲಭ್ಯಗಳು ಗೇಮಿಂಗ್ ಅನುಭವವನ್ನು ಇನ್ನಷ್ಟು ಸುಧಾರಿಸಲಿದೆ.

ವರ್ಚುವಲ್ ಡೆಸ್ಕ್‌ಟಾಪ್: ಹಲವು ಡೆಸ್ಕ್‌ಟಾಪ್ ಅನ್ನು ವರ್ಚುವಲ್ ಆಗಿ ಬಳಸುವ ಸೌಲಭ್ಯ ಈ ಹಿಂದಿನ ಓಎಸ್ ಆವೃತ್ತಿಗಳಲ್ಲೇ ಇದ್ದವಾದರೂ, ವಿಂಡೋಸ್ 11ನಲ್ಲಿ ಇದನ್ನು ಇನ್ನಷ್ಟು ಸುಲಭವಾಗಿಸಲಾಗಿದೆ. ವೈಯಕ್ತಿಕ ಕೆಲಸಕ್ಕೂ, ಕಚೇರಿ ಕೆಲಸಕ್ಕೂ ಒಂದೊಂದು ವರ್ಚುವಲ್ ಡೆಸ್ಕ್‌ಟಾಪ್ ಅನ್ನು ಬಳಸುವ ಅನುಕೂಲ ಇದರಲ್ಲಿ ಸಿಗಲಿದೆ. ಅದರಲ್ಲೂ ಮಲ್ಟಿಟಾಸ್ಕ್ ಮಾಡುವವರಿಗೆ ಇದು ಹೇಳಿ ಮಾಡಿಸಿದ ಫೀಚರ್.

ಇದರ ಜೊತೆಗೆ, ಸ್ನ್ಯಾಪ್ ಗ್ರೂಪ್‌ಗಳು ಹಾಗೂ ಸ್ನ್ಯಾಪ್ ಲೇಔಟ್ ಅನ್ನೂ ಕೂಡ ಮಲ್ಟಿಟಾಸ್ಕಿಂಗ್‌ಗೆ ಪೂರಕವಾಗಿ ಅಭಿವೃದ್ಧಿಪಡಿಸಲಾಗಿದೆ. ಮಿನಿಮೈಸ್ ಬಟನ್ ಮೇಲೆ ಒಂದು ಸೆಕೆಂಡ್ ಕರ್ಸರ್ ಇಟ್ಟುಕೊಂಡರೆ ಆ್ಯಪ್‌ಗಳ ನಾಲ್ಕು ಲೇಔಟ್ ಆಯ್ಕೆಯನ್ನು ತೋರಿಸುತ್ತದೆ.

ಬುಟ್ಟಿಯೊಂದಿಗೆ ಪೆನ್ ಬಾಟಲ್ ಕ್ಲಿಪ್...

ಪೃಥ್ವಿರಾಜ್

ಜೀವನವನ್ನು ಸಲೀಸು ಮಾಡುವಂತಹ ಉಪಕರಣಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಲೇ ಇರುತ್ತವೆ. ಇವುಗಳಲ್ಲಿ ಕೆಲವೊಂದನ್ನು ನೋಡಿದ ಕೂಡಲೇ 'ಇವು ಭಿನ್ನ' ಎನಿಸುತ್ತವೆ. ಅಂತಹ ಕೆಲವು ವಿಶೇಷ ವಸ್ತು–ಉಪಕರಣಗಳ ಬಗ್ಗೆ ಮಾಹಿತಿ ಇಲ್ಲಿದೆ.

ಕ್ಯೂ ಬಾಟಲ್



ನೀರು ಕುಡಿದ ನಂತರ ಪ್ಲಾಸ್ಟಿಕ್ ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆಯುವುದು ಹಲವರಿಗೆ ಗೀಳು. ನೀರು ಖಾಲಿಯಾದ ಬಾಟಲಿ ಹೊರೆ ಎನಿಸಿದಾಗ ಬಿಸಾಡುವುದು ಸಾಮಾನ್ಯ. ಆದರೆ ನೀರು ಕುಡಿದ ನಂತರ ಬಾಟಲಿಯನ್ನು ಚಿಕ್ಕದಾಗಿಸಿ ಕಿಸೆಗೆ ತುರುಕಿಕೊಂಡರೆ ಹೇಗಿರಬಹುದು? ಈ ಯೋಚನೆಯಿಂದಲೇ ತಯಾರಾಗಿದೆ 'ಕ್ಯೂ' ಬಾಟಲ್. ಕ್ರೀಡಾಪಟುಗಳು, ವಿಹಾರಿಗಳಿಗೆ ಹೇಳಿ ಮಾಡಿಸಿದಂತಿದೆ ಈ ಬಾಟಲ್. ನೀರು ಖಾಲಿಯಾದ ನಂತರ ಇದರ ಗಾತ್ರವನ್ನು ಕುಗ್ಗಿಸಿ ಕಿಸೆಗೆ ತುರುಕಿಕೊಳ್ಳುವಷ್ಟು ಚಿಕ್ಕ ಗಾತ್ರದಲ್ಲಿ ಇದನ್ನು ತಯಾರಿಸಲಾಗಿದೆ. ಅಮೇಜಾನ್‌ನಲ್ಲಿ ಖರೀದಿಗೆ ಲಭ್ಯವಿದೆ.

ಆನ್‌ಲೈನ್ ಗ್ರಾಹಕರಿಗೆ 'ಪೋರ್ಚ್‌ಪಾಡ್' ಬುಟ್ಟಿ



ಆನ್‌ಲೈನ್‌ನಲ್ಲಿ ವಸ್ತುಗಳನ್ನೋ ಉಪಕರಣಗಳನ್ನೋ ಖರೀದಿಸುತ್ತೇವೆ; ಆದರೆ ಅವು ಮನೆಗೆ ತಲುಪುವ ವೇಳೆ ನಾವು ಮನೆಯಲ್ಲಿ ಇಲ್ಲದಿದ್ದರೆ ಅಥವಾ ತುರ್ತಾಗಿ ಹೊರಗೆ ಹೋಗಬೇಕಾಗಿ ಬಂದರೆ, ಆ ವಸ್ತುಗಳನ್ನು ಸ್ವೀಕರಿಸುವಂತೆ ಪಕ್ಕದ ಮನೆಯವರಲ್ಲಿ, ಪರಿಚಯಸ್ಥರಲ್ಲಿ ಬೇಡಿಕೊಳ್ಳಬೇಕು. ಎಲ್ಲ ಸಂದರ್ಭಗಳಲ್ಲೂ ಇದು ಸಾಧ್ಯವಾಗದಿರಬಹುದು. ಈ ಸಮಸ್ಯೆಗೆ ಪೋರ್ಚ್‌ಪಾಡ್ ಪರಿಹಾರವಾಗಿದೆ. ಇದರಲ್ಲಿ ಅಳವಡಿಸಿರುವ ಬಾರ್‌ಕೋಡ್ ಸ್ಕ್ಯಾನರ್ ಹಾಗೂ ಸೆನ್ಸರ್‌ಗಳ ನೆರವಿನಿಂದ ವಸ್ತು, ಉಪಕರಣಗಳ ಪಾರ್ಸೆಲ್‌ಗಳ ಬಾರ್‌ಕೋಡ್ ಸ್ಕ್ಯಾನ್ ಮಾಡಿದರೆ ಈ ಬುಟ್ಟಿ ತೆರೆದುಕೊಳ್ಳುತ್ತದೆ. ವಸ್ತುಗಳನ್ನು ಇಟ್ಟು ಮುಚ್ಚಿದರೆ ಲಾಕ್ ಆಗುತ್ತದೆ. ವಸ್ತು ತಲುಪಿರುವ ಬಗ್ಗೆ ಮೊಬೈಲ್ ಫೋನ್‌ಗೆ ಸಂದೇಶ ಕೂಡ ರವಾನೆಯಾಗುತ್ತದೆ. ಮನೆಯಲ್ಲಿ ಯಾರೂ ಇಲ್ಲವೆಂದು ಬುಟ್ಟಿ ಸಹಿತ ಯಾರಾದರೂ ಕದ್ದೊಯ್ಯಬಹುದೇನೊ ಎಂಬ ಭಯ ಬೇಡ. ಇದರಲ್ಲಿ ಅಳವಡಿಸಿರುವ ಕ್ಯಾಮೆರಾ ನೆರವಿನಿಂದ ಇದನ್ನು ಯಾರು ಬಳಸುತ್ತಿದ್ದಾರೆ, ಎಲ್ಲಿ ಬಳಸುತ್ತಿದ್ದಾರೆ ಎಂಬುದನ್ನು ಇದಕ್ಕೆಂದೇ ರೂಪಿಸಲಾಗಿರುವ ವಿಶೇಷ ಆ್ಯಪ್ ಮೂಲಕ ನಿಗಾ ಇಡಬಹುದು. ಹೆಚ್ಚಿನ ಮಾಹಿತಿಗೆ: https://www.theporchpod.com

ರೈಲ್ ಪೆನ್



ಈವರೆಗೆ ಬಗೆ ಬಗೆಯ ವೈಶಿಷ್ಟ್ಯಗಳನ್ನು ಹೊಂದಿರುವ ಪೆನ್‌ಗಳು ಮಾರುಕಟ್ಟೆಗೆ ಬಂದಿವೆ. ಆದರೆ ಟೆಕ್ ಎಕ್ಸ್‌ಸರೀಸ್ ಕೋ-ಆಕ್ಸಿಸ್ ರೇಲ್ ಪೆನ್ ಉಳಿದ ಪೆನ್‌ಗಳಿಗಿಂತ ಭಿನ್ನ ಎಂದು ನೋಡಿದ ಕೂಡಲೇ ತಿಳಿಯುತ್ತದೆ. ಸಂಪೂರ್ಣ ಲೋಹದಿಂದ ತಯಾರಿಸಿರುವ ಈ ಲೇಖನಿ, ಹೆಚ್ಚಾಗಿ ಬರೆಯುವಂತಹ ವಿದ್ಯಾರ್ಥಿಗಳಿಗೆ, ಲೇಖಕರಿಗೆ ನೆರವಾಗುತ್ತದೆ ಎಂದು ಇದನ್ನು ತಯಾರಿಸಿರುವ ಸಂಸ್ಥೆ ಹೇಳಿಕೊಂಡಿದೆ. ಚಪ್ಪಟೆಯಾಕಾರದಲ್ಲಿರುವ ಈ ಪೆನ್‌ಗೆ ರೀಫಿಲ್ ಅಳವಡಿಸುವುದು ಕೂಡ ಸುಲಭ. ಹೆಚ್ಚು ಹೊತ್ತು ಬರೆದರೂ ಬೆರಳುಗಳಿಗೆ ನೋವಾಗದಂತೆ ಇದನ್ನು ತಯಾರಿಸಲಾಗಿದೆ. ಲೋಹದಿಂದ ತಯಾರಾಗಿದ್ದರೂ ಹಗುರವಾಗಿದ್ದು ಸಾಮಾನ್ಯ ಪೆನ್‌ಗಳಂತೆಯೇ ಇದನ್ನೂ ಕಿಸೆಗೆ, ಪುಸ್ತಕಗಳಿಗೆ ಸಿಕ್ಕಿಸಿಕೊಳ್ಳಬಹುದು.


ಉಸಿರಾಡಲು ನೆರವಾಗುವ ಕ್ಲಿಪ್



ವ್ಯಾಯಾಮ ಮಾಡುವಾಗ, ಓಡುವಾಗ, ಬೆಟ್ಟ, ಮೆಟ್ಟಿಲುಗಳನ್ನು ಹತ್ತುವಾಗ ದೇಹಕ್ಕೆ ಹೆಚ್ಚು ಆಮ್ಲಜನಕ ಬೇಕಾಗುತ್ತದೆ. ಆದರೆ ಮೂಗಿನ ಹೊಳ್ಳೆಗಳಲ್ಲಿ ಸಮಸ್ಯೆ ಇದ್ದು, ಉಸಿರಾಟ ಕಷ್ಟವಾಗುತ್ತಿದ್ದರೆ ಅಂತಹ ಸಂದರ್ಭಗಳಲ್ಲಿ ಈ ಟರ್ಬೈನ್ ಕ್ಲಿಪ್ ನೆರವಾಗುತ್ತದೆ. ಮೂಗಿನ ಹೊಳ್ಳೆಗಳಿಗೆ ಸುಲಭವಾಗಿ ಸಿಕ್ಕಿಸಿಕೊಳ್ಳಲು ಸಾಧ್ಯವಾಗುವಂತೆ ಇದನ್ನು ತಯಾರಿಸಲಾಗಿದೆ. ಧರಿಸಿದ ನಂತರ, ಶೇ 38ರಷ್ಟು ಹೆಚ್ಚು ಪ್ರಮಾಣದಲ್ಲಿ ಸರಾಗ ಉಸಿರಾಟಕ್ಕೆ ನೆರವಾಗುತ್ತದೆ ಎಂದು ಇದನ್ನು ತಯಾರಿಸಿರುವ ಸಂಸ್ಥೆ ಹೇಳಿಕೊಂಡಿದೆ. ಕ್ರೀಡಾಪಟುಗಳಿಗೆ, ಫಿಟ್‌ನೆಸ್ ಬಯಸುವವರಿಗೆ ಇದು ನೆರವಾಗಬಹುದು. ಹೆಚ್ಚಿನ ಮಾಹಿತಿಗೆ https://www.theturbine.com

ಕ್ರಿಮಿಗಳನ್ನು ಕೊಲ್ಲುವ ಉಪಕರಣ

ಹೆಚ್ಚು ಜನ ಸೇರುವಂಥ ಪ್ರದೇಶಗಳನ್ನು ಸದಾ ಸ್ವಚ್ಛಗೊಳಿಸುತ್ತಿರಬೇಕು. ಆದರೆ ಸ್ವಚ್ಛಗೊಳಿಸಿದ ಪ್ರದೇಶ ಎಷ್ಟರ ಮಟ್ಟಿಗೆ ಸ್ವಚ್ಛವಾಗಿದೆ ಎಂಬುದು ತಿಳಿಯುವುದು ಕಷ್ಟ. ವೈರಸ್‌ಗಳು, ಬ್ಯಾಕ್ಟೀರಿಯಾಗಳು ಉಳಿಯುವ ಸಾಧ್ಯತೆಯೂ ಇರುತ್ತದೆ. ಈ ಸಮಸ್ಯೆಗೆ ಪರಿಹಾರವಾಗಿ ತಯಾರಿಸಲಾಗಿದೆ



ಅಡಿಬಾಟ್. ಇದು ಸ್ವಯಂಚಾಲಿತ ಉಪಕರಣವಾಗಿದ್ದು, ಶಾಲೆ, ಕಾಲೇಜು, ಆಸ್ಪತ್ರೆ, ಸಭಾಂಗಣಗಳಲ್ಲಿ ಬಳಸಲು ಯೋಗ್ಯವಾಗಿದೆ. ಇದರಲ್ಲಿನ ಸೆನ್ಸರ್‌ಗಳ ಸಹಾಯದಿಂದ ಸುತ್ತಮುತ್ತಲಿರುವ ಕೊಳಕಿರುವ ಪ್ರದೇಶಗಳನ್ನು ಇದೇ ಹುಡುಕಿ ಸ್ವಚ್ಛಗೊಳಿಸುವಂತೆ ಇದನ್ನು ತಯಾರಿಸಲಾಗಿದೆ. ವೈರಸ್‌ಗಳನ್ನು ಕೊಲ್ಲುವುದಕ್ಕೆ ಸ್ವಯಂಚಾಲಿತ ಯುವಿ ಸ್ಯಾನಿಟೈಸಿಂಗ್ ವ್ಯವಸ್ಥೆ ಇದರಲ್ಲಿ ಇದೆ. ಹೆಚ್ಚಿನ ಮಾಹಿತಿಗೆ https://www.ubtrobot.com/ products/adibot?ls = en

ಸಿಇಟಿ ಪರೀಕ್ಷೆ ದಿಕ್ಸೂಚಿ

Physics- Motion in a plane

1. Rain is falling vertically with a speed of 12 ms^{-1} A woman rides a bicycles with a speed of 12 ms^{-1} in east to west direction. What is the direction in which she should hold her umbrella?
(1) 30^0 towards East (2) 45^0 towards East
(3) 30^0 towards West (4) 45^0 towards West

2. The height y and the distance x along the horizontal plane of a projectile on a certain planet (with no surrounding atmosphere) are given by $y = 8t - 5t^2$ m & $x = 6t$ m, where t is in seconds. The velocity with which the projectile is projected is [KCET-2011]
(1) $6ms^{-1}$ (2) $8ms^{-1}$
(3) $10ms^{-1}$ (4) $14ms^{-1}$

3. Which of the following is not a vector quantity?
(1) Weight (2) Nuclear spin
(3) Momentum (4) Potential energy

4. A stone is thrown vertically at a speed of 30 ms^{-1} making an angle of 45^0 C with the horizontal. What is the maximum height reached by the stone? Take g = 10 ms^{-2}
(1) 30 m (2) 22.5 m
(3) 15 m (4) 10 m

5. An aeroplane executes a horizontal loop at a speed of 20 kmph with its wings banked at 45^0. What is the radius of the loop? take g = 10 ms^{-2}
(1) 4 km (2) 4.5 km (3) 7.2 km (4) 2 km

6. A projectile is projected at 10 ms^{-1} by making at an angle 60^0 to the horizontal. After some time its velocity makes an angle of 30^0 to the horizontal. Its speed at this instant is
(1) $\frac{10}{\sqrt{3}}$ (2) $10\sqrt{3}$
(3) $\frac{5}{\sqrt{3}}$ (4) $5\sqrt{3}$

7. Three projectiles A, B and C are projected at an angle of 30°, 45°, 60° respectively. If R_A, R_B, and R_C are ranges of A, B and C respectively, then (velocity of projection is the same for A, B & C).
(1) $R_A = R_B = R_C$ (2) $R_A = R_C > R_B$
(3) $R_A < R_B < R_C$ (4) $R_A = R_C < R_B$

8. The component of a vector r along x-axis has a maximum value if
(1) r is along + ve x-axis
(2) r is along with + ve y-axis
(3) r is along – ve y-axis
(4) r makes an angle of 45° with the x-axis

9. The trajectory of a projectile projected from origin is given by the equation $y = x - \frac{2x^2}{5}$. The initial velocity of the projectile is
(1) $25ms^{-1}$ (2) $\frac{2}{5}ms^{-1}$
(3) $\frac{5}{2}ms^{-1}$ (4) $5ms^{-1}$

10. The angle between velocity and acceleration of a particle describing uniform circular motion is [KCET-2017]
(1) 45º (2) 60º
(3) 90º (4) 180º

11. If $\vec{A} = 2\hat{i} + 3\hat{j} + 8\hat{k}$ is perpendicular to $\vec{B} = 4\hat{j} - 4\hat{i} + \alpha\hat{k}$, then the value of 'α' is [KCET-2017]
(1) ½ (2) - ½
(3) 1 (4) -1

12. A particle is projected with a velocity v so that its horizontal range is twice the greatest height attained. The horizontal range is
(1) $\frac{v^2}{g}$ (2) $\frac{2v^2}{3g}$
(3) $\frac{4v^2}{5g}$ (4) $\frac{v^2}{2g}$

13. The ratio of angular speed of a second-hand to the hour-hand of a watch is
(1) 720:1 (2) 60:1
(3) 3600:1 (4) 72:1

Answers

1. Answer: (4)
Sol: towards west
Sol: $\tan\theta = \frac{12}{12} = 1 \Rightarrow \theta = 45^0$

2. Answer: (3)
Sol.: Given,
$y = 8t - 5t^2$ ....(i)
$x = 6t$ ....(ii)
We know, $x = (u\cos\theta)t$........(iii)
Compare with Eq.(ii), we get $u_1\cos\theta = \frac{x}{t} = 6$
and $y = (u\sin\theta)t - \frac{1}{2}gt^2$
Compare with Eq (i), we get
$u_2\sin\theta = 8$
$u = \sqrt{u_1^2 + u_2^2}$
$u = \sqrt{36 + 64}$
$u = 10ms^{-1}$

3. Answer (4)
Hint: A vector is a quantity that is fully described by both magnitude and direction A scalar is a quantity that is fully described by magnitude only. Among the given quantities potential energy is not a vector quantity.

4. Answer (2)
Hint: Given, speed = 30 ms^{-1} ; angle of projection = 45^0; g = $10ms^{-1}$
Maximum height reached by the stone is
$$H = \frac{v^2\sin^2\theta}{2g} = \frac{(30)^2(\sin 45)^2}{2\times 10} = \frac{900\times\frac{1}{2}}{2\times 10} = \frac{900\times 1}{2\times 2\times 10}$$
$$\Rightarrow H = \frac{90}{4} = 22.5$$
Therefore, maximum height reached by the stone is 22.5 m

5. Answer (1)
Hint: Given, speed of aeroplane = 720 kmph = 200 ms^{-1}; angle of wings = 45^0; g = $10ms^{-2}$
Now we know that
$\tan\theta = \frac{v^2}{rg} \Rightarrow r = \frac{v^2}{\tan\theta\times g}$
$\Rightarrow r = \frac{(200)^2}{\tan 45^0\times 10} = \frac{(200)^2}{10} = 400m = 4km$
Thus radius of the loop is 4 km

6. Answer: (1)
Sol : $v\cos 30^\circ = 10\cos 60^\circ$
$\Rightarrow v = \frac{5}{\cos 30^\circ} = \frac{10}{\sqrt{3}}ms^{-1}$

7. Answer (4)
Sol. $R_A = R_C < R_B$
$R = \frac{u^2\sin 2\theta}{g}$
Therefore, $R_A = R_C < R_B$

8. Answer (1)
Sol. $r_x = |r|\cos\theta$
cos θ is maximum of θ = 0
θ = 0
r is along +ve x-axis

9. Answer: (4)
Hint: $y = x - \frac{2x^2}{5}$
$\tan\theta = 1$
$\theta = 45^0$
$\frac{9}{2u^2\cos^2\theta} = \frac{2}{5}$
$u = 5ms^{-1}$

10. Answer: (3)
Sol: Conceptual

11. Answer: (1)
Sol: $\vec{A}.\vec{B} = 0$ (condition of perpendicularity)
$\therefore 8 - 12 + 8\alpha = 0$
$\therefore \alpha = \frac{4}{8} = \frac{1}{2}$

12. Answer (3)
Hint : Option (3) is a correct answer not matched with answer sheet
Given R = 2H
$\frac{v^2\sin 2\theta}{g} = \frac{2v^2\sin\theta}{2g}$
$\sin 2\theta = \sin^2\theta$
$2\sin\theta\cos = \sin^2\theta$
$2 = \frac{\sin\theta\sin\theta}{\sin\theta\cos\theta}$
$2 = \tan\theta$
From triangle we can say that –
$\sin\theta = \frac{2}{\sqrt{5}}, \cos\theta = \frac{1}{\sqrt{5}}$
So, $R = \frac{2v^2\sin\theta\cos\theta}{g} = \frac{2v^2}{g}\times\frac{2}{\sqrt{5}}\times\frac{1}{\sqrt{5}}$

13. Answer (1)
Hint :
Hint : Angular velocity $= \frac{2\pi}{60} = \frac{\pi}{30}$
For an hour hand to complete 1 rotation i.e. 2π radians it takes 12 hrs.
So angular velocity of an hour hand $= \frac{2\pi}{12\times 3600}$
$= \frac{\pi}{21600}$
Then the ratio is
$$= \frac{\frac{\pi}{30}}{\frac{\pi}{21600}} = \frac{\pi}{30}\times\frac{21600}{\pi} = 720:1$$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 15

201. 'ಭಾರತ ಬಿಟ್ಟು ತೊಲಗಿ' ಚಳವಳಿ ಆರಂಭವಾದಾಗ ಭಾರತದಲ್ಲಿ ಗವರ್ನರ್ ಜನರಲ್ ಆಗಿದ್ದವರು ಯಾರು?
ಎ) ಲಾರ್ಡ್ ಮೌಂಟ್ ಬ್ಯಾಟನ್
ಬಿ) ಲಾರ್ಡ್ ಲಿನ್ಲಿಥ್ಗೋ
ಸಿ) ಲಾರ್ಡ್ ಕರ್ಜನ್
ಡಿ) ಲಾರ್ಡ್ ಮೇಯೋ

202. 'ಸೈಮನ್ ಗೋ ಬ್ಯಾಕ್' ಚಳವಳಿಯಲ್ಲಿ ಪೊಲೀಸ್ ಲಾಟಿಗೆ ಬಲಿಯಾದ ವ್ಯಕ್ತಿ ಯಾರು?
ಎ) ಗೋಪಾಲಕೃಷ್ಣ ಗೋಖಲೆ
ಬಿ) ಬಾಲಾ ಗಂಗಾಧರ ತಿಲಕ್
ಸಿ) ಲಾಲಾ ಲಜಪತ್ ರಾಯ್
ಡಿ) ಬಿಪಿನ್ ಚಂದ್ರ ಪಾಲ್

203. ಮಹಾತ್ಮಾ ಗಾಂಧೀಜಿ ದಂಡಿಯಾತ್ರೆ ಪ್ರಾರಂಭಿಸಿದ ವರ್ಷ ಯಾವುದು?
ಎ) 1929 ಬಿ) 1930
ಸಿ) 1931 ಡಿ) 1932

204. ರಾಜ್ಯಪಾಲರು ಹುದ್ದೆಯಲ್ಲಿದ್ದಾಗ ಮರಣ ಹೊಂದಿದರೆ, ಅವರ ಸ್ಥಾನವನ್ನು ತಕ್ಷಣ ಯಾರು ನಿರ್ವಹಿಸುತ್ತಾರೆ?
ಎ) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ
ಬಿ) ರಾಜ್ಯದ ಮುಖ್ಯಮಂತ್ರಿ
ಸಿ) ರಾಷ್ಟ್ರಪತಿಗಳು ನಿಯುಕ್ತಿಗೊಳಿಸುವ ವ್ಯಕ್ತಿ
ಡಿ) ಪಕ್ಕದ ರಾಜ್ಯದ ರಾಜ್ಯಪಾಲರು

205. ಲೋಕಸಭೆ ವಿಸರ್ಜನೆಗೊಂಡಾಗ, ಯಾವ ವ್ಯಕ್ತಿ, ಮುಂದಿನ ಲೋಕಸಭೆಯ ಪ್ರಥಮ ಸಭೆಗಿಂತ ಮೊದಲು ತನ್ನ ಸ್ಥಾನ ತ್ಯಜಿಸುವುದಿಲ್ಲ?
ಎ) ಪ್ರಧಾನಮಂತ್ರಿ ಬಿ) ಹಣಕಾಸು ಮಂತ್ರಿ
ಸಿ) ರಕ್ಷಣಾ ಮಂತ್ರಿ ಡಿ) ಲೋಕಸಭೆ ಅಧ್ಯಕ್ಷ

206. ಭಾರತದ ಸಂವಿಧಾನದಲ್ಲಿ ಉಪ-ಪ್ರಧಾನಮಂತ್ರಿ ಹುದ್ದೆಗೆ ಅವಕಾಶ ಇದೆಯೇ?
ಎ) ಹೌದು
ಬಿ) ಇಲ್ಲ
ಸಿ) ತುರ್ತು ಪರಿಸ್ಥಿತಿಯಲ್ಲಿ ಇದೆ
ಡಿ) ಹಣಕಾಸಿನ ತುರ್ತು ಪರಿಸ್ಥಿತಿಯಲ್ಲಿ ಇದೆ

207. ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿ ಎಷ್ಟು ವರ್ಷಗಳವರೆಗೆ ಅಧಿಕಾರದಲ್ಲಿ ಇರುತ್ತಾರೆ?
ಎ) 2 ವರ್ಷ ಬಿ) 3 ವರ್ಷ
ಸಿ) 1 ವರ್ಷ ಡಿ) 2.5 ವರ್ಷ

208. ಭಾರತದ ರಾಷ್ಟ್ರಪತಿಗೆ ಪ್ರತಿಜ್ಞಾ ವಿಧಿ ಬೋಧಿಸುವವರು ಯಾರು?
ಎ) ಲೋಕಸಭೆ ಅಧ್ಯಕ್ಷರು
ಬಿ) ಭಾರತದ ಪ್ರಧಾನಮಂತ್ರಿ
ಸಿ) ಭಾರತದ ಉಪ-ರಾಷ್ಟ್ರಪತಿ
ಡಿ) ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ

209. ಸಂಸತ್ತಿನ ಸದಸ್ಯನಲ್ಲದ ವ್ಯಕ್ತಿಯು, ಮಂತ್ರಿಯಾಗಿ ನೇಮಕವಾದಲ್ಲಿ, ಎಷ್ಟು ಸಮಯದ ಒಳಗೆ ಸಂಸತ್ತಿನ ಯಾವುದಾದರೂ ಸಭೆಯ ಸದಸ್ಯನಾಗಿ ಆಯ್ಕೆಯಾಗಬೇಕು?
ಎ) 2 ತಿಂಗಳು ಬಿ) 6 ತಿಂಗಳು
ಸಿ) 9 ತಿಂಗಳು ಡಿ) 1 ವರ್ಷ

210. ಭಾರತದ ಯಾವ ಪ್ರಧಾನಮಂತ್ರಿಯು ಸಂಸತ್ತನ್ನು ಯಾವತ್ತೂ ಎದುರಿಸಲಿಲ್ಲ?
ಎ) ಮೊರಾರ್ಜಿ ದೇಸಾಯಿ
ಬಿ) ಲಾಲ್ ಬಹದ್ದೂರ್ ಶಾಸ್ತ್ರಿ
ಸಿ) ಐ.ಕೆ. ಗುಜ್ರಾಲ್
ಡಿ) ಚರಣ್‌ಸಿಂಗ್

211. ಕರ್ನಾಟಕ ಹೆಸರಾಂತ ವ್ಯಕ್ತಿ ಗಿರೀಶ್ ಕಾರ್ನಾಡ್ ಈ ಕೆಳಗಿನ ಯಾವುದರಲ್ಲಿ ಪ್ರಸಿದ್ಧರು?
ಎ) ರಂಗಭೂಮಿ ಮತ್ತು ಸಾಹಿತ್ಯ
ಬಿ) ಕೈಗಾರಿಕೆ
ಸಿ) ವೈಮಾನಿಕ ವಿಜ್ಞಾನ
ಡಿ) ಆರೋಗ್ಯ ಸೇವೆ

212. ಜಾಗತಿಕ ಮಾನವ ಹಕ್ಕುಗಳ ದಿನವನ್ನು ಎಂದು ಆಚರಿಸಲಾಗುತ್ತದೆ?
ಎ) ಡಿಸೆಂಬರ್ 10 ಬಿ) ಅಕ್ಟೋಬರ್ 2
ಸಿ) ಜೂನ್ 5 ಡಿ) ಜನವರಿ 31

213. ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ, ಕ್ರಮವಾಗಿ ಕರ್ನಾಟಕದ ಸ್ಥಾನಗಳೆಷ್ಟು?
ಎ) 22 ಮತ್ತು 13 ಬಿ) 28 ಮತ್ತು 12
ಸಿ) 28 ಮತ್ತು 13 ಡಿ) 27 ಮತ್ತು 12

214. 'ವರ್ಲ್ಡ್ ವೈಡ್ ವೆಬ್' ಅನ್ನು ಕಂಡುಹಿಡಿದವರು ಯಾರು?
ಎ) ಟಿಮ್ ಬರ್ನರ್ ಲೀ
ಬಿ) ಅಲೆಕ್ಸಾಂಡರ್ ಬೆನ್
ಸಿ) ಜೆ.ಸಿ.ಆರ್. ಲಿಕ್ಲಿಡರ್
ಡಿ) ಅಲೆಕ್ಸಾಂಡರ್ ಗ್ರಹಾಂಬೆಲ್

215. ಸೋನಾಲಿಕಾ ಮತ್ತು ಕಲ್ಯಾಣಸೋನೆ ಇವುಗಳು ಯಾವ ಬೆಳೆಯ ತಳಿಗಳು?
ಎ) ಗೋಧಿ ಬಿ) ಭತ್ತ
ಸಿ) ನವಣೆ ಡಿ) ಕೋಡುಕಾಯಿ

ಭಾಗ- 14ರ ಉತ್ತರ:
186. ಬಿ, 187. ಸಿ, 188. ಎ, 189. ಎ, 190. ಡಿ, 191. ಡಿ, 192. ಎ, 193.ಡಿ, 194. ಸಿ, 195. ಎ, 196. ಎ, 197. ಬಿ, 198. ಬಿ, 199. ಸಿ, 200. ಎ

(ಪ್ರಶ್ನೋತ್ತರ ಸಂಯೋಜನೆ: ಸ್ಪೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ವರ್ತಮಾನದಲ್ಲಿ ಬದುಕುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದು ಮಾನಸಿಕ ಸ್ವಾಸ್ಥ್ಯಕ್ಕೆ ಅತಿ ಅಗತ್ಯ.
-ಅಬ್ರಹಾಂ ಮ್ಯಾಸ್ಲೊ

ಡ್ರೋನ್ ದಾಳಿಯ ಹೊಸ ಮಾರ್ಗ ಗಡಿಯಲ್ಲಿ ಕಟ್ಟೆಚ್ಚರ ಅನಿವಾರ್ಯ

ಜಮ್ಮು ವಿಮಾನ ನಿಲ್ದಾಣದಲ್ಲಿ ಇರುವ ಭಾರತೀಯ ವಾಯುಪಡೆಯ ನೆಲೆಯ ಮೇಲೆ ಭಾನುವಾರ ಬೆಳಗಿನ ಜಾವ ಡ್ರೋನ್ ಮೂಲಕ ಎರಡು ದಾಳಿಗಳು ನಡೆದಿವೆ. ವಾಯುಪಡೆ ನೆಲೆಯಲ್ಲಿರುವ ಭಾರಿ ಭದ್ರತೆಯ ತಂತ್ರಜ್ಞಾನ ಕೇಂದ್ರದ ಚಾವಣಿಯನ್ನು ಸೀಳಿ ಒಂದು ಸ್ಫೋಟಕವನ್ನು ಡ್ರೋನ್ ಒಳಕ್ಕೆ ಎಸೆದಿದೆ. ಜಮ್ಮುವಿನ ರತ್ನುಚಕ್-ಕಾಲೂಚಕ್ ಸೇನಾ ಠಾಣೆಯ ಸುತ್ತ ಭಾನುವಾರ ರಾತ್ರಿ 11.45ರ ಹೊತ್ತಿಗೆ ಮತ್ತು ಸೋಮವಾರ ಬೆಳಗಿನ ಜಾವ 2.40ರ ಹೊತ್ತಿಗೆ ಎರಡು ಡ್ರೋನ್‌ಗಳು ಹಾರಾಟ ನಡೆಸಿವೆ. ಈ ಘಟನೆಗಳು ಭಾರತದ ಆಂತರಿಕ ಸುರಕ್ಷತೆಗೆ ಸಂಬಂಧಿಸಿದಂತೆ ಕಳವಳಕಾರಿ. ಭಾರತದ ವಿವಿಧ ಕೇಂದ್ರಗಳನ್ನು ಗುರಿಯಾಗಿಸಿ ಭಯೋತ್ಪಾದಕರು ದಾಳಿಗಳನ್ನು ನಡೆಸಿದ್ದು ಇದು ಮೊದಲೇನೂ ಅಲ್ಲ. ಗ್ರೆನೇಡ್, ಗುಂಡು, ಬಾಂಬ್, ಆತ್ಮಹತ್ಯಾ ಬಾಂಬರ್‌ಗಳು ಮತ್ತು ಸ್ಫೋಟಕ ತುಂಬಿದ ವಾಹನಗಳನ್ನು ಅಪ್ಪಳಿಸುವಂತಹ ದಾಳಿಗಳನ್ನು ಭಾರತವು ಕಂಡಿದೆ. ಆದರೆ, ಭಾರತ ವಿರೋಧಿ ಶಕ್ತಿಗಳು ಈಗ ಬಾಂಬ್‌ಗಳನ್ನು ತಮ್ಮ ಗುರಿಗೆ ಎಸೆಯಲು ಹೊಸ ಮಾರ್ಗವನ್ನು ಕಂಡುಕೊಂಡಿವೆ ಎಂಬುದು ನಿಚ್ಚಳವಾಗಿದೆ. ಡ್ರೋನ್‌ಗಳ ಮೂಲಕವೂ ದಾಳಿ ನಡೆಸಬಹುದು ಎಂಬುದು ಭಾನುವಾರದ ಬೆಳವಣಿಗೆಯಿಂದ ಖಚಿತವಾಗಿದೆ. ನಿಯೋಜಿತ ಉಗ್ರರಿಗೆ ಶಸ್ತ್ರಾಸ್ತ್ರ ತಲುಪಿಸಲು ಡ್ರೋನ್‌ಗಳನ್ನು ಈ ಹಿಂದೆಯೂ ಬಳಸಲಾಗಿತ್ತು. ಜಮ್ಮು-ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷಾಧಿಕಾರ ರದ್ದತಿಯ ಬಳಿಕ ಭಾರತ-ಪಾಕಿಸ್ತಾನ ಗಡಿ ಪ್ರದೇಶದಲ್ಲಿ ಸುಮಾರು 300 ಡ್ರೋನ್‌ಗಳನ್ನು ಗುರುತಿಸಲಾಗಿದೆ. ಶಸ್ತ್ರಾಸ್ತ್ರ ಸಾಗಿಸಿದ ಡ್ರೋನ್‌ಗಳನ್ನು ಭದ್ರತಾ ಪಡೆಗಳು ವಶಪಡಿಸಿಕೊಂಡಿದ್ದೂ ಇದೆ. ಈಗ, ಡ್ರೋನ್ ಮೂಲಕ ದಾಳಿಯೇ ನಡೆದಿದೆ. ವಾಯುಪಡೆಯ ನೆಲೆ ಮೇಲೆ ನಡೆದ ದಾಳಿಯಲ್ಲಿ ಜೀವಹಾನಿ ಸಂಭವಿಸಿಲ್ಲ ಮತ್ತು ಮಹತ್ವದ ಸಾಧನಗಳು ಹಾನಿಗೊಂಡಿಲ್ಲ ಎಂಬುದು ಸಮಾಧಾನಕರ ಅಂಶ. ಆದರೆ, ಡ್ರೋನ್ ಮೂಲಕ ದಾಳಿ ನಡೆಸಬಹುದು ಎಂಬ ಸಾಧ್ಯತೆಯೇ ಭದ್ರತಾ ಪಡೆಗಳಿಗೆ ಬಹುದೊಡ್ಡ ಸವಾಲು ಎಸೆಯುತ್ತದೆ. ಜಮ್ಮು ವಿಮಾನ ನಿಲ್ದಾಣವು ಅಂತರರಾಷ್ಟ್ರೀಯ ಗಡಿಯಿಂದ ವಾಯುಮಾರ್ಗದ ಮೂಲಕ ಕೇವಲ 12-14 ಕಿ.ಮೀ. ದೂರದಲ್ಲಿದೆ. ವಾಯುನೆಲೆಯನ್ನೂ ಹೊಂದಿರುವ ಜಮ್ಮು ವಿಮಾನ ನಿಲ್ದಾಣವು ಅತಿ ಹೆಚ್ಚು ಭದ್ರತೆ ಹೊಂದಿರುವ ಸ್ಥಳ. ಅಂತಹ ಸ್ಥಳವನ್ನು ಡ್ರೋನ್ ಮೂಲಕ ತಲುಪುವುದು ಉಗ್ರರಿಗೆ ಸಾಧ್ಯವಾಗಿದೆ. ಡ್ರೋನ್‌ಗಳನ್ನು ಗುರುತಿಸುವುದು ಸುಲಭವಲ್ಲ ಎಂಬುದು ಇದಕ್ಕೆ ಮುಖ್ಯ ಕಾರಣ. ಡ್ರೋನ್ ದಾಳಿಯನ್ನು ಪಾಕಿಸ್ತಾನದಿಂದಲೇ ನಡೆಸಬೇಕು ಎಂದೇನಿಲ್ಲ ಎಂಬುದೂ ನಮ್ಮ ಗಮನದಲ್ಲಿ ಇರಬೇಕಾದುದು ಬಹಳ ಮುಖ್ಯ. ಭಾರತದ ನೆಲದಿಂದಲೇ ಡ್ರೋನ್ ದಾಳಿ ನಡೆಸಬಹುದು. ಇಂತಹ ಸಾಧ್ಯತೆಯು ದೇಶದ ಮಹತ್ವದ ಹಲವು ಸ್ಥಾವರಗಳನ್ನು ಅಪಾಯದ ಪರಿಧಿಯೊಳಗೆ ತರಬಹುದು.



ಡ್ರೋನ್ ಮೂಲಕ ದಾಳಿ ನಡೆಸಬಹುದು ಎಂಬ ಸಾಧ್ಯತೆಯೇ ಭದ್ರತಾ ಪಡೆಗಳಿಗೆ ಬಹುದೊಡ್ಡ ಸವಾಲಾಗಿ ಪರಿಣಮಿಸಬಹುದು

ವಾಯುನೆಲೆಯ ಮೇಲೆ ದಾಳಿ ನಡೆದ ಮರುದಿನವೇ ರತ್ನುಚಕ್-ಕಾಲೂಚಕ್ ಪ್ರದೇಶದಲ್ಲಿ ಎರಡು ಡ್ರೋನ್‌ಗಳು ಕಂಡುಬಂದಿವೆ. ಈ ಡ್ರೋನ್‌ಗಳತ್ತ ಸೈನಿಕರು 24 ಸುತ್ತು ಗುಂಡು ಹಾರಿಸಿದ್ದರೂ ಅವುಗಳನ್ನು ಹೊಡೆದುರುಳಿಸಲು ಸಾಧ್ಯವಾಗಿಲ್ಲ. ಡ್ರೋನ್‌ಗಳನ್ನು ಗುರುತಿಸುವುದು ಸುಲಭವಲ್ಲ. ಜತೆಗೆ, ಡ್ರೋನ್‌ಗೆ ತಗಲುವ ವೆಚ್ಚ ಕೂಡ ಬಹಳ ಕಡಿಮೆ. ಹಾಗಾಗಿ, ಭಾರತ ವಿರೋಧಿ ಉಗ್ರಗಾಮಿಗಳು ಮುಂದಿನ ದಿನಗಳಲ್ಲಿ ದಾಳಿ ನಡೆಸಲು ಡ್ರೋನ್‌ಗಳನ್ನು ಹೆಚ್ಚಾಗಿ ಬಳಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಭಾರತದ ಭದ್ರತಾ ಪಡೆಗಳು ಡ್ರೋನ್ ಪತ್ತೆ ಮತ್ತು ಹೊಡೆದುರುಳಿಸುವ ಅತ್ಯುತ್ತಮ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ ಎನಿಸಲಿದೆ. ಡ್ರೋನ್ ದಾಳಿ ತಡೆಗಟ್ಟಲು ಏನೇನು ಮಾಡಬೇಕಿದೆ ಎಂಬ ಮಾರ್ಗಸೂಚಿಯನ್ನು ಎರಡು ವರ್ಷಗಳ ಹಿಂದೆಯೇ ಅಂತಿಮಗೊಳಿಸಲಾಗಿದೆ. ಆದರೆ, ಅದಿನ್ನೂ ಜಾರಿಗೆ ಬಂದಿಲ್ಲ. ಇದೇ ಔದಾಸೀನ್ಯ ಮುಂದುವರಿದರೆ ಅದಕ್ಕೆ ಭಾರಿ ಬೆಲೆ ತೆರಬೇಕಾದೀತು ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದು ಸಕಾಲ.

ವಾಯುನೆಲೆ ಮೇಲೆ ದಾಳಿ ನಡೆಸಿದ ಮತ್ತು ಸೇನಾ ಠಾಣೆಗಳ ಸುತ್ತ ಹಾರಾಡಿದ ಡ್ರೋನ್‌ಗಳು ಎಲ್ಲಿಂದ ಬಂದಿವೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಇವು ಪಾಕಿಸ್ತಾನದಿಂದ ಬಂದಿರಬಹುದು ಎಂಬುದನ್ನು ತಳ್ಳಿಹಾಕಲು ಆಗದು. ಭಾರತ ಮತ್ತು ಪಾಕಿಸ್ತಾನ ನಡುವಣ ಹಿಂಬಾಗಿಲ ಮಾತುಕತೆಯಿಂದಾಗಿ ನಿಯಂತ್ರಣ ರೇಖೆಯುದ್ದಕ್ಕೂ ಕೆಲ ತಿಂಗಳಿನಿಂದ ಶಾಂತಿ ನೆಲೆಸಿದೆ. ಜಮ್ಮು-ಕಾಶ್ಮೀರದಲ್ಲಿ ಚುನಾವಣೆ ನಡೆಸಿ ಪ್ರಜಾತಂತ್ರ ವ್ಯವಸ್ಥೆ ಮರುಸ್ಥಾಪನೆಯ ಪ್ರಯತ್ನ ಆರಂಭ ಆಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು-ಕಾಶ್ಮೀರದ ರಾಜಕೀಯ ಪಕ್ಷಗಳ ಮುಖಂಡರ ಜತೆ ಮಾತುಕತೆ ನಡೆಸಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ನಡುವಣ ಸಂಬಂಧ ಸಹಜ ಸ್ಥಿತಿಗೆ ಮರಳಬಾರದು ಎಂದು ಬಯಸುವ ಶಕ್ತಿಗಳು ಇವೆ. ಎರಡೂ ದೇಶಗಳ ನಡುವಣ ಸಂಬಂಧ ಸೌಹಾರ್ದಯುತವಾಗುವುದು ಬೇಡ ಎನ್ನುವ ಮನಃಸ್ಥಿತಿಯ ಜನರು ಭಾರತದಲ್ಲಿಯೂ ಇರಬಹುದು. ಇಂತಹ ವಿಘ್ನಸಂತೋಷಿಗಳ ಕೈ ಮೇಲಾಗುವುದಕ್ಕೆ ಭಾರತ ಮತ್ತು ಪಾಕಿಸ್ತಾನ ಸರ್ಕಾರ ಅವಕಾಶ ಕೊಡಬಾರದು. ಭಾರತವು ಗಡಿಯಲ್ಲಿ ಕಟ್ಟೆಚ್ಚರದಿಂದ ಕಾವಲು ಕಾಯುವ ಅಗತ್ಯ ಇದೆ. ಅದರ ಜತೆಗೆ, ದ್ವಿಪಕ್ಷೀಯ ಸಂಬಂಧವು ವಿಷಮಗೊಳ್ಳಲಿ ಎಂಬ ಒಂದೇ ಕಾರಣಕ್ಕೆ ಡ್ರೋನ್ ದಾಳಿಯ ಪಿತೂರಿ ರೂಪಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರ ಮೇಲೆ ಒತ್ತಡವನ್ನೂ ಹೇರಬೇಕು. ಷಡ್ಯಂತ್ರ ಮಾಡಿದವರು ಪಾಕಿಸ್ತಾನದ ಸೇನೆಯ ಭಾಗವಾಗಿರುವ ಸಾಧ್ಯತೆಯೂ ಇದೆ. ಈ ವಿಚಾರದಲ್ಲಿ ಅನಗತ್ಯ ಅಬ್ಬರ ಎಬ್ಬಿಸದೆ, ಇಮ್ರಾನ್ ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವುದು ಹೆಚ್ಚು ಜಾಣ್ಮೆಯ ನಡೆ ಅನಿಸಬಹುದು.

ದಿನದ ಟ್ವೀಟ್

ಗಂಭೀರ ವಿಚಾರ



ಜಮ್ಮುವಿನಲ್ಲಿ ಉಗ್ರರು ನಡೆಸಿದ ಡ್ರೋನ್ ದಾಳಿಯ ವಿಚಾರವನ್ನು ಭಾರತವು ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸಿದೆ. ಭಯೋತ್ಪಾದಕ ಚಟುವಟಿಕೆಗಳಿಗೆ ಡ್ರೋನ್‌ಗಳನ್ನು ಬಳಸುವುದು ಗಂಭೀರವಾದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳಿದೆ. ಈ ಬೆದರಿಕೆಯ ಬಗ್ಗೆ ವಿಶ್ವವು ಗಮನ ಹರಿಸಬೇಕು.

ಸುಚರಿತಾ ಕುಕ್ರೇತಿ, ಟಿ.ವಿ. ನಿರೂಪಕಿ



ಮಾನದಂಡವೇನು?

ಮಕ್ಕಳ ಶೈಕ್ಷಣಿಕ ಭವಿಷ್ಯವನ್ನು ನಿರ್ಧರಿಸುವಲ್ಲಿ ಪಿಯು ಪರೀಕ್ಷೆಗಳು ಅತಿಹೆಚ್ಚು ಮುಖ್ಯವಾಗುತ್ತವೆ. ಆದರೆ ಅವುಗಳನ್ನು ರದ್ದುಪಡಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಜುಲೈನಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಇದು ಯಾಕೆಂದೇ ನನಗೆ ಅರ್ಥವಾಗಲಿಲ್ಲ.

ವಸಂತ್ ಶೆಟ್ಟಿ, ಬರಹಗಾರ

50 ವರ್ಷಗಳ ಹಿಂದೆ

ಬುಧವಾರ, 30-6-1971

• ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನಕ್ಕೆ ಕಾನೂನು ಮಾಡಲು ಒತ್ತಾಯ

ಮೈಸೂರು, ಜೂನ್ 29– ರಾಜ್ಯ ಚಿತ್ರ ಮಂದಿರಗಳಲ್ಲಿ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ ಮತ್ತು ಪ್ರಸ್ತುತ ಬಾಡಿಗೆ ಬದಲು ಶೇಕಡಾವಾರು ಆಧಾರದ ಮೇಲೆ ಚಿತ್ರಗಳನ್ನು ಪ್ರದರ್ಶಿಸುವಂತೆ ಕಾನೂನು ಮಾಡಬೇಕೆಂದು ಕನ್ನಡ ಚಳವಳಿಗಾರರ ನಾಯಕ ವಾಟಾಳ್ ನಾಗರಾಜ್ ಅವರು ಸರ್ಕಾರವನ್ನು ಒತ್ತಾಯಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ನಿನ್ನೆ ಇಲ್ಲಿ ಮಾತನಾಡುತ್ತಿದ್ದ ಅವರು, ಕೇವಲ ಸಬ್ಸಿಡಿ ನಿಯಮ ಬದಲಾವಣೆ ವಿರುದ್ಧ ಚಳವಳಿ ನಡೆಸಲಿಚ್ಛಿಸುವ ರಾಜ್ಯ ಚಲನಚಿತ್ರ ಚೇಂಬರ್‌ನವರು ಈ ಬಗ್ಗೆ ಮೌನವಾಗಿರುವುದಕ್ಕೆ ತಮ್ಮ ವಿಷಾದವನ್ನು ವ್ಯಕ್ತ ಮಾಡಿದರು.

ಸಬ್ಸಿಡಿ ನಿಲ್ಲಿಸಿದರೆ ಕನ್ನಡ ಚಿತ್ರಗಳ ಮೇಲೆ ಆಗುವ ಪರಿಣಾಮಕ್ಕಿಂತ ಚಿತ್ರಮಂದಿರಗಳವರು ತೆಗೆದುಕೊಳ್ಳುತ್ತಿರುವ ‘ದುಬಾರಿ ಬಾಡಿಗೆ’ಯಿಂದ ಚಿತ್ರರಂಗದ ಮೇಲೆ ‘ಘೋರ ಪರಿಣಾಮ’ ಆಗುತ್ತದೆ ಎಂದು ವಾಟಾಳ್ ತಿಳಿಸಿದರು.

• ಚಾರಿತ್ರ್ಯ, ಶಿಸ್ತು ಇಲ್ಲದೆ ದೇಶ ಅಭಿವೃದ್ಧಿ ಆಗದು– ಕೆ.ಎಸ್. ಹೆಗಡೆ

ಮಂಗಳೂರು, ಜೂನ್ 29– ಜಗತ್ತು ತೀವ್ರಗತಿಯಿಂದ ಅಭಿವೃದ್ಧಿ ಹೊಂದುತ್ತಿದೆ. ಆದರೆ ನಮ್ಮಲ್ಲಿ ರಾಷ್ಟ್ರೀಯ ಚಾರಿತ್ರ್ಯ ಮತ್ತು ಶಿಸ್ತು ಬೆಳೆಯದೆ, ಸಾಕಷ್ಟು ಅಭಿವೃದ್ಧಿ ಹೊಂದಿಲ್ಲವೆಂದು ಭಾರತ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶ ಕೆ.ಎಸ್. ಹೆಗಡೆ ಅವರು ಹೇಳಿದರು.

ಮಂಗಳೂರು ರೋಟರಿ ಕ್ಲಬ್ ಸದಸ್ಯರನ್ನುದ್ದೇಶಿಸಿ ಜೂನ್ 25ರಂದು ಅವರು ಭಾಷಣ ಮಾಡುತ್ತಾ, ದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಜನತೆ ವಿವೇಚಿಸಿ ಸರ್ಕಾರಕ್ಕೆ ಯೋಗ್ಯ ಮಾರ್ಗದರ್ಶನ ನೀಡಬೇಕೆಂದು ಹೇಳಿದರು. ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಂಡು ಆಡಂಬರದ ಜೀವನಕ್ಕೆ ತಡೆ ಹಾಕಬೇಕೆಂದು ಅವರು ಕರೆಯಿತ್ತರು.

ಡಾ. ಎಚ್.ಡಿ. ಅಡ್ಯಂತಾಯ ಅವರು ಅಧ್ಯಕ್ಷತೆ ವಹಿಸಿದ್ದರು.

ಭೂಮಿಯತ್ತ ಧಾವಿಸಿ ಬರುವ ಕಾಯಗಳ ಮೇಲಿನ ಕಣ್ಗಾವಲಿನ ಕೆಲಸ ಚುರುಕಾಗಿ ಸಾಗುತ್ತಿದೆ

ಬಂದೀತು ಅನೂಹ್ಯ ಆಪತ್ತು



ವಿಶ್ಲೇಷಣೆ

ಬಿ.ಎಸ್.ಶೈಲಜಾ

ಕಂಡು ಕೇಳರಿಯದ ಆಪತ್ತು ಯಾವಾಗಲಾದರೂ ಎದುರಾಗಬಹುದು. ಅದಕ್ಕೆ ನಾವು ಸಜ್ಜಾಗಬೇಕು ಎಂದು ಮನವರಿಕೆ ಮಾಡಿಕೊಡುವುದೇ ಜೂನ್ 30ರ ‘ಕ್ಷುದ್ರಗ್ರಹದ ದಿನ’ದ ಉದ್ದೇಶ.

ಕ್ಷುದ್ರಗ್ರಹ ಎಂಬ ಹೆಸರು ಸೌರಮಂಡಲದ ಪಠ್ಯದಲ್ಲಿ ಕೇಳಿಬರುತ್ತದೆ. ಸೂರ್ಯ, ಚಂದ್ರ, ಎಂಟು ಗ್ರಹಗಳಲ್ಲದೆ ನಮ್ಮ ನೆರೆಯಲ್ಲಿರುವ ಲಕ್ಷಗಟ್ಟಲೆ ಸಣ್ಣ ಕಾಯಗಳಲ್ಲಿ ಇವುಗಳದ್ದು ಒಂದು ವರ್ಗ. 220 ವರ್ಷಗಳ ಹಿಂದೆ ಪಿಯಝಿ ಎಂಬಾತ ಈ ಚುಕ್ಕೆಯನ್ನು ಗುರುತಿಸಿ ಸೆರೆಸ್ ಎಂದು ಹೆಸರಿಸಿದಾಗ, ಇದನ್ನು ಗ್ರಹ ಎಂದೇ ಭಾವಿಸಿದ್ದುಂಟು. ಆದರೆ ಕೆಲವೇ ವರ್ಷಗಳಲ್ಲಿ ಇಂತಹ ಇನ್ನೂ ಹಲವಾರು ಕಾಯಗಳನ್ನು ಮೈನರ್ ಪ್ಲಾನೆಟ್, ಅಂದರೆ ಕ್ಷುದ್ರಗ್ರಹ ಎಂದು ವರ್ಗೀಕರಿಸಲಾಯಿತು. 15 ವರ್ಷಗಳ ಹಿಂದೆ ಇದು ಕುಬ್ಜ ಗ್ರಹ (ಡ್ವಾರ್ಫ್ ಪ್ಲಾನೆಟ್) ವರ್ಗಕ್ಕೆ ಸೇರಿತು.


ಕ್ಷುದ್ರಗ್ರಹಗಳ ಗಾತ್ರ ಕೆಲವು ಮೀಟರ್‌ನಿಂದ ಸಾವಿರ ಕಿ.ಮೀ.ವರೆಗೂ ಇದೆ. ಇನ್ನು ಸಣ್ಣ ಪುಟ್ಟ ಬಂಡೆಗಳೂ ಇವೆ. ಅವುಗಳಿಗೆ ಮೀಟಿಯೊರಾಯ್ಡ್ ಎಂಬ ಹೆಸರಿದೆ. ಈ ಸಣ್ಣ ತುಣುಕುಗಳು ಭೂವಾತಾವರಣದಲ್ಲಿ ಉರಿದು ಹೋಗುವಾಗ ನಕ್ಷತ್ರವೊಂದು ಬಿದ್ದಂತೆಯೇ ಚಿಕ್ಕ ಚುಕ್ಕೆಯಾಗಿ ಕಾಣಿಸುತ್ತವೆ. ಈ ವಿದ್ಯಮಾನಕ್ಕೆ ಮೀಟಿಯರ್ ಅಂದರೆ ಉಲ್ಕೆ, ಉಲ್ಕಾಪಾತ ಎಂಬ ಹೆಸರಿದೆ. ಆ ಬಂಡೆ ದೊಡ್ಡದಾಗಿದ್ದು ನೆಲವನ್ನು ತಲುಪಿದರೆ ಅದಕ್ಕೆ ಮೀಟಿಯೊರೈಟ್ ಅಂದರೆ ಉಲ್ಕಾಶಿಲೆ ಎಂಬ ಹೆಸರಿದೆ. ಇವುಗಳು ಭಾರಿ ವೇಗದಿಂದ ಅಪ್ಪಳಿಸುವ ಕಾರಣ ಕುಳಿಗಳನ್ನು ಉಂಟುಮಾಡುತ್ತವೆ. ಔರಂಗಾಬಾದ್ ಸಮೀಪ ಇರುವ ಲೋನಾರ್ ಎಂಬ ಸರೋವರ ಹೀಗೆ ಉಲ್ಕಾಘಾತದಿಂದ ಉಂಟಾದದ್ದು.

ಸೌರಮಂಡಲದ ರಚನೆಯಾದಾಗಲೇ ಸೃಷ್ಟಿಯಾದ ಬಂಡೆಗಳು ಒಗ್ಗೂಡಿ ಗ್ರಹಗಳಾದವು; ವಿಭಿನ್ನ ಕಾರಣಗಳಿಂದ ಒಟ್ಟಾಗದೇ ಉಳಿದುಹೋದ ತುಣುಕುಗಳು ಈ ಕ್ಷುದ್ರಗ್ರಹಗಳು. ಆದ್ದರಿಂದ ಸೌರಮಂಡಲದ ಮೂಲ ಅನಿಲ ಮೇಘ ಹೇಗಿತ್ತು ಎಂಬ ರಹಸ್ಯವನ್ನು ಇವು ಅಡಗಿಸಿ ಇಟ್ಟುಕೊಂಡಿವೆ. ಕಳೆದ ದಶಕದಲ್ಲಿ ಜಪಾನಿನ ಹಯಾಬುಸಾ 1 ಮತ್ತು 2 ನೌಕೆಗಳು ಕ್ಷುದ್ರಗ್ರಹಗಳ ಮಣ್ಣನ್ನು ಹೊತ್ತು ತಂದು ಈ ಸಿದ್ಧಾಂತಕ್ಕೆ ಪುಷ್ಟಿ ನೀಡಿವೆ. ಆದರೆ ಇವುಗಳ ವೈವಿಧ್ಯವನ್ನು ಅರಿಯಲು ಪದೇ ಪದೇ ಇಂತಹ ಯಾತ್ರೆಗಳನ್ನು ಮಾಡುವುದು ಅಷ್ಟೇನೂ ಸುಲಭವಲ್ಲ. ಆದರೆ ಅವುಗಳೇ ನಮ್ಮ ಪ್ರಯೋಗಶಾಲೆಗೆ ಬರುವುವು ಎಂದರೆ ಆಶ್ಚರ್ಯವಾಗುವುದಲ್ಲವೇ?

ಸಾಮಾನ್ಯವಾಗಿ ಗುರು ಮತ್ತು ಮಂಗಳ ಗ್ರಹಗಳ ಕಕ್ಷೆಗಳ ನಡುವೆ ಇರುವ ಈ ಕ್ಷುದ್ರಗ್ರಹಗಳಲ್ಲಿ ಕೆಲವು ಭೂಮಿಯತ್ತ ಬರುವುದುಂಟು. ಇನಿಸ್‌ಫ್ರೀ, ಪ್ರಿಬ್ರಾಂ, ಪೀಕ್ ಸ್ಕಿಲ್- ಇವೆಲ್ಲ ಭೂಮಿಯ ಮೇಲೆ ಅಪ್ಪಳಿಸಿದವು. ಆದರೆ ಹೇಳದೆ ಕೇಳದೆ ಬಂದು ಅಪ್ಪಳಿಸುವ ಕಾಯಗಳ ಸಂಖ್ಯೆ ಇದೀಗ ಹೆಚ್ಚುತ್ತಿದೆ. ಆಕಾಶದಿಂದ ಕಲ್ಲು ಬಂದು ಬೀಳುವುದು ಹೊಸ ವಿಷಯವೇನಲ್ಲ. ವಿಜಯಪುರದ ಗೋಲಗುಂಬಜ್‌ನಲ್ಲಿ ತೂಗಾಡುತ್ತಿರುವ ಕಲ್ಲು, ದೇವಾಲಯವೊಂದರಲ್ಲಿ ತ್ರಿಶೂಲವಾಗಿ ನಿಂತಿರುವ ಕಲ್ಲು ಅಲ್ಲದೆ ಮ್ಯೂಸಿಯಂಗಳಲ್ಲಿ ಪ್ರದರ್ಶನವಾಗುತ್ತಿರುವವೆಲ್ಲ ಕೆಲವು ಉದಾಹರಣೆಗಳು. ಎರಡು ವರ್ಷದ ಕೆಳಗೆ ರಾಜಸ್ಥಾನದ ಮುಕುಂದಪುರ ಎಂಬ ಹಳ್ಳಿಯಲ್ಲಿ ಉರಿಯುತ್ತಾ ಬಂದುಬಿದ್ದ ಕಲ್ಲನ್ನು ರೈತರು ನೋಡಿ ವರದಿ ಮಾಡಿದರು. ವಿಜ್ಞಾನಿಗಳು ಕಲ್ಲನ್ನು ಆಯ್ದು ಪರಿಶೀಲಿಸಿದರು. ಬಿದ್ದ ಆಘಾತಕ್ಕೆ ಅದು ತುಂಡಾಗಿತ್ತು. ಫಳಗುಟ್ಟುತ್ತಿದ್ದ ಒಳಪದರಗಳು ಸೌರಮಂಡಲದ ಇತಿಹಾಸವನ್ನೇ ಹೇಳಿದವು.

ಕಳೆದ ವರ್ಷ 2020ರ ಜುಲೈನಲ್ಲಿ ಬಿಹಾರದ ಮಹಾದೇವ ಎಂಬ ಹಳ್ಳಿಯ ಗದ್ದೆಯೊಂದರಲ್ಲಿ ಎರಡು ಕಿಲೊ ತೂಕದ ಕಲ್ಲು ಬಿತ್ತು. ಅದನ್ನು ಬಗೆದು ತೆಗೆದ ರೈತರು ಅದಕ್ಕೊಂದು ಗುಡಿ ಕಟ್ಟುವುದರಲ್ಲಿದ್ದರು. ಹಾಗಾಗಿದ್ದಲ್ಲಿ ಅದನ್ನು ಅಭ್ಯಸಿಸಿದ ವಿಜ್ಞಾನಿಗಳಿಗೆ ಅದರ ಅಪೂರ್ವ ಗುಣಲಕ್ಷಣವನ್ನು ತಿಳಿದುಕೊಳ್ಳುವ ಸಂದರ್ಭ ತಪ್ಪಿಹೋಗುತ್ತಿತ್ತು. ಹೀಗೆ ಕಲ್ಲುಗಳೇ ಬಂದು ಬೀಳುತ್ತಿರುವಾಗ ಅವುಗಳ ವೈಜ್ಞಾನಿಕ ಮಹತ್ವವನ್ನು ತಿಳಿಯಲು ನಾವು ಬಾಹ್ಯಾಕಾಶಕ್ಕೆ ಹೋಗಿ ಅದನ್ನು ಪ್ರಯೋಗಶಾಲೆಗೆ ತಂದು ಹೈರಾಣಾಗುವ ಪ್ರಮೇಯವೇ ಇಲ್ಲ ಎನ್ನಬಹುದಲ್ಲವೇ? ಆದರೆ ಎರಡು ಕಿಲೊ ತಲೆಯಮೇಲೆ ಬಿದ್ದರೇನು ಎಂಬುದು ಒಂದು ಚಿಂತೆ. ಅದಕ್ಕಿಂತ ದೊಡ್ಡದೂ (ಚಂದ್ರನಷ್ಟು ದೊಡ್ಡದೂ ಇರಬಹುದು) ಬೀಳಬಹುದಲ್ಲವೇ? ಹಾಗೆ ಬಿದ್ದದ್ದೇ ಆದರೆ ಏನೆಲ್ಲಾ ಆಗಬಹುದು? ಇದನ್ನು ಕೂಲಂಕಷವಾಗಿ ಲೆಕ್ಕ ಮಾಡಲಾಗಿದೆ. ಹಿರೋಷಿಮಾ ಅಣುಬಾಂಬಿಗಿಂತ ಕೋಟಿಗಟ್ಟಲೆ ಹೆಚ್ಚು ಪ್ರಮಾಣದ ಚೈತನ್ಯ ಬಿಡುಗಡೆಯಾಗುವ ಸಾಧ್ಯತೆ ಇರುವುದಕ್ಕೆ ಸಿಗುವ ಪ್ರತ್ಯಕ್ಷ ಮತ್ತು ಪರೋಕ್ಷ ಪುರಾವೆಗಳು ಅನೇಕ.

ಚಂದ್ರನ ಮೈಮೇಲಿನ ಕುಳಿಗಳು, ಭೂಮಿಯ ಮೇಲೂ ಇರುವ ಕುಳಿಗಳು, ಡೈನೊಸಾರುಗಳ ನಿರ್ನಾಮ- ಹೀಗೆ. ನೂರಿನ್ನೂರು ಕಿ.ಮೀ. ಗಾತ್ರದ ಕಾಯಗಳು ಅಪಾಯಕಾರಿಯೇ. ಭೂಮಿಗೆ ಅಪ್ಪಳಿಸಬಹುದಾದಷ್ಟು ಸಮೀಪವಾಗಿ ಹಾದು ಹೋಗುವ ಕಾಯಗಳಿಗೆ ನಿಯರ್ ಅರ್ತ್ ಆಸ್ಟರಾಯ್ಡ್ ಎಂಬ ಹೆಸರಿದೆ. ಇಂತಹದ್ದೊಂದು ಘಟನೆ ಅಪರೂಪವೇನಲ್ಲ ಎಂದಾದರೆ ಅದರಿಂದ ಮನುಕುಲದ ವಿನಾಶವನ್ನು ತಪ್ಪಿಸುವುದೂ ಒಂದು ಹೊಣೆಯಾಗುವುದಲ್ಲವೇ? 1908ರ ಜೂನ್ 30ರಂದು ರಷ್ಯಾದ ತುಂಗುಸ್ಕಾ ಎಂಬಲ್ಲಿ ಉಂಟಾದ ಆಘಾತ ಎಚ್ಚರಿಕೆಯ ಗಂಟೆಯಾಯಿತು. ಆದ್ದರಿಂದಲೇ ಪ್ರತಿವರ್ಷ ಜೂನ್ 30ಕ್ಕೆ ‘ಎಚ್ಚರ’ ಎಂಬ ಕೂಗು ಕೇಳುವುದು.



ಹೀಗೊಂದು ಕಾಯ ಭೂಮಿಯತ್ತ ಧಾವಿಸಿ ಬರುತ್ತಿರುವುದನ್ನು ಪತ್ತೆ ಮಾಡುವುದು ಮೊದಲನೆಯ ಕೆಲಸ. ಎಷ್ಟು ದೂರದಲ್ಲಿರುವಾಗ ಅವು ನಮಗೆ ಗೋಚರವಾಗುತ್ತವೆ ಎಂಬುದರ ಆಧಾರದ ಮೇಲೆ ತಕ್ಷಣವೇ ಮುಂದಿನ ಕಾರ್ಯವನ್ನು ನಿರ್ಧರಿಸಬೇಕಾಗುತ್ತದೆ. ಲೀನಿಯರ್, ಸ್ಪೇಸ್ ವಾಚ್ ಮುಂತಾಗಿ ಕೆಲವೊಂದು ದೂರದರ್ಶಕಗಳನ್ನು ಕಣ್ಗಾವಲಿನ ಕೆಲಸಕ್ಕೆ ಮೀಸಲಿಡಲಾಗಿದೆ. ಆಕಾಶದಲ್ಲಿ ಕ್ಷೀಣವಾದ ಚುಕ್ಕೆಯೊಂದು ಚಲಿಸುತ್ತಿದೆ ಎಂದ ಕೂಡಲೆ ಅದನ್ನೇ ಹಿಂಬಾಲಿಸುತ್ತಾ ತಿರುಗುವ ಇವು ಕಕ್ಷೆಗಳ ಅಂದಾಜನ್ನು ಒದಗಿಸುತ್ತವೆ. ಇತರ ದೂರದರ್ಶಕಗಳು ಅದರ ಜಾಡು ಹಿಡಿದು ಅದರ ಮುಂದಿನ ಚಲನೆಯ ಅಂದಾಜು ಮಾಡಲು ಮಾಹಿತಿ ಒದಗಿಸುತ್ತವೆ.

ಕಳೆದ ದಶಕದಲ್ಲಿ ಇವು ಪತ್ತೆ ಮಾಡಿರುವ ಇಂತಹ ಭೂಸಾಮೀಪ್ಯದ ಪುಟ್ಟ ಕಾಯಗಳ ಸಂಖ್ಯೆ ಲಕ್ಷಗಟ್ಟಲೆ ಇದೆ. ಇವುಗಳಲ್ಲಿ ಒಂದು ಕ್ಷುದ್ರಗ್ರಹದ ಕಕ್ಷೆಯಂತೂ ಭೂಮಿಯ ಕಕ್ಷೆಗೆ ಅಂಟಿಕೊಂಡಂತೆಯೇ ಇದೆ. ಕೆಲವು ವರ್ಷಗಳ ಹಿಂದೆ ಆತಂಕ ಸೃಷ್ಟಿಸಿದ್ದ ಅಪೋಫಿಸ್ ಎಂಬ ಕುದ್ರಗ್ರಹ ಈಗ ಅಪಾಯದ ಪಟ್ಟಿಯಲ್ಲಿಲ್ಲ. ಹೊಸ ಹೊಸ ಪುಟ್ಟ ಕಾಯಗಳು ಪಟ್ಟಿಗೆ ಸೇರುತ್ತಲೇ ಇವೆ. ಸಾಮಾನ್ಯವಾಗಿ ಇವು ಭೂಮಿಯನ್ನು ಸಮೀಪಿಸುವ ಅಂತರವನ್ನು ಭೂಮಿ- ಚಂದ್ರರ ಸರಾಸರಿ ದೂರದ (3,84,000 ಕಿ.ಮೀ) ಎಲ್‌ಡಿ ಮಾನದಲ್ಲಿ (ಲೂನರ್ ಡಿಸ್ಟೆನ್ಸ್) ಗುರುತಿಸುತ್ತಾರೆ. ಸಾವಿರಾರು ಕಿ.ಮೀ. ಎತ್ತರದಲ್ಲಿ ಅದು ಹಾದು ಹೋಗುವಾಗ ಉರಿದು ಬೀಳಬಹುದು ಇಲ್ಲವೇ ಪಥ ಬದಲಿಸಿಕೊಂಡು ಮುನ್ನಡೆಯಬಹುದು. ಇಂತಹ ಘಟನೆಗಳನ್ನು ರಡಾರ್ ತಂತ್ರಗಳಿಂದಲೂ ಗುರುತಿಸಿ ಕಾಯದ ಗಾತ್ರ ಅಂದಾಜಿಸಬಹುದು.

ಪಟ್ಟಿ ಬೆಳೆಯತೊಡಗಿದೊಡನೆ ಕಾರ್ಯಾಚರಣೆಯ ಯೋಜನೆಗಳಂತೂ ಭರದಿಂದ ಸಾಗಿವೆ. ಡಾನ್ ಎಂಬ ಗಗನನೌಕೆ ಸುಮಾರು 10 ವರ್ಷಗಳ ದೀರ್ಘ ಪ್ರಯಾಣ ಬೆಳೆಸಿ ಸೆರೆಸ್ ಮತ್ತು ವೆಸ್ತಾಗಳಿಗೆ ಭೇಟಿ ಕೊಟ್ಟಿತು. ಸುಮಾರು 19 ಗಿಗಾಜೂಲ್ (ಹಿರೋಷಿಮಾ ಸ್ಫೋಟದ 10 ಲಕ್ಷ ಪಟ್ಟು) ಚೈತನ್ಯದ ಸ್ಫೋಟದಿಂದ ಕ್ಷುದ್ರಗ್ರಹ ಕೇವಲ 10 ಸೆಂಟಿ ಮೀಟರ್‌ಗಳಷ್ಟು ಹಿಂದೆ ಸರಿಯಿತು. ಅದರ ಮೇಲೆ ಪರಮಾಣು ಬಾಂಬ್ ಸಿಡಿಸಿ ಹಿಂದಕ್ಕೆ ತಳ್ಳುವುದು; ಅಯಾಣುಗಳ ಪ್ರವಾಹವನ್ನು ಸೃಷ್ಟಿಸಿ ಹಿಮ್ಮೆಟ್ಟಿಸುವುದು ಅಲ್ಲದೆ ಕಪ್ಪುಬಣ್ಣ ಬಳಿದು ಸೂರ್ಯ ಕಿರಣಗಳಿಂದಲೇ ಹಿಮ್ಮೆಟ್ಟಿಸುವ ಯೋಜನೆಯೂ ಇದೆ. ಕ್ಷುದ್ರಗ್ರಹಕ್ಕೆ ಅತಿ ಸಮೀಪವಾಗಿ ಕೃತಕ ಉಪಗ್ರಹವನ್ನು ಸುತ್ತಿಸುವುದರಿಂದಲೂ ಚೈತನ್ಯ ವರ್ಗಾವಣೆ ಮಾಡಿ ದೂರ ತಳ್ಳುವ ಉಪಾಯವಿದೆ. ದೊಡ್ಡ ಗ್ರಾಹಕವನ್ನು ಕಳಿಸಿ ಅದರಿಂದ ಸೂರ್ಯಕಿರಣಗಳನ್ನು ಕ್ಷುದ್ರಗ್ರಹದ ಮೇಲೆ ಕೇಂದ್ರೀಕರಿಸಿ, ಹೊರಲೇಪಿತ ವಸ್ತುಗಳೆಲ್ಲಾ ಆವಿಯಾಗುವಂತೆ ಮಾಡಿ ತನ್ಮೂಲಕ ಗತಿಯನ್ನು ಬದಲಿಸುವ ಯೋಜನೆಯೂ ಇದೆ.

ಎಷ್ಟು ಮುಂಚಿತವಾಗಿ ನಮಗೆ ಆಘಾತದ ಸುಳಿವು ಸಿಗುತ್ತದೆ ಎಂಬುದೇ ಈ ಎಲ್ಲ ಯೋಜನೆಗಳ ಸಫಲತೆಯನ್ನು ಮಾತ್ರವಲ್ಲದೆ ಯಾವ ಬಗೆಯ ಕಾರ್ಯಾಚರಣೆ ನಡೆಸಬಹುದು ಎಂಬುದನ್ನು ಕೂಡ ನಿರ್ಧರಿಸುತ್ತದೆ. ಆದ್ದರಿಂದ ಕಣ್ಗಾವಲಿನ ಕೆಲಸ ಬಹಳ ಚುರುಕಾಗಿ ಸಾಗುತ್ತಿದೆ. ಎಲ್ಲ ವಿಜ್ಞಾನಿಗಳೂ ಒಟ್ಟಾಗಿ ನಡೆಸುತ್ತಿರುವ ಈ ಯೋಜನೆಗಳು ಮನುಕುಲದ ಉಳಿವಿಗೆ ಅತಿ ಅವಶ್ಯ.

ಚರ್ಚೆ

ಬ್ರಾಹ್ಮಣ, ಬ್ರಾಹ್ಮಣ್ಯ: ಅರ್ಥ ಪ್ರಸ್ತುತವೇ?

‘ಬ್ರಾಹ್ಮಣ್ಯ ಎಂಬ ಪರಿಭಾಷೆ ಜಾತಿ ಸೂಚಕವಾಗಿರುವುದೇ ಗೊಂದಲಕ್ಕೆ ಕಾರಣ’

‘ಯುರೋಪಿನಲ್ಲಿ ಮೈ ಬಣ್ಣದ ಆಧಾರದಲ್ಲಿ ತಾರತಮ್ಯ ಮಾಡುವ ವಿದ್ಯಮಾನವನ್ನು ರೇಸಿಸಂ ಎಂದು ವಿಶ್ಲೇಷಿಸಲಾಗುತ್ತದೆ. ಈ ಪರಿಭಾಷೆ ಬಳಸಿದ ಮಾತ್ರಕ್ಕೆ ಅಲ್ಲಿನ ಬಿಳಿಯರು, ಬಳಸಿದ ವ್ಯಕ್ತಿಯ ಮೇಲೆ ದೂರು ದಾಖಲಿಸುವುದು ಎಷ್ಟು ಹಾಸ್ಯಾಸ್ಪದ!’ ಎಂದು ಕಿರಣ್ ಎಂ. ಗಾಜನೂರು ಹೇಳಿದ್ದಾರೆ (ಚರ್ಚೆ, ಜೂನ್ 25). ಆದರೆ ಬಿಳಿ ಮೈಬಣ್ಣದ ಸಾಮಾನ್ಯ ವ್ಯಕ್ತಿಯೊಬ್ಬನ ಮನಸ್ಸು ನೋಯಿಸುವಂತಹ ಯಾವುದೇ ಸ್ಪಷ್ಟವಾದ ಅಂಶ ರೇಸಿಸಂ ಎಂಬ ಪರಿಭಾಷೆಯಲ್ಲಿ ಇಲ್ಲ. ಆದರೆ ಬ್ರಾಹ್ಮಣ ಮತ್ತು ಬ್ರಾಹ್ಮಣ್ಯದ ನಡುವೆ ತುಂಬಾ ತೆಳುವಾದ ಗೆರೆ ಇದೆ. ಯಾರಾದರೂ ಬ್ರಾಹ್ಮಣ್ಯವನ್ನು ಟೀಕಿಸಿದರೆ ಸಾಮಾನ್ಯ ಬ್ರಾಹ್ಮಣನೊಬ್ಬನಿಗೆ ತನ್ನನ್ನೇ ಟೀಕಿಸುತ್ತಿದ್ದಾರೆ ಎಂದು ಭಾಸವಾಗುವ ಸಾಧ್ಯತೆಯಿದೆ. ‘ಬ್ರಾಹ್ಮಣ್ಯ’ವನ್ನು ವಿಶಾಲ ಅರ್ಥದಲ್ಲಿ ಗ್ರಹಿಸುವ ಬೌದ್ಧಿಕ ಶಿಸ್ತು ಅವನಿಗೆ ಇರಲಾರದು. ಆದ್ದರಿಂದ ಆತ ನೊಂದುಕೊಳ್ಳಬಹುದು. ಕಾನೂನಿನ ಪರಿಭಾಷೆಯಲ್ಲಿ ಇದಕ್ಕೆ innuendo (ವ್ಯಂಗ್ಯೋಕ್ತಿ) ಮತ್ತು insinuation (ಪರೋಕ್ಷ ಪ್ರಚೋದನೆ ಅಥವಾ ಆಕ್ಷೇಪ) ಎನ್ನುತ್ತಾರೆ.

ಬ್ರಾಹ್ಮಣ್ಯ ಎಂಬ ಪರಿಭಾಷೆ ಜಾತಿ ಸೂಚಕವಾಗಿರುವುದೇ ಗೊಂದಲಕ್ಕೆ ಕಾರಣ. ಆದ್ದರಿಂದ ಅಸಮಾನತೆ ಮತ್ತು ತಾರತಮ್ಯಕ್ಕೆ ಬ್ರಾಹ್ಮಣ್ಯದ ಬದಲು ಯಾವುದಾದರೂ ಪರ್ಯಾಯವಾದ ಪದವನ್ನು ಮೇಧಾವಿಗಳೂ ಸಮಾಜಶಾಸ್ತ್ರಜ್ಞರೂ ಹುಡುಕಬೇಕು.

ಸಿ.ರುದ್ರಪ್ಪ, ಬೆಂಗಳೂರು

ಜಾತಿವಿನಾಶವೇ ಪರಿಹಾರ

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಮತ್ತು ನಟ ಚೇತನ್ ಅವರು ಬ್ರಾಹ್ಮಣ ಮತ್ತು ಬ್ರಾಹ್ಮಣ್ಯ ಬೇರೆ ಬೇರೆ ಎಂದಿರುವುದನ್ನು ಒಪ್ಪದ ಗ.ನಾ.ಭಟ್ಟ (ಚರ್ಚೆ, ಜೂನ್ 22), ಎರಡಕ್ಕೂ ಅವಿನಾಭಾವ ಸಂಬಂಧವಿದೆ ಎಂದಿದ್ದಾರೆ. ಈ ಮೂಲಕ ಎಲ್ಲಾ ಜಾತಿ ತಾರತಮ್ಯಗಳು ಮತ್ತು ಅಸ್ಪೃಶ್ಯತೆಗೆ ನಾವೇ ಹೊಣೆಗಾರರು ಎಂದು ಒಪ್ಪಿಕೊಂಡಿದ್ದಾರೆ. ಜಾತಿ ವರ್ಣ ಅಲ್ಲ, ವರ್ಣ ಜಾತಿ ಅಲ್ಲ ಎಂದು ವಾದಿಸಿದ್ದಾರೆ. ಆದರೆ ಆಪ್ತೆ ಅವರ ಸಂಸ್ಕೃತ- ಇಂಗ್ಲಿಷ್ ನಿಘಂಟಿನಲ್ಲಿ ವರ್ಣಕ್ಕೆ ಜಾತಿ ಎಂದು ಅರ್ಥ ಇದೆ. ಆದ್ದರಿಂದ ಭಟ್ಟರ ವಾದ ಕುತರ್ಕವಾಗುತ್ತದೆ.


ಪುರಾಣ ಕಾಲದಲ್ಲಿ ಶೂದ್ರರೂ ಬ್ರಾಹ್ಮಣರಾಗಿದ್ದಾರೆ ಎಂದು ಅವರು ಕೆಲವು ನಿದರ್ಶನಗಳನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಕಾಲದಲ್ಲಿ 20ನೇ ಶತಮಾನದಲ್ಲಿ ಡಾ. ಅಂಬೇಡ್ಕರ್ ಇದ್ದರು. ಅವರದು ಪೂರ್ಣ ಪರಿಶುದ್ಧ ಪುಣ್ಯ ಜೀವನವಾಗಿತ್ತು. ಅವರ ವಿದ್ವತ್ತು ಮತ್ತು ಜ್ಞಾನದ ಎತ್ತರ ಹೋಲಿಕೆಗೆ ನಿಲುಕುವಂತಹದ್ದಲ್ಲ. ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯ ಪ್ರಪಂಚದ ಅತ್ಯಂತ ದೊಡ್ಡ ವಿದ್ವನ್ಮಣಿಗಳನ್ನು ಪಟ್ಟಿ ಮಾಡುವಾಗ ಇಟ್ಟ ಮೊತ್ತಮೊದಲ ಹೆಸರೇ ಡಾ. ಅಂಬೇಡ್ಕರ್ ಅವರದು. ಆದರೆ ಭಾರತದವರಿಗೆ ಅಂಬೇಡ್ಕರ್ ಜಾತಿ ಕಾಣಿಸಿತೇ ಹೊರತು ಅವರ ಜ್ಞಾನ ಗೋಚರಿಸಲಿಲ್ಲ. ಹಾಗಾಗಿ ಅಂಥ ವಿಶ್ವಜ್ಞಾನಿಯನ್ನು ಬ್ರಾಹ್ಮಣ ಅಂತ ಏಕೆ ಗುರುತಿಸಲಿಲ್ಲ?

ಪರಮಜ್ಞಾನಿ ಕನಕದಾಸರನ್ನು ಇನ್ನೂ ಏಕೆ ಉಡುಪಿಯ ಮಠದ ಹೊರಗೇ ನಿಲ್ಲಿಸಿದ್ದಾರೆ? ಈ ಎರಡು ಉದಾಹರಣೆಗಳು ಸಾಕು. ಭಟ್ಟರು ಕೂದಲು ಸೀಳುವ ಕೆಲಸ ಮಾಡಿದ್ದಾರೆ. ಕಾರಣ: ಅವರು ಬಸವಣ್ಣ ಮತ್ತು ಪರಮಹಂಸರ ಹಾಗೆ ಬ್ರಾಹ್ಮಣ ಅಥವಾ ಬ್ರಾಹ್ಮಣ್ಯದಿಂದ ಹೊರಗೆ ಬಂದಿಲ್ಲ. ಆದ್ದರಿಂದಲೇ ಮಹಾಜ್ಞಾನಿ ಅಂಬೇಡ್ಕರ್ ಹೇಳಿದ್ದು: ‘ಬ್ರಾಹ್ಮಣಿಕೆಯೇ ಹಿಂದೂ ಧರ್ಮವನ್ನು ಹಾಳುಮಾಡಿರುವ ವಿಷ’ (Annihilation of Caste, P.101, ಜಲಂಧರ್, 1975). ಮೇಲು ಕೀಳು ಭಾವನೆಗಳು ಎಲ್ಲಾ ಜಾತಿಗಳನ್ನೂ ಕೊಳಕು ಮಾಡಿಬಿಟ್ಟಿವೆ. ಇದಕ್ಕೆ ಜಾತಿವಿನಾಶ ಒಂದೇ ಪರಿಹಾರ.

ಕೆ.ಎಸ್.ಭಗವಾನ್, ಮೈಸೂರು

ವಿಶ್ಲೇಷಣೆ ನಡೆಯಲಿ

ಇಂದು ಬ್ರಾಹ್ಮಣ ಎನ್ನುವುದು ಹುಟ್ಟಿನಿಂದ ಬರುವ ಜಾತಿ ಸೂಚಕವೇ ಹೊರತು ವರ್ಣ ಸೂಚಕವಲ್ಲ. ಬ್ರಾಹ್ಮಣರಲ್ಲಿ ಇರುವ ಬಹಳ ಕಡಿಮೆ ಸಂಖ್ಯೆಯ ಪುರೋಹಿತರು ಮಾತ್ರ ಆ ವರ್ಣಕ್ಕೆ ಸೇರುವವರಾಗಬಹುದು ಅಷ್ಟೆ. ಎಂದೋ ಪ್ರಾಚೀನ ಕಾಲದಲ್ಲಿ ಬಹುಶಃ ಅನ್ವಯಿಸಬಹುದಾಗಿದ್ದ ಬ್ರಾಹ್ಮಣ, ಬ್ರಾಹ್ಮಣ್ಯ ಪದಗಳ ಅರ್ಥವನ್ನೇ ಪ್ರಸ್ತುತ ಕಾಲಮಾನಕ್ಕೆ



ಅನ್ವಯಿಸಿಕೊಂಡು ಚರ್ಚಿಸುವುದು ಉಚಿತವೇ?

ಬ್ರಾಹ್ಮಣ ಎಂದರೆ ಬ್ರಹ್ಮಜ್ಞಾನವನ್ನು ಪಡೆದವನು ಎಂದು ಕೆಲವರು, ಬ್ರಹ್ಮಜಿಜ್ಞಾಸೆಯಲ್ಲಿ ತೊಡಗಿಸಿಕೊಂಡಿರುವವನು ಎಂದು ಕೆಲವರು ಅರ್ಥವಿವರಣೆ ಮಾಡುತ್ತಾರೆ. ಅದು ಹೌದಾದರೆ ಈಗಿನ ನಮ್ಮ ಸಮಾಜದಲ್ಲಿ ಬ್ರಾಹ್ಮಣರು ಎಂದು ಗುರುತಿಸಲ್ಪಡುತ್ತಿರುವವರಲ್ಲಿ ಇಂತಹವರು ಎಷ್ಟು ಜನ ಸಿಗುತ್ತಾರೆ? ಕಂಡ ಕಂಡವರೆಲ್ಲ ವೇದ, ಉಪನಿಷತ್ತುಗಳನ್ನು ಬ್ರಹ್ಮಾಸ್ತ್ರಗಳನ್ನಾಗಿ ಬಳಸುತ್ತಿರುವಾಗ ದಲಿತರ ಪರವಾಗಿ ಚಿಂತಿಸುವವರು ಅಂಬೇಡ್ಕರ್ ಅವರನ್ನು, ಅವರ ವಿಚಾರಧಾರೆಗಳನ್ನು ಯಾಕೆ ಉಲ್ಲೇಖಿಸಬಾರದು? ಅಂಬೇಡ್ಕರ್ ಅವರು ಇಂದು ನಮ್ಮೆಲ್ಲರ ಅಸ್ತ್ರವಾಗಬೇಕಾಗಿದೆ.

ಇಂದು ವೇದೋಪನಿಷತ್ತುಗಳನ್ನು ಯಥೋಚಿತವಾಗಿ ವಿಶ್ಲೇಷಣೆ ಮಾಡುವವರೇ ಇಲ್ಲವಾಗಿದೆ. ಹೀಗಾಗಿ ಅಲ್ಲಮ ಪ್ರಭುಗಳ ‘ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ...’ ಎಂಬ ವಚನವು ಪ್ರಸ್ತುತ ಸಂದರ್ಭಕ್ಕೆ ಬಹಳ ಮುಖ್ಯವಾದ ಚಿಂತನೆಯಾಗಿ ಕಂಡುಬರುತ್ತದೆ. ಬ್ರಾಹ್ಮಣ್ಯದ ಸಂಕೋಲೆಗೆ ಸಿಲುಕಿ ನರಳುತ್ತಿರುವ ಭಾರತೀಯರ (ಬ್ರಾಹ್ಮಣರನ್ನೂ ಸೇರಿಸಿಕೊಂಡು) ಪಾಲಿಗೆ ಸಮಾನತೆ ಹಾಗೂ ಮುಕ್ತ ವಾತಾವರಣ ಗಗನಕುಸುಮವೇ ಆದೀತು ಎಂದು ಭಾವಿಸಲಿಕ್ಕೆ ಗ.ನಾ.ಭಟ್ಟರ ಲೇಖನವೂ ಕಾರಣವಾಗಿ ಕಂಡುಬರುತ್ತದೆ ಎಂದು ಹೇಳಲು ವಿಷಾದವಾಗುತ್ತದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ವಾಚಕರ ವಾಣಿ

ಗ್ರಾಮದ ಐತಿಹಾಸಿಕ ಹಿನ್ನೆಲೆ ಗೌರವಿಸಿ

ಪಿಣರಾಯಿ ವಿಜಯನ್ ನೇತೃತ್ವದ ಕೇರಳ ಸರ್ಕಾರವು ಕಾಸರಗೋಡು ಜಿಲ್ಲೆಯ ಕೆಲವು ಹಳ್ಳಿಗಳ ಹೆಸರುಗಳನ್ನು ಬದಲಾವಣೆ ಮಾಡಿ ಮಲಯಾಳಂ ಹೆಸರುಗಳನ್ನು ಇಡಲು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಇದು ಅತ್ಯಂತ ದುರದೃಷ್ಟಕರ ಬೆಳವಣಿಗೆ. ಯಾವುದೇ ಪ್ರದೇಶಕ್ಕೆ ಮರುನಾಮಕರಣ ಅಥವಾ ಐತಿಹಾಸಿಕ ಹಿನ್ನೆಲೆಗೆ ಧಕ್ಕೆ ಮಾಡುವ ಕಾರ್ಯವನ್ನು ಯಾವುದೇ ಸರ್ಕಾರ ಮಾಡಬಾರದು. ಅದು ಉತ್ತರಪ್ರದೇಶ, ಗುಜರಾತ್, ಕೇರಳ, ಕರ್ನಾಟಕ ಎಲ್ಲಿಯೇ ಆಗಲಿ ಪ್ರತಿಯೊಂದು ಹಳ್ಳಿಯ ಹೆಸರಿಗೂ ಐತಿಹಾಸಿಕ, ಪೌರಾಣಿಕ ಮಹತ್ವ ಮತ್ತು ಕಾರಣಗಳಿರುತ್ತವೆ.

ಅಲ್ಲದೆ ಯಾವುದೇ ಒಂದು ಭಾಷೆಯ ಪ್ರಭಾವವನ್ನು ಒಂದು ನೇರರೇಖೆ ಗಡಿ ತಡೆಯಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಗಡಿ ಭಾಗದ ಜನರು ದ್ವಿಭಾಷಿಕರಾಗಿರುತ್ತಾರೆ ಅಥವಾ ಒಂದು ಭಾಷೆಯ ಜನರು ಮತ್ತೊಂದು ಭಾಷಿಕರ ರಾಜ್ಯದಲ್ಲಿ ಹಂಚಿ ಹೋಗಿರುತ್ತಾರೆ. ಅದನ್ನು ಸರ್ಕಾರಗಳು ಅರ್ಥ ಮಾಡಿಕೊಳ್ಳಬೇಕು. ಇಂದು ಕನ್ನಡ ಮಾತನಾಡುವ ಜನರ ಯಾವುದೋ ಗ್ರಾಮ ಕೇರಳಕ್ಕೆ ಸೇರಿರಬಹುದು, ಮಲಯಾಳಂ ಮಾತನಾಡುವ ಜನರ ಗ್ರಾಮ ಕರ್ನಾಟಕಕ್ಕೆ ಸೇರಿರಬಹುದು. ಆದರೆ ಅಲ್ಲಿನ ಜನರ ಭಾವನೆ, ಗ್ರಾಮದ ಐತಿಹಾಸಿಕ ಹಿನ್ನೆಲೆಯನ್ನು ಗೌರವಿಸುವುದು ಪ್ರಬುದ್ಧ ಸಮಾಜದ ಕರ್ತವ್ಯ.

ತಾತ್ವಿಕವಾಗಿ ಉತ್ತರಪ್ರದೇಶದ ಯೋಗಿ ಆದಿತ್ಯನಾಥ ಅವರ ನಿಲುವುಗಳನ್ನು ವಿರೋಧಿಸುವ ಪಿಣರಾಯಿ ವಿಜಯನ್ ಮತ್ತು ಅವರ ನೇತೃತ್ವದ ಸರ್ಕಾರಕ್ಕೆ ಇಂತಹ ನಿರ್ಧಾರಗಳು ಶೋಭೆ ತರುವುದಿಲ್ಲ. ಅವರು ಶೀಘ್ರ ಈ ನಿರ್ಧಾರದಿಂದ ಹಿಂದೆ ಸರಿಯುವುದು ಉತ್ತಮ.

ನಂದನ್ ಖಂಡೇನಹಳ್ಳಿ, ಚಿತ್ರದುರ್ಗ

ತುರ್ತುಪರಿಸ್ಥಿತಿ: ಹೇಳಲು ಹೊರಟಿದ್ದೇನು?

ತುರ್ತುಪರಿಸ್ಥಿತಿಗೆ ಸಂಬಂಧಿಸಿದ ಲೇಖನದಲ್ಲಿ (ಪ್ರ.ವಾ., ಜೂನ್ 25) ಎ.ಸೂರ್ಯ ಪ್ರಕಾಶ್ ಅವರು ಏನು ಹೇಳಲು ಹೊರಟಿದ್ದಾರೆ? ಇಂದಿರಾ ಗಾಂಧಿ ಅವರ ‘ತುರ್ತುಪರಿಸ್ಥಿತಿ’ ಈಗಿನ ‘ಅಘೋಷಿತ ತುರ್ತುಪರಿಸ್ಥಿತಿ’ಗಿಂತ ಕಠಿಣ ಇತ್ತು ಅಂತಲೋ? ಆದ್ದರಿಂದ ಈಗಿನದು ಕೆಟ್ಟ ಪರಿಸ್ಥಿತಿಯೇನೂ ಅಲ್ಲ ಎಂದು ಬೆಣ್ಣೆ ಹಚ್ಚುವ ಪ್ರಯತ್ನವೋ? ಅಥವಾ ಆಗಲೇ ನ್ಯಾಯಾಂಗ ತನ್ನತನವನ್ನು ಕಳೆದುಕೊಂಡಿತ್ತು, ಅದನ್ನು ಈಗಲೂ ವಿರೋಧಿಸುತ್ತಲೇ ಇರಬೇಕು ಎಂದು ಜನರನ್ನು ಎಚ್ಚರಿಸುವ ಮಹಾಕಾರ್ಯವೋ?

ಸರೋಜಾ ಪ್ರಕಾಶ, ಮಂಗಳೂರು

ತುಟ್ಟಿಭತ್ಯೆ: ಹುಸಿ ಆದೇಶ ನಿಜವಾಗಲಿ

ಕೇಂದ್ರ ಸರ್ಕಾರಿ ನೌಕರರು ಹಾಗೂ ಪಿಂಚಣಿದಾರರಿಗೆ ಆರ್ಥಿಕ ಬಿಕ್ಕಟ್ಟಿನಿಂದಾಗಿ ತಡೆಹಿಡಿಯಲಾಗಿದ್ದ ತುಟ್ಟಿಭತ್ಯೆಯನ್ನು ಜುಲೈ 1ರಿಂದ ಅನ್ವಯವಾಗುವಂತೆ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂಬ ವರದಿ ಪ್ರಕಟವಾದ ಮರುದಿನವೇ, ಅಂಥ ಯಾವುದೇ ಆದೇಶ ಹೊರಡಿಸಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.

ಅದೇನೇ ಇರಲಿ, ಜೀವನಾವಶ್ಯಕ ವಸ್ತುಗಳು ಈ ದಿನಮಾನಗಳಲ್ಲಿ ಗಗನಮುಖಿಯಾಗಿ ಏರುತ್ತಲೇ ಇವೆ. ಜನರು ಜೀವನ ನಿಭಾಯಿಸುವುದು ಕಷ್ಟಕರವಾಗಿದೆ. ಕೈಯಲ್ಲಿ ಹಣವಿದ್ದರೆ ತಾನೇ ಅಗತ್ಯ ವಸ್ತುಗಳನ್ನು ಖರೀದಿಸುವುದು? ಆ ಮೂಲಕ ಸರ್ಕಾರಕ್ಕೂ ತೆರಿಗೆ ಸಂಗ್ರಹವಾಗುವುದು? ಆದ್ದರಿಂದ ಕೇಂದ್ರ ಸರ್ಕಾರವು ತುಟ್ಟಿಭತ್ಯೆಯನ್ನು ಶೀಘ್ರ ಬಿಡುಗಡೆ ಮಾಡಿ ಹಣದ ಚಲಾವಣೆಗೆ ದಾರಿ ಮಾಡಿಕೊಡಬೇಕು.

ಇಂದಿರಾ ಶ್ರೀಧರ್, ಮಳಲಕೆರೆ

‘ಕ್ಲಾಸ್‌ರೂಮ್ ಕ್ರಾಂತಿ’ ಆಗಬೇಕಾದರೆ...

ಸರ್ಕಾರವು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆನ್‌ಲೈನ್ ತರಗತಿಗಳನ್ನು ಮುಂದುವರಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಗ್ರಾಮೀಣ ಭಾಗದ ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಕಲಿಕೆಗಾಗಿ ಟ್ಯಾಬ್ಲೆಟ್ ಪಿ.ಸಿಗಳನ್ನು ಉಚಿತವಾಗಿ ವಿತರಿಸುತ್ತಿದೆ ಮತ್ತು ಅದನ್ನು ‘ಸ್ಮಾರ್ಟ್ ಕ್ಲಾಸ್‌ರೂಮ್ ಕ್ರಾಂತಿ’ ಎಂದು ಕರೆದಿದೆ. ಪೋಷಕರ ಬಳಿ ಮೊಬೈಲ್ ಫೋನ್ ಇಲ್ಲದ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಮೀಕ್ಷೆ ಆಧರಿಸಿ ಮೊಬೈಲ್‌ಗಳನ್ನು ಒದಗಿಸಲು ಪ್ರತೀ ತಾಲ್ಲೂಕು ವ್ಯಾಪ್ತಿಯಲ್ಲಿ ಬಿಇಒ ನೇತೃತ್ವದಲ್ಲಿ ‘ಆ್ಯಂಡ್ರಾಯ್ಡ್ ಮೊಬೈಲ್ ಬ್ಯಾಂಕ್’ಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಆದರೆ ಇದು ಎಷ್ಟರಮಟ್ಟಿಗೆ ನಿಜವಾದ ಫಲಾನುಭವಿಗಳನ್ನು ತಲುಪುತ್ತದೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಮೊಬೈಲ್, ಟ್ಯಾಬ್ಲೆಟ್ ಪಿ.ಸಿಗಳಿಗೆ ಅಗತ್ಯವಾದ ಇಂಟರ್ನೆಟ್ ಸಂಪರ್ಕ ಪಡೆದುಕೊಳ್ಳುವ ಶಕ್ತಿ ಪಾಲಕರಿಗೆ ಇರಬೇಕು ಮತ್ತು ಗ್ರಾಮೀಣ ಭಾಗದ ಮೂಲಭೂತ ಸಮಸ್ಯೆಯಾಗಿರುವ ನೆಟ್‌ವರ್ಕ್ ಸಮಸ್ಯೆಯನ್ನು ಮೊದಲು ಬಗೆಹರಿಸಬೇಕು. ಇಲ್ಲವಾದಲ್ಲಿ ಈ ಎಲ್ಲಾ ಸಿದ್ಧತೆಗಳು ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತವೆ.

ಡಾ. ಅರ್ಚನಾ ಆರ್., ಬೆಂಗಳೂರು


ಎಗ್ಗಿಲ್ಲದೇ ನಡೆಯಿತು ತೇಜೋವಧೆ

ಟಿ.ವಿ ವಾಹಿನಿಯೊಂದರ ‘ಬಿಗ್ ಬಾಸ್’ ಕಾರ್ಯಕ್ರಮ ಕುರಿತಂತೆ ಸಿ.ಎನ್.ರಾಮಚಂದ್ರನ್ ಅವರ ಅಭಿಪ್ರಾಯವನ್ನು (ವಾ.ವಾ., ಜೂನ್ 29) ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಮುಖ್ಯವಾಗಿ ಸುಶಿಕ್ಷಿತ, ಪ್ರಜ್ಞಾವಂತ ಎನಿಸಿಕೊಂಡ ಸ್ಪರ್ಧಿಯೊಬ್ಬರು ಮಾತಾಡಲು ಬರುತ್ತದೆ ಎಂಬ ಒಂದೇ ಅರ್ಹತೆಯಿಂದ, ಹಳ್ಳಿಯಿಂದ ಸ್ವಪ್ರತಿಭೆಯಿಂದ ಭಾಗವಹಿಸುತ್ತಿರುವ ವ್ಯಕ್ತಿಯ ತೇಜೋವಧೆಯನ್ನು ಅವ್ಯಾಹತವಾಗಿ ಮಾಡಿದ್ದು ಅಕ್ಷಮ್ಯ, ಅನುಚಿತ.

ಹೆಣ್ಣಿನ ಮರ್ಯಾದೆಯನ್ನು ಎತ್ತಿ ಹಿಡಿಯುವ ನೇತಾರ ಎಂದೆಲ್ಲ ಬಡಾಯಿ ಕೊಚ್ಚುವ ಈ ವ್ಯಕ್ತಿ ಕಾರ್ಯಕ್ರಮ ಮುಗಿದ ನಂತರ, ತಾನು ಹೇಗೆ ಹಳ್ಳಿ ಯುವಕನ ಬಾಯಿ ಮುಚ್ಚಿಸಿದೆ, ತನ್ನ ‘ಪೌರುಷ ಗಾಥೆ’ ಇಲ್ಲಿಗೇ ನಿಲ್ಲುವುದಿಲ್ಲ ಎಂದೆಲ್ಲ ಸ್ವಲ್ಪವೂ ಅಳುಕಿಲ್ಲದೆ ಹೇಳಿದ್ದು ಜುಗುಪ್ಸೆ ಮೂಡಿಸಿತು. ಕೋಟಿ ಕೋಟಿ ಜನರ ಮುಂದೆ ಹೆಣ್ಣಿನ ಅನುಚಿತ ಅನಾವರಣ ಆಗುತ್ತಿದ್ದರೂ ಸ್ಪರ್ಧಿಗಳಾಗಲೀ ಕಾರ್ಯಕ್ರಮದ ನಿರೂಪಕ ಸುದೀಪ್ ಅವರಾಗಲೀ ಅದನ್ನು ಖಂಡಿಸದೇ ಇದ್ದದ್ದು ವಿಷಾದನೀಯ. ಮನರಂಜನೆ ಮುಖ್ಯವಾದರೂ ಇಂತಹ ಅಸಭ್ಯ, ಅನುಚಿತ ವರ್ತನೆಗಳ ವೈಭವದ ಪ್ರದರ್ಶನ ಖಂಡಿತ ತಕ್ಕುದಲ್ಲ.

ಎಚ್.ವಿ.ನಟರಾಜ, ಬೆಂಗಳೂರು

ಚುರುಮುರಿ



ಮಾಸ್ಕ್ ಮದುವೆ

• ಮಣ್ಣೆರಾಜು

ಅಂಗೈಗೆ ಸ್ಯಾನಿಟೈಸರ್ ತೀರ್ಥ ಹಾಕಿಸಿಕೊಂಡು ಶಂಕ್ರಿ, ಸುಮಿ ಕಲ್ಯಾಣಮಂಟಪ ಪ್ರವೇಶಿಸಿದರು.

ಮದುವೆ ಮನೆಯ ಅಲಂಕೃತ ಹೆಂಗಸರ ಸಡಗರದೊಳಗೆ ಸುಮಿ ಸೇರಿಕೊಂಡಳು.

ಅಲ್ಲಿದ್ದ ಬೆರಳೆಣಿಕೆ ಜನ, ಮಾತನಾಡಿದರೆ ಮುತ್ತು ಉದುರುತ್ತೆ, ಸ್ಮೈಲ್ ಕೊಟ್ಟರೆ ಸೋಂಕು ಹರಡುತ್ತೆ ಎನ್ನುವಂತೆ ಒಬ್ಬರಿಗೊಬ್ಬರು ಕಂಡೂ ಕಾಣದವರಂತೆ ನಾಲ್ಕಾರು ಕುರ್ಚಿಗಳ ಅಂತರ ಕಾಪಾಡಿಕೊಂಡು ಕುಳಿತಿದ್ದರು. ಶಂಕ್ರಿಯೂ ಕುರ್ಚಿ ಹಿಡಿದು, ಮಕ್ಕಳನ್ನು ಹಿಡಿದು ಕುಳಿತ.

ಮಕ್ಕಳ ಮೂತಿಯಿಂದ ಜಾರುತ್ತಿದ್ದ ಮಾಸ್ಕ್ ಸರಿಪಡಿಸುತ್ತಾ, ಆಗಾಗ ಉದುರುವ ಮಕ್ಕಳ ಚೆಡ್ಡಿ, ಪ್ಯಾಂಟ್‌ನ ಬೆಲ್ಟ್ ಬಿಗಿ ಮಾಡುತ್ತಾ, ಅವರ ‘ಒಂದಾ, ಎರಡಾ’ಗಳನ್ನು ನಿಭಾಯಿಸಿಕೊಂಡಿದ್ದ.

ಭಾರದ ರೇಷ್ಮೆ ಸೀರೆ, ಒಡವೆಯ ಹೊರೆಗೆ ಸುಮಿ ಬೆವತಿದ್ದಳು, ಮಾಸ್ಕ್ ತೆಗೆದು ಬೆವರು ಒರೆಸಿಕೊಳ್ಳುವಾಗ ಹಚ್ಚಿದ್ದ ಲಿಪ್‌ಸ್ಟಿಕ್ ಕರಗಿ ಮುಖ-ಮೂತಿಗೆ ಹರಡಿತ್ತು. ಮಾಸ್ಕ್ ತೆಗೆದರೆ ಮಾನ ಹೋಗುತ್ತೆ ಅಂತ ಶಂಕ್ರಿ ಸನ್ನೆ ಮಾಡಿ ಮಾಸ್ಕ್ ಹಾಕಿಸಿ ಮಾನ ಕಾಪಾಡಿದ್ದ.

ಶಂಕ್ರಿಯೂ ಮಾಸ್ಕ್‌ನಲ್ಲಿ ಮಾನ ಮುಚ್ಚಿಕೊಂಡಿದ್ದ. ‘ಮದುವೆ ಮನೆಯಲ್ಲಿ ಮಾಸ್ಕ್ ಬಿಚ್ಚಕೂಡದು, ಜನ ಆಡಿಕೊಂಡು ನಗ್ತಾರೆ’ ಅಂತ ಸುಮಿ ಮನೆಯಲ್ಲೇ ಎಚ್ಚರಿಕೆ ನೀಡಿದ್ದಳು. ಪ್ರಾಯ ಕಾಪಾಡಿಕೊಳ್ಳಲು ಶಂಕ್ರಿ ತಲೆ ಕೂದಲಿಗೆ ಹೇರ್ ಡೈ ಹಚ್ಚಿಕೊಳ್ಳುವಾಗ ಕಿವಿ ಪಕ್ಕದಿಂದ ಕಪಾಳಕ್ಕೆ ಹರಿದುಬಂದ ಡೈ ಮಾರ್ಕ್ ಎದ್ದು ಕಾಣುತ್ತಿತ್ತು. ಸಾಲದ್ದಕ್ಕೆ, ಮೀಸೆಗೆ ಹಚ್ಚುವಾಗ ತುಟಿ, ಮೂಗಿನ ತುದಿ, ಕೆನ್ನೆಗೂ ತಾಕಿದ್ದ ಡೈನ ಕಲೆ ಉಳಿದಿತ್ತು. ಇಂಥಾ ವಿರೂಪ ಮರೆಮಾಚಲು ಶಂಕ್ರಿ ಮಾಸ್ಕ್ ಬಿಚ್ಚಿರಲಿಲ್ಲ.

ಕೊನೆ ಹಂತವಾಗಿ ಶಂಕ್ರಿ, ಸುಮಿ ವಧು-ವರರಿಗೆ ಮುಯ್ಯಿ ಕೊಟ್ಟರು. ‘ಮುಖ ಕಾಣಲಿ ಮಾಸ್ಕ್ ತೆಗೆಯಿರಿ...’ ಎಂದು ಫೋಟೊಗ್ರಾಫರ್ ಹೇಳಿದರೂ ಕೇಳದೆ ಮಾಸ್ಕ್ ಮರೆಯಲ್ಲೇ ಫೋಟೊಗೆ ಸ್ಮೈಲ್ ಕೊಟ್ಟರು.

ಮಾಸ್ಕ್ ತೆಗೆದು ಊಟ ಮಾಡಿ, ಮದುವೆ ಸಡಗರ ಮುಗಿಸಿ ಮನೆದಾರಿ ಹಿಡಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಕೋಲ್ಕತ್ತದ ದಕ್ಷಿಣ 24 ಪರಗಣ ಜಿಲ್ಲೆಯ ಹಳ್ಳಿಯೊಂದರ ಜನರಿಗೆ ಲಸಿಕೆ ಹಾಕಿಸಲು ಬಂದ ಆರೋಗ್ಯ ಕಾರ್ಯಕರ್ತರ ತಂಡ ಎಎಫ್‌ಪಿ ಚಿತ್ರ

ಲೋಕಲ್ ಸರ್ಕಲ್ಸ್ ಸಮೀಕ್ಷೆ: ಕೋವಿಡ್ ಲಸಿಕೆ ಬೇಡ ಎಂದ 33 ಕೋಟಿ ಜನ

ಲಸಿಕೆ ಅಜ್ಞಾನ ಹಿಂಜರಿಕೆಗೆ ಕಾರಣ

ದೇಶದ 33 ಕೋಟಿಗೂ ಹೆಚ್ಚು ವಯಸ್ಕರು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಹಿಂಜರಿಕೆ ಹೊಂದಿದ್ದಾರೆ. ಇವರಲ್ಲಿ ಕೆಲವು ಮಂದಿ ಲಸಿಕೆ ಪಡೆದುಕೊಳ್ಳದೆ ಇರಲು ನಿರ್ಧರಿಸಿದ್ದಾರೆ. ಕೆಲವರು ಅಡ್ಡಪರಿಣಾಮಗಳ ಭಯದಿಂದ ಲಸಿಕೆಯಿಂದ ದೂರ ಉಳಿದಿದ್ದಾರೆ. ಲಸಿಕೆಯ ಪರಿಣಾಮ ಮತ್ತು ಕ್ಲಿನಿಕಲ್ ಟ್ರಯಲ್‌ನ ಹೆಚ್ಚುವರಿ ಮಾಹಿತಿಗಳು ಬಹಿರಂಗವಾಗುವ ವರೆಗೂ ಲಸಿಕೆ ಪಡೆದುಕೊಳ್ಳುವುದಿಲ್ಲ ಎಂದು ನಿರ್ಧರಿಸಿದ್ದಾರೆ ಎಂದು ಲೋಕಲ್ ಸರ್ಕಲ್ಸ್ ನಡೆಸಿದ ಸಮೀಕ್ಷೆಯ ವರದಿ ಹೇಳಿದೆ. ಸಮೀಕ್ಷೆಯ ವರದಿಯು ಇದೇ ಭಾನುವಾರ ಬಿಡುಗಡೆಯಾಗಿದ್ದು, ಲಸಿಕೆ ಬಗ್ಗೆ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ ಎಂದು ಶಿಫಾರಸು ಮಾಡಲಾಗಿದೆ.

ದೇಶದಲ್ಲಿ 18 ವರ್ಷ ಮೇಲ್ಪಟ್ಟ ವಯಸ್ಕರ ಜನಸಂಖ್ಯೆ 94 ಕೋಟಿಯಷ್ಟು ಇದೆ. ಸಮೀಕ್ಷೆ ನಡೆಸಿದ ಅವಧಿಯಲ್ಲಿ 24 ಕೋಟಿ ಜನರಿಗಷ್ಟೇ ಲಸಿಕೆಯ ಮೊದಲ ಡೋಸ್ ನೀಡಲಾಗಿತ್ತು. ಇನ್ನೂ 70 ಕೋಟಿ ಜನರಿಗೆ ಲಸಿಕೆ ನೀಡಬೇಕಿತ್ತು. ಆದರೆ ಲಸಿಕೆ ಹಾಕಿಸಿಕೊಳ್ಳದವರಲ್ಲಿ 33 ಕೋಟಿಯಷ್ಟು ಜನರು ಲಸಿಕೆ ಪಡೆದುಕೊಳ್ಳಲು ತೀವ್ರ ಹಿಂಜರಿಕೆ ಹೊಂದಿದ್ದಾರೆ ಎಂದು ಸಮೀಕ್ಷೆಯ ವರದಿ ಹೇಳಿದೆ.

33 ಕೋಟಿ ಜನರ ಹಿಂಜರಿಕೆ

33 ಕೋಟಿಯಷ್ಟು ಜನರು ಲಸಿಕೆ ಹಾಕಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ ಎಂದು ಸಮೀಕ್ಷಾ ವರದಿಯಲ್ಲಿ ವಿವರಿಸಲಾಗಿದೆ. ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಜನರ ಪ್ರಮಾಣವನ್ನು, ಇನ್ನೂ ಲಸಿಕೆ ಹಾಕಿಸಿಕೊಳ್ಳಬೇಕಿರುವ 70 ಕೋಟಿ ಜನರಿಗೆ ಹೋಲಿಸಿ ಈ ಲೆಕ್ಕಾಚಾರ ಮಾಡಲಾಗಿದೆ.

8,949 ಸಮೀಕ್ಷೆಯಲ್ಲಿ ಭಾಗವಹಿಸಿದ್ದವರು | **279** ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಲಾಗಿದೆ

- ಇನ್ನೂ ಲಸಿಕೆ ಹಾಕಿಸಿಕೊಳ್ಳದವರನ್ನಷ್ಟೇ ಸಮೀಕ್ಷೆಗೆ ಒಳಪಡಿಸಲಾಗಿದೆ

70 ಕೋಟಿ/ ಲಸಿಕೆಯ ಒಂದು ಡೋಸ್ ಕೂಡ ಹಾಕಿಸಿಕೊಳ್ಳದ 18 ವರ್ಷ ಮೇಲ್ಪಟ್ಟವರ ಸಂಖ್ಯೆ. ವಯಸ್ಕರಿಗೆ ಸಾರ್ವತ್ರಿಕ ಲಸಿಕೆ ಕಾರ್ಯಕ್ರಮದ ಅಡಿ ಈಗ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ ಉಚಿತ ಲಸಿಕೆ ಹಾಕಲಾಗುತ್ತಿದೆ. ಜೂನ್ 21ರಿಂದ ಜಾರಿಗೆ ಬಂದ ಈ ಕಾರ್ಯಕ್ರಮದ ಅಡಿ ಆರಂಭದಲ್ಲಿ ಪ್ರತಿದಿನ ಹೆಚ್ಚಿನ ಸಂಖ್ಯೆಯ ಲಸಿಕೆಯ ಡೋಸ್‌ಗಳನ್ನು ಹಾಕಲಾಗಿತ್ತು. ಆದರೆ ಈಗ ಪ್ರತಿದಿನ ಹಾಕುತ್ತಿರುವ ಲಸಿಕೆಯ ಡೋಸ್‌ಗಳ ಸಂಖ್ಯೆ ಇಳಿಕೆಯಾಗುತ್ತಿದೆ.

20.3 ಕೋಟಿ/ ತಮ್ಮ ಸರದಿ ಬಂದ ತಕ್ಷಣ ಲಸಿಕೆ ಹಾಕಿಸಿಕೊಳ್ಳುತ್ತೇವೆ ಎಂದು ಹೇಳಿರುವವರ ಸಂಖ್ಯೆ. ಲಸಿಕೆ ಕಾರ್ಯಕ್ರಮಕ್ಕೆ ವೇಗ ನೀಡಿದರೆ, ಸಿದ್ಧವಿರುವ ಈ ಜನರಿಗೆ ಲಸಿಕೆ ಡೋಸ್‌ಗಳನ್ನು ನೀಡಬಹುದು

16.8 ಕೋಟಿ/ ಕೋವಿಡ್ ವಿರುದ್ಧ ಲಸಿಕೆಯ ಪರಿಣಾಮಗಳು, ಕೊರೊನಾ ವೈರಾಣುವಿನ ರೂಪಾಂತರ ತಳಿಯ ವಿರುದ್ಧ ಲಸಿಕೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಎಂಬುದು ಪತ್ತೆಯಾದರೆ, ಲಸಿಕೆಯ ಕ್ಲಿನಿಕಲ್ ಟ್ರಯಲ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ಬಹಿರಂಗವಾದರೆ ಲಸಿಕೆ ಬೇಕು ಎಂದು ಹೇಳಿರುವವರ ಸಂಖ್ಯೆ. ಬೇರೆ ವಿದೇಶಿ ಲಸಿಕೆಗೂ ಕಾಯುತ್ತಿದ್ದೇವೆ ಎಂದು ಇವರಲ್ಲಿ ಕೆಲವರು ಹೇಳಿದ್ದಾರೆ. ಈ ಜನರು ಲಸಿಕೆ ಪಡೆದುಕೊಳ್ಳುವಂತೆ ಮಾಡಲು, ಸರ್ಕಾರವು ಜಾಗೃತಿ ಕಾರ್ಯಕ್ರಮ ನಡೆಸಬೇಕು. ರೂಪಾಂತರಿತ ತಳಿಗಳ ಮೇಲೆ ಲಸಿಕೆ ಎಷ್ಟು ಪರಿಣಾಮಕಾರಿ ಎಂಬುದರ ಬಗ್ಗೆ ಈಗ ನಡೆಯುತ್ತಿರುವ ಅಧ್ಯಯನಗಳ ಬಗ್ಗೆ ಮಾಹಿತಿ ನೀಡಬೇಕು. ಆ ಮೂಲಕ ಈ ಜನರು ಲಸಿಕೆ ಹಾಕಿಸಿಕೊಳ್ಳಲು ಮನವೊಲಿಸಬಹುದು


8.4 ಕೋಟಿ/ ಲಸಿಕೆಯ ಅಡ್ಡಪರಿಣಾಮಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲ. ಜತೆಗೆ ಲಸಿಕೆ ಹಾಕಿಸಿಕೊಂಡರೆ ಅಡ್ಡಪರಿಣಾಮಗಳು ಉಂಟಾಗಬಹುದು ಎಂಬ ಭಯವಿದೆ. ಹೀಗಾಗಿ ಲಸಿಕೆ ಹಾಕಿಸಿಕೊಳ್ಳುವುದಿಲ್ಲ ಎಂದು ಹೇಳಿದವರ ಸಂಖ್ಯೆ. ಲಸಿಕೆಯ ಅಡ್ಡಪರಿಣಾಮಗಳ ಬಗ್ಗೆ ಇವರಲ್ಲಿ ಜಾಗೃತಿ ಮೂಡಿಸುವ ಮೂಲಕ, ಲಸಿಕೆ ಪಡೆದುಕೊಳ್ಳಲು ಈ ಜನರ ಮನವೊಲಿಸಬಹುದು

16.1 ಕೋಟಿ/ ತಮ್ಮ ಈಗಿನ ಅನಾರೋಗ್ಯ ಮತ್ತು ವಿವಿಧ ಕಾಯಿಲೆಗಳ ಕಾರಣ ಲಸಿಕೆ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದೇವೆ ಎಂದವರ ಸಂಖ್ಯೆ. ಯಾವ ಅನಾರೋಗ್ಯ ಮತ್ತು ಕಾಯಿಲೆ ಇದ್ದವರು ಲಸಿಕೆ ತೆಗೆದುಕೊಳ್ಳಬಾರದು ಎಂಬುದರ ಬಗ್ಗೆ ಈ ಜನರಲ್ಲಿ ಅರಿವು ಮೂಡಿಸುವ ಅವಶ್ಯಕತೆ ಇದೆ. ಯಾವ ಕಾಯಿಲೆ ಇದ್ದವರು ಲಸಿಕೆ ತೆಗೆದುಕೊಂಡರೆ ತೊಂದರೆ ಆಗುವುದಿಲ್ಲ ಎಂಬುದರ ಬಗ್ಗೆ ಸರ್ಕಾರ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ

8.4ಕೋಟಿ/ ಯಾವುದೇ ಕಾರಣಕ್ಕೂ ಲಸಿಕೆ ಬೇಡ ಎಂದವರ ಸಂಖ್ಯೆ. ಲಸಿಕೆ ಏಕೆ ಹಾಕಿಸಿಕೊಳ್ಳಬೇಕು ಎಂಬುದರ ಬಗ್ಗೆ ಈ ಜನರಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ

ಲಸಿಕೆ ಈಗ ಬೇಡ ಎಂದವರು ಶೇ 71

ಸಮೀಕ್ಷೆಯಲ್ಲಿ ಭಾಗವಹಿಸಿದ್ದವರಲ್ಲಿ ಶೇ 71ರಷ್ಟು ಜನರು ತಕ್ಷಣಕ್ಕೆ ಲಸಿಕೆ ಪಡೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ಅವರಲ್ಲಿ ಕೆಲವರು ಲಸಿಕೆ ಹಾಕಿಸಿಕೊಳ್ಳುವುದೇ ಇಲ್ಲ ಎಂದು ಹೇಳಿದ್ದರೆ, ಕೆಲವರು ಲಸಿಕೆ ಬಗ್ಗೆ ಹೆಚ್ಚಿನ ಮಾಹಿತಿ ದೊರೆತರೆ ಲಸಿಕೆ ಹಾಕಿಸಿಕೊಳ್ಳುತ್ತೇವೆ ಎಂದಿದ್ದಾರೆ. ಲಸಿಕೆ ಪಡೆದುಕೊಳ್ಳುವ ಬಗ್ಗೆ ಜನರಲ್ಲಿನ ವಿವಿಧ ನಿರ್ಧಾರಗಳ ಪ್ರಮಾಣ ಇಲ್ಲಿದೆ.



- ನಮ್ಮ ಸರದಿ ಬಂದ ತಕ್ಷಣ ಲಸಿಕೆ ಹಾಕಿಸಿಕೊಳ್ಳುತ್ತೇವೆ ಎಂದವರ ಪ್ರಮಾಣ
- ಈಗಿನ ಲಸಿಕೆಗಳು ರೂಪಾಂತರಿತ ವೈರಾಣುಗಳ ವಿರುದ್ಧ ರಕ್ಷಣೆ ನೀಡುತ್ತವೆ ಎಂಬ ಭರವಸೆ ಇಲ್ಲ. ಹೀಗಾಗಿ ಈಗ ಲಸಿಕೆ ಹಾಕಿಸಿಕೊಳ್ಳುವುದಿಲ್ಲ ಎಂದವರ ಪ್ರಮಾಣ
- ಲಸಿಕೆಯ ಅಡ್ಡಪರಿಣಾಮಗಳ ಬಗ್ಗೆ ಸ್ಪಷ್ಟಮಾಹಿತಿ ಇಲ್ಲದ ಕಾರಣ, ಲಸಿಕೆ ಬೇಡ ಎಂದವರ ಪ್ರಮಾಣ
- ತಮಗಿರುವ ಬೇರೆ-ಬೇರೆ ಕಾಯಿಲೆಗಳ ಕಾರಣದಿಂದ ಲಸಿಕೆ ಹಾಕಿಸಿಕೊಳ್ಳಲಾಗದು ಎಂದವರ ಪ್ರಮಾಣ
- ಲಸಿಕೆ ಬೇಡವೇ ಬೇಡ ಎಂದವರ ಪ್ರಮಾಣ


ಹೈದರಾಬಾದ್‌ನಲ್ಲಿ ಆಟೋ ಚಾಲಕರಿಗೆ ನಡೆಸಲಾಗಿದ್ದ ಲಸಿಕೆ ಕಾರ್ಯಕ್ರಮದಲ್ಲಿ ಸಾಲುಗಟ್ಟಿ ನಿಂತಿದ್ದ ಜನರು ಎಎಫ್‌ಪಿ ಚಿತ್ರ


ಜಾಗೃತಿಗೆ ಒತ್ತು ನೀಡಿ

33 ಕೋಟಿಯಷ್ಟು ಜನರು ಲಸಿಕೆ ಬೇಡ ಎನ್ನಲು ವಿವಿಧ ಕಾರಣಗಳನ್ನು ಮುಂದೊಡ್ಡಿದ್ದಾರೆ. ಕೋವಿಡ್‌ನ ಮೂರನೇ ಅಲೆ ಆಗಸ್ಟ್ ವೇಳೆಗೆ ಆರಂಭವಾಗಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಅಲ್ಲದೆ ಹೆಚ್ಚು ಅಪಾಯಕಾರಿಯಾದ ಡೆಲ್ಟಾ ಪ್ಲಸ್ ರೂಪಾಂತರಿತ ತಳಿಯು ಹಲವು ರಾಜ್ಯಗಳಲ್ಲಿ ಹರಡಿದೆ. ಇಂತಹ ಸಂದರ್ಭದಲ್ಲಿ ಲಸಿಕೆ ಹಾಕಿಸಿಕೊಳ್ಳು-ವುದಿಲ್ಲ ಎಂದು ಶೇ 71ರಷ್ಟು ಜನರು ಹೇಳಿರುವುದು ಕಳವಳಕಾರಿ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಲಸಿಕೆಯ ಬಗ್ಗೆ ನಿಖರ ಮಾಹಿತಿ ಇಲ್ಲದೇ ಇರುವುದು ಮತ್ತು ತಪ್ಪು ಮಾಹಿತಿ ಇರುವುದೇ ಇದಕ್ಕೆ ಕಾರಣ. ಲಸಿಕೆ ತಯಾರಿಕೆ, ಕ್ಲಿನಿಕಲ್ ಪರೀಕ್ಷೆಗಳು, ಲಸಿಕೆಯ ಪರಿಣಾಮದ ಪ್ರಮಾಣ ಮತ್ತು ಲಸಿಕೆ ಬಳಕೆಗೆ ನೀಡುವ ಅನುಮತಿಯ ಪ್ರಕ್ರಿಯೆಗಳು ಮತ್ತಷ್ಟು ಪಾರದರ್ಶಕವಾಗಿ ಇರಬೇಕು. ಈ ಅಂಶಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯನ್ನು ಬಹಿರಂಗಪಡಿಸಿ, ಜನರಲ್ಲಿ ಲಸಿಕೆಗಳ ಬಗ್ಗೆ ವಿಶ್ವಾಸ ವೃದ್ಧಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಯಾವುದೇ ಕಾರಣಕ್ಕೂ ಲಸಿಕೆ ಹಾಕಿಸಿಕೊಳ್ಳದೇ ಇರಲು ನಿರ್ಧರಿಸಿರುವ ಜನರಲ್ಲಿ ಲಸಿಕೆ ಬಗ್ಗೆ ಜಾಗೃತಿ ಮೂಡಿಸುವುದೊಂದೇ ಉಳಿದಿರುವ ಏಕೈಕ ಮಾರ್ಗ ಎಂದು ವರದಿಯಲ್ಲಿ ಸೂಚಿಸಲಾಗಿದೆ.

ಮೂರನೇ ಅಲೆ ಬರುವ ಮುನ್ನವೇ ಈ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಬೇಕಿದೆ. ಸಮೀಕ್ಷೆಯ ಪ್ರಮುಖ ಅಂಶಗಳನ್ನು ಸಂಬಂಧಿತ ಸಚಿವಾಲಯದ ಜತೆ ಹಂಚಿಕೊಳ್ಳಲಾಗುತ್ತದೆ ಎಂದು ಲೋಕಲ್ ಸರ್ಕಲ್ಸ್ ಹೇಳಿದೆ.

ವರ್ಣರಂಜಿತ ಬದುಕು ಜೈಲಿನಲ್ಲಿ ಅಂತ್ಯ


ಜಾನ್ ಮೆಕಾಫೆ

ಅಧ್ಯಕ್ಷನಾಗುವ ಕನಸು

2016ರ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಸೈಬರ್ ಪಾರ್ಟಿಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳುವ ಮೂಲಕ ಮೆಕಾಫೆ ಸುದ್ದಿಯಾಗಿದ್ದರು. ಅದಾಗಿ ಸ್ವಲ್ಪ ದಿನಗಳಲ್ಲೇ ಪಕ್ಷಾಂತರ ಮಾಡಿ ಲಿಬರ್ಟೇರಿಯನ್ ಪಕ್ಷವನ್ನು ಸೇರಿ ಆ ಪಕ್ಷದಿಂದ ಸ್ಪರ್ಧಿಸಿದ್ದರು. 2020ರಲ್ಲಿ ಪುನಃ ಅದೇ ಪಕ್ಷದಿಂದ ಸ್ಪರ್ಧಿಸಿದ್ದರು.

2019ರ ಜುಲೈ ತಿಂಗಳಲ್ಲಿ ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ಮೆಕಾಫೆಯ ಬಂಧನವಾಗುತ್ತದೆ. ಆತ ಹಾಗೂ ಇತರ ಐದು ಮಂದಿ ವಿಹಾರ ನೌಕೆಯೊಂದರಲ್ಲಿ ಸೇನಾ ಸಮವಸ್ತ್ರದ ಮಾದರಿಯ ವಸ್ತ್ರವನ್ನು ಧರಿಸಿಕೊಂಡು ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ಸಾಗಿಸುತ್ತಿದ್ದರು ಎಂಬ ಆರೋಪ ಇತ್ತು. ಪೊಲೀಸರು ಕೆಲವು ದಿನಗಳ ಕಾಲ ಅವರನ್ನು ಬಂಧನದಲ್ಲಿಟ್ಟು, ಆನಂತರ ಬಿಡುಗಡೆ ಮಾಡಿದ್ದರು.

ಹೀಗೆ ವಿವಿಧ ದೇಶಗಳಲ್ಲಿ ಅವರ ಬಂಧನ–ಬಿಡುಗಡೆಯ ಘಟನೆಗಳು ನಡೆಯುತ್ತಲೇ ಇದ್ದವು. 2020ರ ಅಕ್ಟೋಬರ್‌ನಲ್ಲಿ ಬಾರ್ಸಿಲೋನಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪುನಃ ಬಂಧಿಸಲಾಗುತ್ತದೆ. ಅಮೆರಿಕ ಸರ್ಕಾರದ ಸೂಚನೆಯ ಮೇರೆಗೆ ಸ್ಪೇನ್‌ನ ಪೊಲೀಸರು ಅವರನ್ನು ಬಂಧಿಸಿದ್ದರು. 2014ರ ನಂತರದ ನಾಲ್ಕು ವರ್ಷಗಳಲ್ಲಿ ಕ್ರಿಪ್ಟೊ ಕರೆನ್ಸಿಯ ಮೂಲಕ ಗಳಿಸಿದ ಆದಾಯ, ಸಲಹೆಗಾರನಾಗಿ ಮಾಡಿದ ಕೆಲಸದಿಂದ ಬಂದ ಆದಾಯ ಹಾಗೂ ತಮ್ಮ ಜೀವನದ ಬಗ್ಗೆ ಕಿರುಚಿತ್ರ ರಚನೆಗೆ ಸಂಭಾವನೆಯ ರೂಪದಲ್ಲಿ ಪಡೆದ ಹಣಕ್ಕೆ ಆದಾಯ ತೆರಿಗೆ ಪಾವತಿಸಿಲ್ಲ ಎಂಬ ಕಾರಣಕ್ಕೆ ಅವರ ಬಂಧನಕ್ಕೆ ಅಮೆರಿಕ ಸೂಚನೆ ನೀಡಿತ್ತು.

ಬ್ರಿಟನ್‌ನ ಮಧ್ಯಮ ವರ್ಗದ ಕುಟುಂಬವೊಂದು ಅಮೆರಿಕಕ್ಕೆ ವಲಸೆ ಬರುತ್ತದೆ. ಆ ಕುಟುಂಬದಲ್ಲೊಬ್ಬ ಸಣ್ಣ ಹುಡುಗನಿದ್ದ. ಮದ್ಯವ್ಯಸನಿಯಾಗಿದ್ದ ತಂದೆ, ಅಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆಗ ಯುವಕನಿಗೆ 15 ವರ್ಷ ವಯಸ್ಸು. ಆತ ಅಲ್ಲಿಯೇ ಶಿಕ್ಷಣ ಪಡೆದು, ಸ್ವಂತ ಸಾಫ್ಟ್‌ವೇರ್ ಉದ್ಯಮ ಆರಂಭಿಸಿದ, ನೋಡನೋಡುತ್ತಿದ್ದಂತೆ ಜಗತ್ತಿನ ಗಮನ ಸೆಳೆದ.

ಎರಡು ದಶಕಗಳ ಅವಧಿಯಲ್ಲಿ ಕೋಟ್ಯಂತರ ಡಾಲರ್ ಸಂಪಾದಿಸಿದ ಆತನ ಬದುಕು ಭವ್ಯವಾಗಿ ಸಾಗುತ್ತಿದ್ದಾಗಲೇ ಹಲವು ಆರೋಪಗಳು ಬಂದು ಬಂಧನ ಭೀತಿಯಿಂದ ದೇಶ ತ್ಯಜಿಸಬೇಕಾಗುತ್ತದೆ. ಹಲವು ವರ್ಷಗಳ ಕಾಲ ಬ್ರೆಜಿಲ್‌ನಲ್ಲಿ ಜೀವನ ಸಾಗಿಸುತ್ತಾನೆ. ಆತನ ಕಂಪನಿ ಮಾರಾಟವಾಗುತ್ತದೆ. ನಂತರ ಆರಂಭಿಸಿದ ಯಾವ ವ್ಯಾಪಾರವೂ ಆತನ ಕೈಹಿಡಿಯುವುದಿಲ್ಲ. ದೇಶಾಂತರ ಅಲೆಯುತ್ತಾನೆ.

ಈ ಮಧ್ಯೆಯೇ ನೆರೆಮನೆಯ ವ್ಯಕ್ತಿಯನ್ನು ಕೊಲೆ ಮಾಡಿದ ಆರೋಪದಲ್ಲಿ ಬಂಧನಕ್ಕೊಳಗಾಗುತ್ತಾನೆ. ಜೀವನದ ಒಂದು ಹಂತದಲ್ಲಿ ಮಾಜಿ ವೇಶ್ಯೆಯೊಬ್ಬಳನ್ನು ವಿವಾಹವಾಗುತ್ತಾನೆ... ಕೊನೆಗೆ 75 ವರ್ಷ ವಯಸ್ಸಿನಲ್ಲಿ ಯಾವುದೋ ದೇಶದ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ...

ಹಾಲಿವುಡ್ ಸಿನಿಮಾದ ಕಥೆಯನ್ನು ಹೋಲುವ ಇಂಥ ಜೀವನವನ್ನು ವಾಸ್ತವದಲ್ಲಿ ನಡೆಸಿದ ವ್ಯಕ್ತಿ ಕಂಪ್ಯೂಟರ್‌ಗಳಿಗೆ 'ಆ್ಯಂಟಿ ವೈರಸ್' ತಯಾರಿಸಿದ ಮೆಕಾಫೆ ಸಂಸ್ಥೆಯ ಮುಖ್ಯಸ್ಥ ಜಾನ್ ಮೆಕಾಫೆ. ಕಳೆದ ವಾರ (ಜೂನ್ 23) ಸ್ಪೇನ್ ದೇಶದ ಜೈಲೊಂದರಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

1945ರಲ್ಲಿ ಜನಿಸಿದ ಮೆಕಾಫೆ ಅಮೆರಿಕದಲ್ಲಿ ಗಣಿತಶಾಸ್ತ್ರದಲ್ಲಿ ಪದವಿ ಪಡೆದವರು. ಉನ್ನತ ಶಿಕ್ಷಣ ಪಡೆಯಲು ಹೋದರೂ, ಅಸಭ್ಯ ವರ್ತನೆಯ ಕಾರಣಕ್ಕೆ ಅವರನ್ನು ಕಾಲೇಜಿನಿಂದ ಹೊರಗಟ್ಟಲಾಗಿತ್ತು. ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ'ದಲ್ಲಿ ಪ್ರೋಗ್ರಾಮರ್ ಉದ್ಯೋಗವೂ ಸೇರಿದಂತೆ 1970ರಿಂದ 1982ರವರೆಗೂ ಅನೇಕ ಕಂಪನಿಗಳಲ್ಲಿ ಮೆಕಾಫೆ ಕೆಲಸ ಮಾಡಿದ್ದರು.

1987ರಲ್ಲಿ 'ಮೆಕಾಫೆ ಅಸೋಸಿಯೇಟ್ಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಕಂಪ್ಯೂಟರ್‌ಗಳಿಗೆ 'ಆ್ಯಂಟಿ ವೈರಸ್' ಸಾಫ್ಟ್‌ವೇರ್ ತಯಾರಿಕೆಯನ್ನು ಮೆಕಾಫೆ ಆರಂಭಿಸುತ್ತಾರೆ. ಕೆಲವೇ ವರ್ಷಗಳಲ್ಲಿ ಕಂಪನಿ ಕೋಟ್ಯಂತರ ಡಾಲರ್ ಸಂಪಾದಿಸುತ್ತದೆ. 1994ರಲ್ಲಿ ತಮ್ಮದೇ ಸಂಸ್ಥೆಗೆ ರಾಜೀನಾಮೆ ಸಲ್ಲಿಸುತ್ತಾರೆ. ಆ ನಂತರ ಮೆಕಾಫೆ ಸಂಸ್ಥೆಯನ್ನು 770 ಕೋಟಿ ಡಾಲರ್‌ಗೆ (ಸುಮಾರು ₹57,000 ಕೋಟಿ) ಮಾರಾಟ ಮಾಡಲಾಗುತ್ತದೆ.

ತಾವೇ ಆರಂಭಿಸಿದ್ದ ಕಂಪನಿಯನ್ನು ಮಾರಿದ ಬಳಿಕ ಮೆಕಾಫೆ ವಿವಿಧ ವ್ಯವಹಾರಗಳನ್ನು ಆರಂಭಿಸಿದರು. 'ಟ್ರೈಬಲ್ ವಾಯ್ಸ್' ಎಂಬ ಸಂಸ್ಥೆ ಶುರು ಮಾಡಿದರು. ಫೈರ್‌ವಾಲ್ ತಯಾರಿಕಾ ಸಂಸ್ಥೆ ಝೋನ್ ಅಲಾರ್ಮ್‌ನಲ್ಲಿ ಹೂಡಿಕೆ ಮಾಡಿದರು. ಇನ್ನೂ ಹಲವು ಸಂಸ್ಥೆಗಳನ್ನು ಆರಂಭಿಸಿದರೂ ಯಾವುದೂ ದಡ ಹತ್ತಲಿಲ್ಲ.

2009ರ ವೇಳೆಗೆ ಅವರ ಒಟ್ಟು ಆಸ್ತಿ ಮೌಲ್ಯ 40 ಲಕ್ಷ ಡಾಲರ್‌ಗೆ ಕುಸಿಯಿತು. ಎಲ್ಲಾ ಸೊತ್ತುಗಳು, ಸಂಗ್ರಹಿಸಿದ್ದ ದುಬಾರಿ ಪ್ರಾಚೀನ ವಸ್ತುಗಳು ಹಾಗೂ ಅಪರೂಪದ ಕಲಾಕೃತಿಗಳನ್ನು ಮಾರಾಟ ಮಾಡಬೇಕಾಯಿತು. ಬ್ರೆಜಿಲ್‌ನಲ್ಲಿ 'ಕೋರಂ ಎಕ್ಸ್' ಎಂಬ ಸಂಸ್ಥೆ ಆರಂಭಿಸಿದ್ದರು. ಗಿಡಮೂಲಿಕೆಗಳಿಂದ ಪ್ರತಿಕಾಯಗಳನ್ನು ತಯಾರಿಸಲಾಗುತ್ತದೆ ಎಂದು ಆತ ಹೇಳಿದ್ದರು. ಆದರೆ ಅದರ ಸಂಶೋಧನಾ ಘಟಕದ ಮೇಲೆ 2012ರಲ್ಲಿ ಪೊಲೀಸ್ ದಾಳಿ ನಡೆಯಿತು. ಅಲ್ಲಿ ಅತ್ಯಂತ ಅಪಾಯಕಾರಿಯಾದ ಮಾದಕವಸ್ತುಗಳನ್ನು ತಯಾರಿಸಲಾಗುತ್ತಿತ್ತು ಮತ್ತು ಮೆಕಾಫೆ ಬಳಿ ಪರವಾನಿಗೆ ಇಲ್ಲದ ಶಸ್ತ್ರಾಸ್ತ್ರವೂ ಇತ್ತು ಎಂಬ ಆರೋಪವಿತ್ತು.

ಕೊನೆಗೆ ಆರೋಪಮುಕ್ತನಾದರೂ, ಸಂಶೋಧನಾ ಸಂಸ್ಥೆಯನ್ನು ಮುಚ್ಚಲಾಯಿತು. ಪೊಲೀಸರು ಕಂಪನಿಯ ಮೇಲೆ ದಾಳಿ ನಡೆಸಿದಾಗ ಮೆಕಾಫೆಯು 17 ವರ್ಷದ ಬಾಲೆಯ ಜತೆಗೆ ಹಾಸಿಗೆಯಲ್ಲಿದ್ದ ಎಂದೂ ಆಗ ವರದಿಯಾಗಿತ್ತು.

ಅದೇ ವರ್ಷ ತಮ್ಮ ನೆರೆಮನೆಯ ಗ್ರೆಗರಿ ಪಾಲ್ ಎಂಬಾತನನ್ನು ಕೊಲೆ ಮಾಡಿದ ಆರೋಪವೂ ಮೆಕಾಫೆ ಮೇಲೆ ಬಂತು. ಇದನ್ನು ಮೆಕಾಫೆ ನಿರಾಕರಿಸಿದರೂ, ಪೊಲೀಸರಿಂದ ತಲೆಮರೆಸಿಕೊಂಡು ಓಡಾಡಲಾರಂಭಿಸಿದ್ದರು.

ಸುಮಾರು ಒಂದು ತಿಂಗಳ ನಂತರ, ಗ್ವಾಟೆಮಾಲಾದಿಂದ ಅವರನ್ನು ಪೊಲೀಸರು ಬಂಧಿಸಿದರು. ಮರಳಿ ಅಮೆರಿಕಕ್ಕೆ ಕಳುಹಿಸುವ ಸಿದ್ಧತೆಯಲ್ಲಿದ್ದಾಗ ಅವರಿಗೆ ಎರಡು ಹೃದಯಾಘಾತಗಳಾದವು. ಅದು ಕೂಡ ನಾಟಕ ಎಂಬ ಆರೋಪಗಳು ಕೇಳಿ ಬಂದವು.

ಕೊನೆಗೆ ಅವರನ್ನು ಮಿಯಾಮಿಗೆ ಗಡಿಪಾರು ಮಾಡಲಾಯಿತು. ಅಲ್ಲಿ ಮಾಜಿ ವೇಶ್ಯೆಯೊಬ್ಬರು ಮೆಕಾಫೆಗೆ ಪರಿಚಯವಾಗುತ್ತಾರೆ. ಸ್ವಲ್ಪ ಕಾಲ ಆಕೆಯ ಜತೆಗೆ ಓಡಾಡಿದ ಮೆಕಾಫೆ, ಕೊನೆಗೆ ಆಕೆಯನ್ನು ವರಿಸುತ್ತಾರೆ. 2013ರಲ್ಲಿ ಅಮೆರಿಕಕ್ಕೆ ಮರಳುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ನಂದಿಗ್ರಾಮ ಕ್ಷೇತ್ರದಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಸೋತಿದ್ದ ಮಮತಾ ಬ್ಯಾನರ್ಜಿ ಅವರು, ಫಲಿತಾಂಶದ ವಿರುದ್ಧ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ಈಗ ಹೈಕೋರ್ಟ್‌ನಲ್ಲಿಯೂ ತಮ್ಮ ಅರ್ಜಿಗೆ ಸೋಲಾಗುತ್ತದೆ ಎಂದು ಮಮತಾ ಬ್ಯಾನರ್ಜಿ ಅವರಿಗೆ ಅರಿವಾಗಿದೆ. ಹೀಗಾಗಿ ಹೆದರಿಕೊಂಡಿರುವ ಅವರು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ತಮ್ಮ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ' ಎಂಬ ವಿವರ ಇರುವ ಪೋಸ್ಟ್‌ಗಳು ಫೇಸ್‌ಬುಕ್‌ನಲ್ಲಿ ವೈರಲ್ ಆಗಿವೆ.

✓ 'ಮಮತಾ ಬ್ಯಾನರ್ಜಿ ಅವರು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ತಮ್ಮ ಅರ್ಜಿಯನ್ನು ವಾಪಸ್ ಪಡೆದಿಲ್ಲ. ಮಮತಾ ಅವರು ಸಲ್ಲಿಸಿದ್ದ ಅರ್ಜಿಯು ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿ ಕೌಶಿಕ್ ಚಂದ ಅವರ ಪೀಠದ ಎದುರು ಬಂದಿತ್ತು. ಅರ್ಜಿಯ ಮೊದಲ ವಿಚಾರಣೆ ಜೂನ್ 18ರಂದು ನಡೆಯಬೇಕಿತ್ತು. ಅದೇ ದಿನ ಮಮತಾ ಅವರ ವಕೀಲ ಸಂಜಯ್ ಬಸು ಅವರು ಕಲ್ಕತ್ತಾ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಅವರಿಗೆ ಪತ್ರ ಬರೆದಿದ್ದರು. 'ನ್ಯಾಯಮೂರ್ತಿ ಕೌಶಿಕ್ ಚಂದ್ರ ಅವರು ಬಿಜೆಪಿಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಇದು ರಾಜಕೀಯ ಅರ್ಜಿ. ಇದರಲ್ಲಿ ರಾಜಕೀಯ ಪ್ರಭಾವ ಬೀರುವ ಸಾಧ್ಯತೆ ಇದೆ. ಹೀಗಾಗಿ ನನ್ನ ಕಕ್ಷಿದಾರರ ಅರ್ಜಿಯನ್ನು ಬೇರೆ ಪೀಠಕ್ಕೆ ವರ್ಗಾಯಿಸಿ' ಎಂದು ಕೋರಿದ್ದರು. ಈ ಬೆಳವಣಿಗೆಯನ್ನೇ, ಮಮತಾ ಅವರು ಅರ್ಜಿ ವಾಪಸ್ ಪಡೆದಿದ್ದಾರೆ ಎಂದು ತಪ್ಪಾಗಿ ಅರ್ಥೈಸಲಾಗಿದೆ. ಆ ಮೂಲಕ ಸುಳ್ಳುಸುದ್ದಿ ಹರಡಲಾಗಿದೆ. ಈ ಸುಳ್ಳುಸುದ್ದಿಯ ಪೋಸ್ಟ್‌ಗಳನ್ನು 'ತಪ್ಪು ದಾರಿಗೆಳೆವ ಮಾಹಿತಿ' ಎಂದು ಫೇಸ್‌ಬುಕ್ ಟ್ಯಾಗ್ ಮಾಡಿದೆ' ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು


ಗುರುರಾಜ ಕರಜಗಿ

ಕಾಡಿನಲ್ಲಿ ವಸತಿಯ ಶೋಧ

ವೆಸ್ಸಂತರ ಎಷ್ಟು ಸಂತೈಸಿದರೂ ರಾಜಪ್ರಮುಖರು, ನಗರದ ಜನ ತಂಡತಂಡವಾಗಿ ಧರ್ಮಶಾಲೆಯ ಮುಂದೆ ಬಂದು ನೆರೆದರು. ನೀವು ಯಾವಾಗಲೂ ಶುಭಶಕುನ, ನೀವು ಕಾಲಿಟ್ಟೆಡೆಗೆ ಮಂಗಳವಾಗು-ತ್ತದೆ. ನೀವು ಅನಾಯಾಸವಾಗಿ ಇಲ್ಲಿಗೆ ಬಂದಿದ್ದೀರಿ. ನಿಮ್ಮನ್ನು ನಾವು ಬಿಟ್ಟು ಕೊಡಲಾರೆವು. ನೀವೇ ಈ ದೇಶದ ರಾಜರಾಗಿ, ನಮ್ಮನ್ನು ಆಳಿ ಅಥವಾ ನೀವು ಒಪ್ಪಿಗೆ ಕೊಟ್ಟರೆ ನಾವೆಲ್ಲ ದಂಡೆತ್ತಿ ಸಿವಿರಾಜ್ಯಕ್ಕೆ ಹೋಗಿ ರಾಜನನ್ನು ಸೋಲಿಸಿ ಆ ರಾಜ್ಯವನ್ನು ತಮಗೆ ಕೊಡಿಸುತ್ತೇವೆ. ನೀವು ಎರಡೂ ದೇಶಗಳನ್ನು ಆಳಿ ಎಂದು ಕೂಗಾಡತೊಡಗಿದರು. ಆಗ ವೆಸ್ಸಂತರ ಎದ್ದು ನಿಂತು ಎತ್ತರದ ಧ್ವನಿಯಲ್ಲಿ ಸ್ಪಷ್ಟವಾಗಿ ಹೇಳಿದ, 'ಚೆತಿಯ ದೇಶದ ಪ್ರಜೆಗಳೇ, ದಯವಿಟ್ಟು ನನ್ನ ಮಾತು ಕೇಳಿ. ನಾನು ಸಿವಿ ದೇಶದಿಂದ ಭ್ರಷ್ಟನಾಗಿ ಬಂದಿದ್ದೇನೆ. ನೀವು ನನಗೆ ಆಶ್ರಯಕೊ-ಟ್ಟರೆ, ನನ್ನನ್ನೇ ರಾಜನನ್ನಾಗಿ ಮಾಡಿದರೆ ಅವರಿಗೆ ಕೋಪ ಬರುತ್ತದೆ. ಅದಲ್ಲದೆ ನಾನು ಇನ್ನು ಮುಂದೆ ಯಾವ ರಾಜ್ಯವನ್ನು ಆಳಬಾರದೆಂದು ತೀರ್ಮಾನ ಮಾಡಿದ್ದೇನೆ. ನೀವು ನನಗೆ ಆದರ, ಅತಿಥ್ಯ, ಸತ್ಕಾರಗಳನ್ನು ನೀಡಿ ಉಪಕಾರ ಮಾಡಿದ್ದೀರಿ. ನನ್ನ ಈಗಿನ ಉದ್ದೇಶ ವಂಕಪರ್ವತಕ್ಕೆ ಹೋಗುವುದು. ಅಲ್ಲಿ ತಮಗೆ ತಿಳಿದ ಯೋಗ್ಯ ಸ್ಥಳ ಯಾವುದಾದರೂ ಇದ್ದರೆ ದಯವಿಟ್ಟು ತಿಳಿಸಿ. ಅಲ್ಲಿಗೆ ಹೋಗುವುದಕ್ಕೆ ಮಾರ್ಗದರ್ಶನ ಮಾಡಿ'. ಅನಿವಾರ್ಯವಾಗಿ ಅವರೆಲ್ಲ, ಅವನ ಮಾತನ್ನು ಒಪ್ಪಿ, ಅಂದಿನ ದಿನ ಅವನಿಗೆ ವಿಧವಿಧವಾದ ಸತ್ಕಾರಗಳನ್ನು ಮಾಡಿ, ಶ್ರೇಷ್ಠ ಭೋಜನ ಮಾಡಿಸಿದರು. ಅರವತ್ತು ಸಾವಿರ ಕ್ಷತ್ರಿಯರು ಅವನೊಡನೆ ಹದಿನೈದು ಯೋಜನ ದೂರ ನಡೆದು ಹೋದರು. ಕಾಡು ತಲುಪುತ್ತಲೇ ಅಲ್ಲಿ ನಿಂತು, ಮುಂದೆ ಹದಿನೈದು ಯೋಜನ ನಡೆದು ಹೋಗುವ ದಾರಿಯನ್ನು ತಿಳಿಸಿದರು.

'ಮಹಾರಾಜಾ, ಮುಂದೆ ಗಂಧಮಾದನ ಪರ್ವತದಲ್ಲಿ ನೀವು ನೆಲೆಸುವುದು ವಾಸಿ. ಇಲ್ಲಿಂದ ನೇರವಾಗಿ ಉತ್ತರದ ಕಡೆಗೆ ಸಾಗಿ, ಅಲ್ಲಿ ಅತ್ಯಂತ ಸುಂದರವಾದ, ತಂಪಾದ ಮರಗಳುಳ್ಳ ಪರ್ವತ ಕಾಣುತ್ತದೆ. ಮುಂದೆ ಕೇತುಮತಿಯೆಂಬ ಪರ್ವತದಿಂದ ಹರಿದು ಬರುವ ನದಿ ದೊರಕುತ್ತದೆ. ಅಲ್ಲಿ ಸ್ನಾನ ಮಾಡಿ ವಿಶ್ರಾಂತಿ ತೆಗೆದುಕೊಳ್ಳಿ. ನೀವು ಪರ್ವತದ ಶಿಖರವನ್ನು ಏರಿದಾಗ ಮನೋಹರವಾದ, ವಿಶಾಲವಾದ ಆಲದ ಮರ ಸಿಗುತ್ತದೆ. ಅದರ ಉತ್ತರದಲ್ಲಿ ಮುಚಲಿಂದ ಕೊಳವಿದೆ. ಅಲ್ಲಿ ಅತ್ಯಂತ ಸುಗಂಧಿತವಾದ ಕಮಲಗಳು ಅರಳಿ ನಿಂತಿರುತ್ತವೆ. ಸ್ವಲ್ಪ ಮುಂದೆ ಸಾಗಿದರೆ ತುಂಬ ಮನೋಹರವಾದ, ಪರಿಶುದ್ಧವಾದ ನೀರಿನಿಂದ ತುಂಬಿದ ಪುಷ್ಕರಿಣಿ ದೊರಕುತ್ತದೆ. ಅದರ ಉತ್ತರ ಪೂರ್ವದಲ್ಲಿ ನಿಮ್ಮ ಪರ್ಣಕುಟಿಯನ್ನು ನಿರ್ಮಿಸಿಕೊಳ್ಳಿ. ಅದರ ಸುತ್ತಮುತ್ತಲೂ ಬೇಕಾದಷ್ಟು ರುಚಿಯಾದ ಹಣ್ಣುಗಳ ಮರಗಳಿವೆ. ಅಲ್ಲಿಯೇ ನೀವು ಅಪೇಕ್ಷಿಸಿದ ಸನ್ಯಾಸಿ ಜೀವನವನ್ನು ನಡೆಸಬಹುದು'. ಇಷ್ಟು ವಿಸ್ತಾರವಾದ ವಿವರಣೆಯನ್ನು ನೀಡಿ, ಅವರನ್ನು ಮುಂದೆ ಕಳುಹಿಸಿದರು. ನಂತರ ಒಬ್ಬ ಚತುರನಾದ, ಸುಶಿಕ್ಷಿತ ತರುಣನನ್ನು ಈ ಕಾಡಿನ ದ್ವಾರದಲ್ಲಿ ಕಾವಲುಗಾರನ-ನ್ನಾಗಿ ಕೂಡ್ರಿಸಿದರು. ಮತ್ತೆ ಯಾರಾದರೂ ಅವರನ್ನು ಬೆನ್ನು ಹತ್ತಿ ಬಂದು ತೊಂದರೆಮಾಡದಂತೆ ಎಚ್ಚರ-ವಾಗಿರುವಂತೆ ತಿಳಿಸಿ ತಮ್ಮ ನಾಡಿಗೆ ತೆರಳಿದರು. ❖

ದಿನ ಭವಿಷ್ಯ

ಬುಧವಾರ ಜೂನ್ 30, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಷಷ್ಠೀ ಗಂ. 26-20 (ಹ. 4-36) ಬುಧವಾರ ನಿತ್ಯ ನಕ್ಷತ ಪೂರ್ವಾಭಾದ್ರ ಗಂ. 58-52 (ಬೆ.ಘ್ನಾ. 5-37) ಆಯುಃ ನಾಮ ಯೋಗ ಗಂ. 23-12 ವಣಿಜ ಕರಣ ಗಂ. 26-20 ವಿಷ ಗಂ. 13-29 ಅಮೃತ ಗಂ. 38-30 ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-00 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3

ಮೇಷ: ಆರೋಗ್ಯದಲ್ಲಿ ವ್ಯತ್ಯಯದ ಸಾಧ್ಯತೆ ಕಂಡುಬರುವುದರಿಂದ ಎಚ್ಚರಿಕೆ ಅಗತ್ಯ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಮಿತ್ರರಿಂದ ಹೆಚ್ಚಿನ ಸಹಕಾರ ಲಭ್ಯ. ಕೃಷಿ ಯಂತ್ರೋಪಕರಣ ಬಳಸುವವರಿಗೆ ಎಚ್ಚರಿಕೆ ಅಗತ್ಯ.

ವೃಷಭ: ಸಾಲ–ಸೋಲಗಳಿಂದ ಮುಕ್ತರಾಗಿ ನೆಮ್ಮದಿ ದೊರಕುವುದು. ಅಧ್ಯ-ಯನದಲ್ಲಿ ಪ್ರಗತಿ. ಆಧ್ಯಾತ್ಮಿಕ ವಿಷಯದಲ್ಲಿ ಉತ್ತಮ ಫಲ ದೊರಕಲಿದೆ. ಗೃಹ ನಿರ್ಮಾಣ ಕಾರ್ಯಗಳು ಸುಗಮವಾಗಿ ಸಾಗುವವು.

ಮಿಥುನ: ವಿದ್ಯಾಭ್ಯಾಸದಲ್ಲಿ ಸಫಲತೆ ಕಾಣುವ ದಿನವಾಗಿದೆ. ದೂರದ ಊರುಗಳಿಗೆ ಪ್ರಯಾಣ ಯೋಗವು ಕೂಡಿಬರಲಿದೆ. ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಪತ್ರ ವ್ಯವಹಾರಗಳಲ್ಲಿ ಜಾಗರೂಕರಾಗಿರಿ.

ಕರ್ಕಾಟಕ: ಮಕ್ಕಳ ಆರೋಗ್ಯ ಹದಗೆಡುವ ಸಾಧ್ಯತೆ ಇದ್ದು ಹೆಚ್ಚು ನಿಗಾ ವಹಿಸುವುದು ಉತ್ತಮ. ಕೆಲಸ ಕಾರ್ಯಗಳಿಗೆ ಉತ್ತಮ ಪ್ರೋತ್ಸಾಹ ದೊರಕುವುದು. ಮನಸ್ಸಿನ ಇಷ್ಟಾರ್ಥಗಳು ನೆರವೇರಿ ಶಾಂತಿ ಸಮಾಧಾನ.

ಸಿಂಹ: ಮಾತೃವರ್ಗದವರಿಂದ ಉತ್ತಮ ಸಹಕಾರ ದೊರೆತು ಕಾರ್ಯದಲ್ಲಿ ಯಶಸ್ಸು. ಹಿರಿಯರ ಮಾತುಗಳನ್ನು ಉಪೇಕ್ಷಿಸಿ ವೃಥಾ ಗಂಡಾಂತರ ಎದುರಿಸುವ ಸಾಧ್ಯತೆ. ಅಮೂಲ್ಯ ವಸ್ತುಗಳು ಕೈ ಸೇರುವ ಯೋಗ.

ಕನ್ಯಾ: ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ ಸಾಧಿಸುವಿರಿ. ಆಸ್ತಿ ವ್ಯವಹಾರಗಳಲ್ಲಿ ಹೆಚ್ಚಿನ ಅನುಕೂಲ ಕಂಡುಬರುವುದು. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ. ಮಹಿಳೆಯರಿಗೆ ಗೌರವಾದರಗಳು ಪ್ರಾಪ್ತವಾಗುವವು.

ತುಲಾ: ಮಹಿಳೆಯರಿಗೆ ಅಗ್ನಿ ಬಾಧೆ ಕಂಡುಬರುತ್ತಿದ್ದು ಜಾಗರೂಕರಾಗಿರು-ವುದು ಉತ್ತಮ. ಮಕ್ಕಳಿಂದ ನೆಮ್ಮದಿ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ಆರೋಗ್ಯದಲ್ಲಿ ವ್ಯತ್ಯಯ ಸಾಧ್ಯತೆ.

ವೃಶ್ಚಿಕ: ವೃತ್ತಿ ಜೀವನದ ಸಮಸ್ಯೆಗಳಿಗೆ ಸ್ವಲ್ಪಮಟ್ಟಿನ ಪರಿಹಾರ ಕಂಡುಬರುವುದು. ಮಹಿಳೆಯರಿಗೆ, ಕಲಾವಿದರಿಗೆ ಉತ್ತಮ ಪ್ರೋತ್ಸಾಹ ದೊರೆತು ಗೌರವ ಪ್ರಾಪ್ತಿ. ಯೋಜಿತ ಕಾರ್ಯಗಳಲ್ಲಿ ಯಶಸ್ಸು.

ಧನು: ಮಕ್ಕಳಿಂದ ಸಂತೋಷದ ವಾತಾವರಣ ಮೂಡುವುದು. ಮಹಿಳೆಯರ ಆಶೋತ್ತರಗಳು ನೆರವೇರುವ ಸದವಕಾಶ. ದೈನಂದಿನ ಚಟುವಟಿಕೆಗಳಲ್ಲಿ ಉತ್ಸಾಹ. ಉದ್ಯೋಗಸ್ಥರಿಗೆ ಮೇಲಾಧಿಕಾರಿಗಳಿಂದ ಪ್ರಶಂಸೆ.

ಮಕರ: ಮಹಿಳೆಯರಿಗೆ ಚಿನ್ನಾಭರಣ ಖರೀದಿಸುವ ಸುಯೋಗ. ವಾಹನ ಚಲಾಯಿಸುವಾಗ ಎಚ್ಚರಿಕೆಯಿಂದಿರಿ. ಕೌಟುಂಬಿಕ ಸಮಸ್ಯೆಗಳು ಪರಿಹಾರ ಕಂಡುಕೊಂಡ ನೆಮ್ಮದಿ. ಗೃಹಿಣಿಯರು ಮಾತಿನಲ್ಲಿ ಎಚ್ಚರಿಕೆ ವಹಿಸಿ.

ಕುಂಭ: ಗೃಹೋಪಯೋಗಿ ವಸ್ತುಗಳ ಖರೀದಿ ಸಾಧ್ಯತೆ. ಮನೆಯಲ್ಲಿ ನೆಮ್ಮದಿಯ ವಾತಾವರಣ. ನಿಷ್ಠೆ ಪ್ರಾಮಾಣಿಕತೆಗೆ ಮೇಲಾಧಿಕಾರಿಗಳಿಂದ ಪ್ರಶಂಸೆಯ ಮಾತುಗಳು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭದ ನಿರೀಕ್ಷೆ.


ಮೀನ: ಮಧುಮೇಹಿಗಳು ಆರೋಗ್ಯದ ಕಡೆ ಹೆಚ್ಚಿನ ನಿಗಾ ವಹಿಸುವುದು ಅಗತ್ಯ. ಸಂಕಲ್ಪಿತ ಕಾರ್ಯಗಳು ನೆರವೇರುವವು. ಧಾರ್ಮಿಕ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಆಂಜನೇಯನ ಅಷ್ಟೋತ್ತರ ಪಠಣದಿಂದ ಶ್ರೇಯಸ್ಸು.

ನಿಮ್ಮ ಜನ್ಮದಿನ 30-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿದ್ಯಾಭ್ಯಾಸದಲ್ಲಿ ಉನ್ನತಿಯು ವರವಾಗಿ ಪರಿಣಮಿಸುವುದು. ಉತ್ತಮ ಉದ್ಯೋಗ ದೊರೆತು ವಿದೇಶದಲ್ಲಿ ವಾಸಿಸುವ ಸಾಧ್ಯತೆಯನ್ನು ಹೊಂದಿದ್ದರೂ ಮಾತೃಭೂಮಿಯ ನಂಟನ್ನು ತೊರೆಯಲಾರಿರಿ. ಜೀವನದಲ್ಲಿ ಅನೇಕ ಅಮೂಲ್ಯ ಸಂಪತ್ತಿನ ಒಡೆಯರಾಗುವ ಭಾಗ್ಯ ನಿಮ್ಮದಾಗಲಿದೆ.

ಪದಬಂಧ 4643 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯಾರ ಸಹಾಯವೂ ಇಲ್ಲದಿರುವಿಕೆ (6)
4.ದಿಕ್ಕುಗಳನ್ನೇ ಬಟ್ಟೆಯಾಗುಳ್ಳವನು (4)
5.ಎದುರು ಬಂದಾಗ ಹೀಗೆ ಜೋರು ಮಾಡು (3)
7.ತೇಜಸ್ಸು ಇಲ್ಲಿ ಕಾಣುತ್ತಿದೆ (3)
10.ಆತುರದಿಂದ ಓಡುತ್ತಿರುವ ಕುದುರೆ (3)
12. ಬರವಿದ್ದಾಗ ಬಂದಿರುವ ಬೇಡ (3)
13.ಕೇಕಿಯ ಧ್ವನಿಯಿದು (4)
15.ವ್ರತೋಪವಾಸಗಳಿಂದ ದೇಹವನ್ನು ನಿಗ್ರಹಿಸುವುದು (6)

ಮೇಲಿಂದ ಕೆಳಕ್ಕೆ
1. ಹೆಬ್ಬಾವು ಜಗಲಿಗೆ ಬಂದಿದೆಯಲ್ಲಾ? (4)
2.ಬೆಂಕಿಗೆ ಗಾಳಿಯೂದುವ ಸಲಕರಣೆ (2)
3.ಗೌರವಿಸಲ್ಪಟ್ಟ ವ್ಯಕ್ತಿ (4)
6.ದೃಢಪಡಿಸುವ ಸಾಧನ (4)
7.ಇದು ಕನ್ನಡಿಗನ ಎಕ್ಸ್‌ಪಿರಿಮೆಂಟ್! (3)
8.ಪದಗಳ ಅರ್ಥವನ್ನು ಹೇಳುವ ಪುಸ್ತಕ (4)
9.ಕಿಳ್ಳಿ ಮಾಡುತ್ತಿರುವ ಸೂತ್ರದಾರ! (4)
11.ರಾಜನ ಗೃಹವಿದು (4)
14.ಅಧೀನತೆಗೊಳಪಟ್ಟದ್ದು (2)



4642ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಲಭೋಪಾಯ 4.ವಿದುಷಿ 5.ಮಧುರ 6.ಹತಾಶೆ 8.ಮಯ 9.ಬಾಕು 11.ಮಂದಿರ 14.ಜವಾನ 15.ಅರ್ಚಕ 16.ನವೀಕರಣ

ಮೇಲಿಂದ ಕೆಳಕ್ಕೆ: 1.ಸುಖಾಸನ 2.ಭೋಜನಾಲಯ 3.ಯಮಳ 4.ವಿರಹ 7.ತಾರೀಕು 8.ಮಡದಿ 9.ಬಾಲಬಡಿಕ 10.ನಿಷ್ಕರುಣ 12.ರಜಕ 13.ಆನನ

ಸುಡೊಕು 5029

	7			9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5028 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಎರಡನೇ ದಿನವೂ ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ವಿಶ್ವದ ಹಲವು ದೇಶಗಳಲ್ಲಿ ಕೋವಿಡ್‌–19 ಪ್ರಕರಣಗಳ ಸಂಖ್ಯೆಯಲ್ಲಿ ಮತ್ತೆ ಹೆಚ್ಚಳ ಆದ ಪರಿಣಾಮವಾಗಿ ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಎಚ್ಚರಿಕೆಯ ವಹಿವಾಟು ನಡೆಯಿತು. ದೇಶದಲ್ಲಿ ಹೂಡಿಕೆದಾರರು ಹೆಚ್ಚು ರಿಸ್ಕ್ ಇರುವ ಷೇರುಗಳ ಮೇಲಿನ ಹೂಡಿಕೆ ತಗ್ಗಿಸಿದರು. ಇದರಿಂದ ಸಂವೇದಿ ಸೂಚ್ಯಂಕಗಳು ಎರಡನೆಯ ದಿನವೂ ಇಳಿಕೆ ಕಂಡವು.

ಷೇರುಪೇಟೆ ವಹಿವಾಟು ▼ 186



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,814
ಇಂದಿನ ಅಂತ್ಯ	15,748
▼	66
ದಿನದ ಕನಿಷ್ಠ	15,724

ವಿನಿಮಯ ದರ

$ ಡಾಲರ್	74.23
£ ಪೌಂಡ್	102.81
€ ಯುರೊ	88.39
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1350 (1350)
ಸೋಯಾ (ರಿಫೈನ್ಡ್)	₹1285 (1290)
ಸೂರ್ಯಕಾಂತಿ (ರಿಫೈನ್ಡ್)	₹1350(1350)
ಪಾಮೋಲಿನ್	₹1165(1155)

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1500-2000
ಮಧ್ಯಮ	₹1200-1500
ಸಣ್ಣ	₹1000-1200

ಕೋವಿಡ್ ಪರಿಣಾಮ ನಿಯಂತ್ರಿಸಲು ಆರ್ಥಿಕ ಉತ್ತೇಜನಾ ಕೊಡುಗೆ

ವಿತ್ತೀಯ ಕೊರತೆ ಹೆಚ್ಚಳ ಸಾಧ್ಯತೆ

● ಅನ್ನಪೂರ್ಣಾ ಸಿಂಗ್

ನವದೆಹಲಿ: ಕೋವಿಡ್‌ನಿಂದ ಆಗಿರುವ ಕೆಟ್ಟ ಪರಿಣಾಮಗಳನ್ನು ನಿಭಾಯಿಸಲು ಕೇಂದ್ರ ಸರ್ಕಾರ ಸೋಮವಾರ ಘೋಷಿಸಿರುವ ಆರ್ಥಿಕ ಉತ್ತೇಜನಾ ಪ್ಯಾಕೇಜ್‌ನಿಂದ ಬೆಳವಣಿಗೆ ನಿಜಕ್ಕೂ ಸಾಧ್ಯವೇ ಎಂಬ ಅನುಮಾನವನ್ನು ಆರ್ಥಿಕ ತಜ್ಞರು ವ್ಯಕ್ತಪಡಿಸಿದ್ದಾರೆ. ಹೊಸದಾಗಿ ಘೋಷಿಸಿರುವ ಕ್ರಮಗಳಿಂದಾಗಿ ವಿತ್ತೀಯ ಕೊರತೆಯು ಗರಿಷ್ಠ ಶೇಕಡ 1ರಷ್ಟು ಹೆಚ್ಚಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು ಶೇಕಡ 6.8ಕ್ಕಿಂತ ಹೆಚ್ಚಿರುತ್ತದೆ ಎಂದು ಎಸ್‌ಬಿಐ, ಎಂಕೆ ಗ್ಲೋಬಲ್ ಫೈನಾನ್ಶಿಯಲ್ ಸರ್ವಿಸಸ್ ಮತ್ತು ಕೇರ್ ರೇಟಿಂಗ್ಸ್‌ನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. 2021–22ರಲ್ಲಿ ವಿತ್ತೀಯ ಕೊರತೆಯು ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 6.8ರಷ್ಟು ಇರುತ್ತದೆ ಎಂದು ಕೇಂದ್ರ ಸರ್ಕಾರ ಅಂದಾಜು ಮಾಡಿದೆ.



‘ವಿತ್ತೀಯ ಕೊರತೆಯು ಈ ಮೊದಲು ಅಂದಾಜು ಮಾಡಿರುವ ಶೇ 6.8ರಷ್ಟಕ್ಕಿಂತ ಶೇ 0.5ರಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ’ ಎಂದು ಎಂಕೆ ಗ್ಲೋಬಲ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಮಾಧವಿ ಅರೋರಾ ಹೇಳಿದರು.

ಸಣ್ಣ ಕೈಗಾರಿಕೆಗಳಿಗೆ ಸಾಲಕ್ಕೆ ಖಾತರಿ ಒದಗಿಸಲು ಹೆಚ್ಚುವರಿಯಾಗಿ ₹ 1.5 ಲಕ್ಷ ಕೋಟಿ ಮೀಸಲಿಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಪ್ರಕಟಿಸಿದ್ದಾರೆ. ಹಿಂದೆಯೂ ಘೋಷಿಸಲಾಗಿರುವ ಕೆಲವು ಆರ್ಥಿಕ ಪುನಶ್ಚೇತನ ಪ್ಯಾಕೇಜ್ ಮೊತ್ತಗಳನ್ನು ಪರಿಗಣಿಸಿದರೆ, ಈವರೆಗೆ ಘೋಷಿಸಿರುವ ಪ್ಯಾಕೇಜ್‌ನ ಮೊತ್ತವು ₹ 6.29 ಲಕ್ಷ ಕೋಟಿ ಆಗುತ್ತದೆ.

‘ಹೆಚ್ಚಿನ ವೆಚ್ಚ ಹಾಗೂ ಕಡಿಮೆ ಆದಾಯದ ಕಾರಣದಿಂದಾಗಿ ವಿತ್ತೀಯ ಕೊರತೆಯು ಹಾಲಿ ಆರ್ಥಿಕ ವರ್ಷದಲ್ಲಿ ₹ 17.04 ಲಕ್ಷ ಕೋಟಿಯಿಂದ ₹ 17.33 ಲಕ್ಷ ಕೋಟಿವರೆಗೆ ಜಾಸ್ತಿ ಆಗಬಹುದು. ವಿತ್ತೀಯ ಕೊರತೆಯ ಪ್ರಮಾಣವು ಶೇ 7.7ರಿಂದ ಶೇ 7.8ರಷ್ಟು ಇರಬಹುದು’ ಎಂದು ಕೇರ್ ರೇಟಿಂಗ್ಸ್‌ನ ವರದಿಯೊಂದು ಹೇಳಿದೆ.

ಸಾಲ ನೀಡಲು ₹ 70 ಸಾವಿರ ಕೋಟಿ

ಮುಂಬೈ (ಪಿಟಿಐ): ವಿವಿಧ ಉದ್ಯಮ ವಲಯಗಳಿಗೆ ಸಾಲ ಒದಗಿಸಲು ಸೋಮವಾರ ಘೋಷಿಸಿರುವ ಕ್ರಮಗಳು ಹಾಗೂ ಇತರ ನೆರವುಗಳಿಂದಾಗಿ ವಿತ್ತೀಯ ಕೊರತೆಯು ಶೇಕಡ 0.60ರಷ್ಟು ಹೆಚ್ಚಳ ಆಗಬಹುದು ಎಂದು ಎಸ್‌ಬಿಐ ಸಿದ್ಧಪಡಿಸಿರುವ ವರದಿ ಹೇಳಿದೆ.

ಹೊಸ ಕ್ರಮಗಳಿಂದಾಗಿ ಸಾಲ ಒದಗಿಸಲು ಬ್ಯಾಂಕ್‌ಗಳಿಗೆ ಹೆಚ್ಚುವರಿಯಾಗಿ ₹ 70 ಸಾವಿರ ಕೋಟಿ ಲಭ್ಯವಾಗಬಹುದು ಎಂದು ಎಸ್‌ಬಿಐನ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಸಿದ್ಧಪಡಿಸಿರುವ ವರದಿಯು ಅಂದಾಜು ಮಾಡಿದೆ.

ಸೋಮವಾರದ ಘೋಷಣೆಗಳು ಮುಖ್ಯವಾಗಿ ಆರೋಗ್ಯ, ಪ್ರವಾಸೋದ್ಯಮ, ಕೃಷಿ ಮತ್ತು ಕಿರು ಹಣಕಾಸು ಸಂಸ್ಥೆಗಳನ್ನು ಗಮನದಲ್ಲಿ ಇರಿಸಿಕೊಂಡಿದೆ. ಸೋಮವಾರದ ಇತರ ಘೋಷಣೆಗಳು ಈಗಾಗಲೇ ಜಾರಿಯಲ್ಲಿ ಇರುವ ಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿ ಆಗಿಸುವಂತೆ ಇವೆ ಎಂದು ಘೋಷ್ ಅವರು ಹೇಳಿದ್ದಾರೆ.

ತಾಳೆ ಎಣ್ಣೆ ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಚ್ಚಾ ತಾಳೆ ಎಣ್ಣೆ ಮೇಲಿನ ಆಮದು ತೆರಿಗೆಯನ್ನು ಶೇಕಡ 10ಕ್ಕೆ ಇಳಿಸಿದೆ. ಇತರ ತಾಳೆ ಎಣ್ಣೆಗಳ ಮೇಲಿನ ಆಮದು ತೆರಿಗೆಯನ್ನು ಶೇ 37.5ಕ್ಕೆ ಇಳಿಸಿದೆ. ಇದು ಸೆಪ್ಟೆಂಬರ್ 30ರವರೆಗೆ ಅನ್ವಯ ಆಗಲಿದೆ. ಈ ಕ್ರಮವು ದೇಶಿ ಮಾರುಕಟ್ಟೆಯಲ್ಲಿ ಖಾದ್ಯ ತೈಲದ ಬೆಲೆ ಇಳಿಕೆಗೆ ನೆರವಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಇದುವರೆಗೆ ಕಚ್ಚಾ ತಾಳೆ ಎಣ್ಣೆ ಮೇಲೆ ಶೇ 15ರಷ್ಟು, ಇತರ ತಾಳೆ ಎಣ್ಣೆಗಳ ಮೇಲೆ ಶೇ 45ರಷ್ಟು ಆಮದು ತೆರಿಗೆ ವಿಧಿಸಲಾಗುತ್ತಿತ್ತು. ‘ಹೊಸ ಆಮದು ತೆರಿಗೆ ದರವು ಬುಧವಾರದಿಂದ (ಜೂನ್ 30) ಜಾರಿಗೆ ಬರಲಿದೆ’ ಎಂದು ಪರೋಕ್ಷ ತೆರಿಗೆಗಳು ಹಾಗೂ ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿ ಹೇಳಿದೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್‌-ಹಣಕಾಸು ತಜ್ಞ
uppuranik@gmail.com
ಮೊ: 9448015300

ರಾಮಪ್ಪ, ಹುಬ್ಬಳ್ಳಿ

● ಪ್ರಶ್ನೆ: ನಾನು ಸರ್ಕಾರಿ ನೌಕರ. 2020ರ ಜನವರಿಯಲ್ಲಿ ಸಹೋದ್ಯೋಗಿಗೆ ಬ್ಯಾಂಕ್‌ನಲ್ಲಿ ₹ 1 ಲಕ್ಷ ಸಾಲ ಪಡೆಯಲು ನಾನು ಜಾಮೀನು ಹಾಕಿದ್ದೆ. ಆತನ ಸಾಲದ ಮಾಸಿಕ ಕಂತು ತುಂಬಲು ನಮ್ಮ ಇಲಾಖೆಯಿಂದ ಬ್ಯಾಂಕ್‌ಗೆ undertaking letter ಕೊಟ್ಟಿರುತ್ತಾರೆ. ಸಾಲ ಪಡೆದ ವ್ಯಕ್ತಿ ಕೋವಿಡ್‌ನಿಂದಾಗಿ ಕಳೆದ ತಿಂಗಳು ಮರಣ ಹೊಂದಿದ್ದಾರೆ. ನನಗೆ ಈಗ ಬ್ಯಾಂಕ್‌ನವರು ಮರಣ ಹೊಂದಿದ ವ್ಯಕ್ತಿಯ ಸಾಲ ತೀರಿಸುವಂತೆ ನೋಟಿಸ್ ಕಳುಹಿಸಿದ್ದಾರೆ. ನಾನು ತುಂಬಾ ಗೊಂದಲದಲ್ಲಿ ಇದ್ದೇನೆ. ಮಾರ್ಗದರ್ಶನ ಮಾಡಿ.

ಉತ್ತರ: ನಿಮ್ಮ ಇಲಾಖೆಯವರು, ಸದ್ಯ ಮರಣ ಹೊಂದಿದ ವ್ಯಕ್ತಿಯ ಸಾಲ ತೀರಿಸುವಂತೆ ಬ್ಯಾಂಕ್‌ಗೆ undertaking letter ಕೊಟ್ಟಿರುವುದರಿಂದ ನಿಮಗೆ ಬಂದಿರುವ ಬ್ಯಾಂಕ್ ನೋಟಿಸ್ ಅನ್ನು ನಿಮ್ಮ ಮೇಲಿನ ಅಧಿಕಾರಿಗೆ ತಿಳಿಸಿ. ಮರಣ ಹೊಂದಿರುವ ವ್ಯಕ್ತಿಗೆ ಸರ್ಕಾರದಿಂದ ಬರತಕ್ಕ ಹಣದಿಂದ ಬ್ಯಾಂಕ್ ಸಾಲ ತೀರಿಸಲು ಮನವಿ ಪತ್ರ ಕೊಡಿ ಹಾಗೂ ಮನವಿ ಪತ್ರದ ನಕಲು ಪ್ರತಿಯನ್ನು ಬ್ಯಾಂಕ್‌ಗೆ ಕೊಡಿ. ಜಾಮೀನು ಹಾಕುವವರಿಗೊಂದು ಕಿವಿಮಾತು. ಸಾಲಗಾರ ಸಾಲ ತೀರಿಸಲು ಅಸಮರ್ಥನಾದಲ್ಲಿ ಜಾಮೀನುದಾರರೇ ಸಾಲಗಾರನ ಸಾಲ ಮರುಪಾವತಿಸಬೇಕಾಗುತ್ತದೆ. ಜಾಮೀನು ಎನ್ನುವುದು ಸಾಕ್ಷಿ ಎಂಬುದಾಗಿ ಬಹಳಷ್ಟು ಜನ ಸಹಿ ಹಾಕಿ ಪೇಚಾಡುತ್ತಾರೆ. ಈ ವಿಚಾರದಲ್ಲಿ ಓದುಗರು ಗಂಭಿರವಾಗಿ ಇರಬೇಕಾಗಿ ವಿನಂತಿ.

ಆರ್.ಎಸ್. ದೇಸಾಯಿ, ಕಲಘಟಗಿ

● ಪ್ರಶ್ನೆ: ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 68 ವರ್ಷ. ವಾರ್ಷಿಕ ಪಿಂಚಣಿ ₹ 3,38,124. ಅಂಚೆ ಕಚೇರಿ ಮೇಲಿನ ಠೇವಣಿ ಬಡ್ಡಿ ₹ 34,500. ವಾರ್ಷಿಕ ಜೀವ ವಿಮಾ ಕಂತು ₹ 7,000. ಪಿಪಿಎಫ್ ₹ 12,000 ತುಂಬುತ್ತೇನೆ. ನನ್ನ ಹೆಂಡತಿಗೆ ಬಡ್ಡಿ ವರಮಾನ ₹ 25,000 ಬರುತ್ತದೆ. ನನ್ನ ಆದಾಯಕ್ಕೆ ನನ್ನ ಹೆಂಡತಿಯ ಆದಾಯ ಸೇರಿಸಬೇಕೆ? ರಿಟರ್ನ್ಸ್ ತುಂಬಬೇಕೇ ತಿಳಿಸಿ.

ಉತ್ತರ: ನಿಮ್ಮ ವಾರ್ಷಿಕ ಪಿಂಚಣಿ ಹಾಗೂ ಬಡ್ಡಿವರಮಾನ ₹ 3,72,624. ನಿಮಗೆ ಸ್ಟ್ಯಾಂಡರ್ಡ್ ಡಿಡಕ್ಷನ್ 16(1ಎ) ₹ 50 ಸಾವಿರ, ಸೆಕ್ಷನ್ 80ಟಿಟಿಬಿ ಬಡ್ಡಿ ವರಮಾನದಲ್ಲಿ ₹ 34,500, ಸೆಕ್ಷನ್ 80 ಸಿ ಆಧಾರದ ಮೇಲೆ ವಿಮಾ ಕಂತು ಹಾಗೂ ಪಿಪಿಎಫ್ ₹ 19 ಸಾವಿರ ಹೀಗೆ ವಿನಾಯಿತಿಗಳಿವೆ. ನೀವು ಯಾವ ವಿನಾಯಿತಿ ಪಡೆಯದಿದ್ದರೂ ಆದಾಯ ತೆರಿಗೆಗೆ ಒಳಗಾಗುವುದಿಲ್ಲ. ನಿಮ್ಮ ಹೆಂಡತಿಯ ಬಡ್ಡಿವರಮಾನ ₹ 25 ಸಾವಿರ ಸೇರಿಸಿದರೂ ತೆರಿಗೆ ಬರುವುದಿಲ್ಲ. ನಿಮ್ಮ ವಾರ್ಷಿಕ ವರಮಾನ ₹ 3 ಲಕ್ಷ ದಾಟುವುದರಿಂದ ಐ.ಟಿ. ರಿಟರ್ನ್ಸ್ ತುಂಬಬೇಕಾಗುತ್ತದೆ. ಈ ವರ್ಷ ಐ.ಟಿ. ರಿಟರ್ನ್ಸ್ ಸಲ್ಲಿಸಲು ಸೆಪ್ಟೆಂಬರ್ 30ರವರೆಗೆ ಅವಕಾಶ ಇದೆ. ನಿಮ್ಮ ವಾರ್ಷಿಕ ವರಮಾನ ಪರಿಗಣಿಸುವಾಗ ಮುಂದಿನ ವರ್ಷಗಳಲ್ಲಿಯೂ ಆದಾಯ ತೆರಿಗೆ ಕೊಡುವ ಅವಶ್ಯಕತೆ ಬರಲಿಕ್ಕಿಲ್ಲ. ತೆರಿಗೆ ಭಯದಿಂದ ಹೊರಬಂದು ಸುಖವಾಗಿ ಬಾಳಿರಿ.

ಚಿದಾನಂದ, ರಾಯಚೂರು

● ಪ್ರಶ್ನೆ: ನನಗೆ ಸ್ವಂತ ಮನೆ ಇದೆ. ವಯಸ್ಸು 35 ವರ್ಷ. ಸಂಬಳ ₹ 20 ಸಾವಿರ. 5 ವರ್ಷದ ಮಗ ಮತ್ತು ಮೂರು ವರ್ಷದ ಮಗಳು ಇದ್ದಾರೆ. ನನ್ನೊಡನೆ ₹ 20 ಲಕ್ಷವಿದೆ. ಈ ಹಣದಿಂದ ಪ್ರತೀ ತಿಂಗಳೂ ಬಡ್ಡಿ ಪಡೆಯಲು ಹಾಗೂ ಮಕ್ಕಳ ಭವಿಷ್ಯ ರೂಪಿಸಲು ಮಾರ್ಗದರ್ಶನ ಮಾಡಿ.

ಉತ್ತರ: ನಿಮಗೆ ತಿಂಗಳಿಗೆ ₹ 20 ಸಾವಿರ ಸಂಬಳ ಬರುವುದರಿಂದ, ಸ್ವಂತ ಮನೆ ಇರುವುದರಿಂದ ನಿಮ್ಮೊಡನಿರುವ ₹ 20 ಲಕ್ಷವನ್ನು ಬ್ಯಾಂಕ್‌ನಲ್ಲಿ 5 ವರ್ಷಗಳ ಅವಧಿಗೆ ಒಮ್ಮೆಲೇ ಬಡ್ಡಿ ಬರುವ ಠೇವಣಿಯಲ್ಲಿ ಇಡಿ. ಹೀಗೆ ಮಾಡಿದಲ್ಲಿ ನಿಮ್ಮ ಹಣ ಚಕ್ರಬಡ್ಡಿಯಲ್ಲಿ ಬೆಳೆದು ವೃದ್ಧಿಯಾಗುತ್ತದೆ. ಶೇಕಡ 5.5ರ ಬಡ್ಡಿದರದಲ್ಲಿ ನಿಮ್ಮ ₹ 20 ಲಕ್ಷ ಬಂಡವಾಳವು 5 ವರ್ಷದಲ್ಲಿ ₹ 26,28,200 ಆಗಿ ನಿಮ್ಮ ಕೈಸೇರುತ್ತದೆ. ನಿಮ್ಮ ಪರಿಸ್ಥಿತಿಗೆ ₹ 20 ಲಕ್ಷ ಠೇವಣಿ ಇರಿಸಿ ಪ್ರತೀ ತಿಂಗಳೂ ಬಡ್ಡಿ ಪಡೆಯುವುದು ಎಂದಿಗೂ ಸೂಕ್ತವಲ್ಲ. ಜೊತೆಗೆ ಹೀಗೆ ಬಂದ ಬಡ್ಡಿ ನಿಮ್ಮ ಕೈಸೇರುತ್ತಲೇ ಒಂದಲ್ಲಾ ಒಂದು ರೀತಿಯಲ್ಲಿ ಖರ್ಚಾಗಿ ಬಿಡುತ್ತದೆ. ಈ ರೀತಿ ಮಾಡುವುದು ಸರಿಯಲ್ಲ. ಉಳಿಸಿದ ಹಣ ನಿಮ್ಮ ಮಕ್ಕಳ ಭವಿಷ್ಯಕ್ಕೆ ನೆರವಾಗುತ್ತದೆ. ಸಾಧ್ಯವಾದರೆ ನಿಮ್ಮ ಸಂಬಳದಲ್ಲಿ ಎಷ್ಟಾದರೂ ಉಳಿಸಿ ಹೆಣ್ಣು ಮಗುವಿನ ಸಲುವಾಗಿ ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಪ್ರತಿ ತಿಂಗಳೂ ಉಳಿತಾಯ ಮಾಡುತ್ತ ಬನ್ನಿ.

❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಎಸ್‌ಬಿಐ ಎಟಿಎಂ: ನಾಳೆಯಿಂದ ಹೊಸ ಶುಲ್ಕ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ (ಎಸ್‌ಬಿಐ) ಶೂನ್ಯ ಬ್ಯಾಲೆನ್ಸ್ ಖಾತೆ ಅಥವಾ ಸಾಮಾನ್ಯ ಉಳಿತಾಯ ಬ್ಯಾಂಕ್ ಠೇವಣಿ ಖಾತೆ (ಬಿಎಸ್‌ಬಿಡಿ) ಹೊಂದಿರುವ ಗ್ರಾಹಕರು ಎಟಿಎಂನಿಂದ, ಬ್ಯಾಂಕ್ ಶಾಖೆಗಳಿಂದ ಹಣ ಹಾಗೂ ಚೆಕ್ ಬುಕ್ ಪಡೆಯಲು ಕೊಡಬೇಕಿರುವ ಶುಲ್ಕಗಳು ಜುಲೈ 1ರಿಂದ ಬದಲಾಗಲಿವೆ.

ಜುಲೈ 1ರಿಂದ ಪರಿಷ್ಕೃತ ನಿಯಮ ಜಾರಿಗೆ ಬರಲಿದ್ದು, ವಿವಿಧ ಸೇವೆಗಳ ಮೇಲಿನ ಶುಲ್ಕವು ₹ 15ರಿಂದ ₹ 75ರವರೆಗೆ ಇರಲಿದೆ. ಎಟಿಎಂ ಮತ್ತು ಶಾಖೆಗಳಿಂದ ಶುಲ್ಕವಿಲ್ಲದೆ ತಿಂಗಳಿಗೆ ನಾಲ್ಕು ಬಾರಿ ಮಾತ್ರ ಹಣ ಪಡೆಯಬಹುದು. ಆ ಬಳಿಕ ಪ್ರತಿ ಬಾರಿ ಹಣ ಹಿಂಪಡೆದಾಗಲೂ ₹ 15 ಹಾಗೂ ಜಿಎಸ್‌ಟಿ ಪಾವತಿಸಬೇಕು. ಎಸ್‌ಬಿಐಯೇತರ ಬ್ಯಾಂಕ್‌ಗಳ ಎಟಿಎಂನಿಂದ ಹಣ ಪಡೆಯಲೂ ಇದು ಅನ್ವಯ. ಸದ್ಯ ಹಣಕಾಸು ವರ್ಷವೊಂದರಲ್ಲಿ 10 ಚೆಕ್‌ಗಳಿರುವ ಚೆಕ್‌ಬುಕ್‌ಅನ್ನು ಎಸ್‌ಬಿಐ ಉಚಿತವಾಗಿ ನೀಡುತ್ತಿದೆ. ಹೆಚ್ಚು ಬೇಕಿದ್ದಲ್ಲಿ, 10 ಚೆಕ್‌ಗಳ ಒಂದು ಚೆಕ್‌ಬುಕ್‌ಗೆ ₹ 40 ಶುಲ್ಕ, ಜಿಎಸ್‌ಟಿ ಪಾವತಿಸಬೇಕು. 25 ಚೆಕ್‌ಗಳಿರುವುದಕ್ಕೆ ₹ 75 ಶುಲ್ಕ, ಜಿಎಸ್‌ಟಿ ಪಾವತಿಸಬೇಕು. ತುರ್ತಾಗಿ ಚೆಕ್‌ಬುಕ್ ಬೇಕಾದಲ್ಲಿ 10 ಚೆಕ್‌ಗಳಿರುವುದಕ್ಕೆ ₹ 50 ಶುಲ್ಕ, ಜಿಎಸ್‌ಟಿ ಪಾವತಿಸಬೇಕು. ಹಿರಿಯ ನಾಗರಿಕರು ಶುಲ್ಕ ಪಾವತಿಸಬೇಕೆಂದಿಲ್ಲ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಜುಲೈ 5ರಿಂದ ಸಿ.ಎ ಪರೀಕ್ಷೆಗೆ ‘ಸುಪ್ರೀಂ’ ಒಲವು

ನವದೆಹಲಿ: ಲೆಕ್ಕ ಪರಿಶೋಧಕರ (ಸಿ.ಎ) ಪರೀಕ್ಷೆಯನ್ನು ಜುಲೈ 5ರಿಂದ ಆರಂಭಿಸುವ ಕುರಿತು ಸುಪ್ರೀಂ ಕೋರ್ಟ್ ಮಂಗಳವಾರ ಒಲವು ತೋರಿದೆ.

ಕೋವಿಡ್ ಬಾಧಿತ ವಿದ್ಯಾರ್ಥಿಗಳಿಗೆ ಆಯ್ಕೆ ಸೇರಿದಂತೆ ಅಗತ್ಯ ಮಾರ್ಗಸೂಚಿಗಳನ್ನು ರೂಪಿಸಬೇಕು. ಸಲಹೆಗಳನ್ನು ಒಳಗೊಂಡ ವರದಿ ಸಲ್ಲಿಸಬೇಕು ಎಂದು ಭಾರತೀಯ ಲೆಕ್ಕಪರಿಶೋಧಕರ ಸಂಸ್ಥೆಗೆ (ಐಸಿಎಐ) ಸೂಚಿಸಿತು.

ನ್ಯಾಯಮೂರ್ತಿಗಳಾದ ಎ.ಎಂ.ಖಾನ್‌ವಿಲ್ಕರ್, ದಿನೇಶ್ ಮಹೇಶ್ವರಿ, ಅನಿರುದ್ಧ ಬೋಸ್ ಅವರಿದ್ದ ಪೀಠ, ವರದಿಯನ್ನು ಪರಿಶೀಲಿಸಿ ಸಿ.ಎ ಪರೀಕ್ಷೆ ಕುರಿತು ತೀರ್ಪು ಪ್ರಕಟಿಸಲಿದೆ ಎಂದು ತಿಳಿಸಿ, ಬುಧವಾರಕ್ಕೆ ವಿಚಾರಣೆ ನಿಗದಿಪಡಿಸಿತು.

ಸ್ಪೆಲಿಂಗ್ ಬೀ: ಅಂತಿಮ ಸುತ್ತಿಗೆ ಭಾರತೀಯ ಮೂಲದ 9 ಮಂದಿ

ವಾಷಿಂಗ್ಟನ್ (ಪಿಟಿಐ): 2021ನೇ ಸಾಲಿನ ಪ್ರತಿಷ್ಠಿತ ಸ್ಪೆಲ್ಲಿಂಗ್ ಬೀ ಸ್ಪರ್ಧೆಯ ಅಂತಿಮ ಸುತ್ತಿಗೆ ತಲುಪಿದ 11 ಸ್ಪರ್ಧಿಗಳ ಪೈಕಿ 9 ಮಂದಿ ಭಾರತೀಯ ಮೂಲದವರಾಗಿದ್ದಾರೆ.

‘ಜುಲೈ 8ರಂದು ನಡೆಯಲಿರುವ ಸ್ಕ್ರಿಪ್ಸ್ ರಾಷ್ಟ್ರೀಯ ಸ್ಪೆಲ್ಲಿಂಗ್ ಬೀ ಸ್ಪರ್ಧೆಯ ಫಿನಾಲೆಯಲ್ಲಿ ಸೆಣಸಾಡಲಿದ್ದಾರೆ’ ಎಂದು ಸೋಮವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಅಮೆರಿಕದ ಜನಸಂಖ್ಯೆಯಲ್ಲಿ ಭಾರತ ಮೂಲದವರು ಶೇ 1ರಷ್ಟಿದ್ದಾರೆ. ಆದರೂ ಕಳೆದ 20 ವರ್ಷಗಳಿಂದ ಅಮೆರಿಕದ ಸ್ಪೆಲಿಂಗ್ ಬೀ ಸ್ಪರ್ಧೆಯಲ್ಲಿ ಭಾರತೀಯ ಮೂಲದವರು ಪ್ರಾಬಲ್ಯ ಸಾಧಿಸಿದ್ದಾರೆ.

ಎಲ್‌ಇಟಿ ಕಮಾಂಡರ್ ಸೇರಿ ಇಬ್ಬರು ಉಗ್ರರ ಹತ್ಯೆ

ಶ್ರೀನಗರ: ಶ್ರೀನಗರ ಹೊರವಲಯದಲ್ಲಿರುವ ಮಾಲೂರಾ ಪ್ರದೇಶದಲ್ಲಿ ಮಂಗಳವಾರ ಭದ್ರತಾ ಪಡೆ ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್‌-ಎ-ತಯಬಾ (ಎಲ್‌ಇಟಿ) ಸಂಘಟನೆಯ ಕಮಾಂಡರ್ ಸೇರಿ ಇಬ್ಬರು ಉಗ್ರರು ಹತರಾಗಿದ್ದಾರೆ.

ಎಲ್‌ಇಟಿ ಕಮಾಂಡರ್, ಪಾಕಿಸ್ತಾನದ ಉಗ್ರ ಅಬ್ರಾರ್‌ನನ್ನು ಎನ್‌ಕೌಂಟರ್‌ನಲ್ಲಿ ಕೊಲ್ಲುವ ಮೊದಲು ಒಂದು ದಿನ ಮುಂಚಿತವಾಗಿ ಭದ್ರತಾಪಡೆ ಸಿಬ್ಬಂದಿ ಜೀವಂತವಾಗಿ ಸೆರೆ ಹಿಡಿದಿದ್ದರು.

ಪೊಲೀಸ್, ಸೇನೆ ಮತ್ತು ಸಿಆರ್‌ಪಿಎಫ್ ಜಂಟಿ ತಂಡವು ಮಾಲೂರಾದಲ್ಲಿ ಉಗ್ರರ ಶೋಧ ಕಾರ್ಯಾಚರಣೆ ಆರಂಭಿಸಿದ ನಂತರ ಸೋಮವಾರ ಸಂಜೆ ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಸಹಾಯಕ ಕಮಾಂಡೆಂಟ್ ಮತ್ತು ಸಬ್ ಇನ್‌ಸ್ಪೆಕ್ಟರ್ ಸೇರಿ ಮೂವರು ಸಿಆರ್‌ಪಿಎಫ್ ಸಿಬ್ಬಂದಿ ಗಾಯಗೊಂಡಿದ್ದಾರೆ.

ಜಾಕೋಬ್ ಜುಮಾಗೆ 15 ತಿಂಗಳು ಜೈಲು ಶಿಕ್ಷೆ

ಜೋಹಾನ್ಸ್‌ಬರ್ಗ್ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ವಿಚಾರಣಾ ಆಯೋಗದ ವಿಚಾರಣೆಯಿಂದ ಹೊರನಡೆದು ನ್ಯಾಯಾಂಗ ನಿಂದನೆ ಮಾಡಿರುವ ದಕ್ಷಿಣ ಆಫ್ರಿಕದ ಮಾಜಿ ಅಧ್ಯಕ್ಷ ಜಾಕೋಬ್ ಜುಮಾ ಅವರಿಗೆ ದೇಶದ ಉನ್ನತ ನ್ಯಾಯಾಲಯ 15 ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಶಿಕ್ಷೆಯನ್ನು ಅಮಾನತುಗೊಳಿಸಲಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ. ರಾಜ್ಯ ಮತ್ತು ಪ್ಯಾರಾಸ್ಟಾಟಲ್ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ನಡೆಸಿ ಮತ್ತು ಲಂಚ ಪಡೆದ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ವಿಚಾರಣಾ ಆಯೋಗವು ಜುಮಾ ಅವರನ್ನು ಎರಡು ವರ್ಷಗಳ ಕಾಲ ಜೈಲಿಗೆ ತಳ್ಳುವಂತೆ ಆದೇಶಿಸಿತ್ತು. ಆಯೋಗದೊಂದಿಗೆ ಸಹಕರಿಸುವುದಕ್ಕಿಂತ ಜೈಲಿಗೆ ಹೋಗಲು ಸಿದ್ಧವಿರುವುದಾಗಿ ಜುಮಾ ಪದೇ ಪದೇ ಹೇಳಿದ್ದಾರೆ.

ಪಾಲ್ಘರ್ ಪ್ರಕರಣ: 14 ಆರೋಪಿಗಳಿಗೆ ಜಾಮೀನು

ಥಾಣೆ (ಪಿಟಿಐ): ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ 2020ರ ಏಪ್ರಿಲ್‌ನಲ್ಲಿ ನಡೆದ ಇಬ್ಬರು ಸಾಧುಗಳ ಹತ್ಯೆ ಪ್ರಕರಣದಲ್ಲಿ ಬಂಧಿತ 14 ಆರೋಪಿಗಳಿಗೆ ಥಾಣೆ ಜಿಲ್ಲಾ ನ್ಯಾಯಾಲಯ ಮಂಗಳವಾರ ಜಾಮೀನು ನೀಡಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಆರ್.ಎಸ್ ಗುಪ್ತಾ ಅವರು ಇತರ 18 ಆರೋಪಿಗಳ ಜಾಮೀನು ಅರ್ಜಿಗಳನ್ನು ತಿರಸ್ಕರಿಸಿದ್ದಾರೆ ಎಂದು ವಕೀಲ ಅಮೃತ್ ಅಧಿಕಾರಿ ಹೇಳಿದರು.

ನ್ಯಾಯಾಲಯವು ಮುಂದಿನ ವಿಚಾರಣೆಯ ದಿನಾಂಕವನ್ನು ಜುಲೈ 30ಕ್ಕೆ ನಿಗದಿಪಡಿಸಿದೆ. ಈ ಪ್ರಕರಣದಲ್ಲಿ ಒಟ್ಟು 201 ಜನರನ್ನು ಬಂಧಿಸಲಾಗಿದ್ದು, ಈ ಪೈಕಿ 75 ಮಂದಿ ಪ್ರಮುಖ ಆರೋಪಿಗಳು.

ಮುಂಬೈ ಧಾರಣೆ

ಶೇಂಗಾ 29-6-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	8950-9000
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1360 (1360)
ಒಂದು ವಾರದ ಡೆಲಿವರಿ	1355 (1355)
ಸೋಯಾ ಕಚ್ಚಾ	1235 (1240)
ಪಾಮ್ ವಾರದ ಡೆಲಿವರಿ	1163 (1153)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,500 (47,000)
ಬೆಳ್ಳಿ ಕೆ.ಜಿ 67,700 (68,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42000
ಹಳತು	42500-52000
ಚಿತ್ರದುರ್ಗ	
ಆಪಿ	41919-42359
ಬೆಟ್ಟೆ	34129-34579
ಕೆಂಪುಗೋಟು	27909-28310
ರಾಶಿ	41439-41869
ಸಿದ್ದಾಪುರ	
ಬಿಳಿಗೋಟು	26199-32669
ಚಾಲಿ	34609-38009
ಕೋಕ	25090-29809
ಕೆಂಪುಗೋಟು	27809-31980
ರಾಶಿ	38599-41599
ತಟ್ಟಿಬೆಟ್ಟೆ	31409-37689
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	325-400
ದ್ವಿತಳಿ (ಬಿ.ವಿ)	312-486

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11400	11100	11000	162.25 ಸೆಂಟ್ಸ್
ಎಸಿ	5000	4500	4350	
ಆರ್‌ಪಿ	5500	5600	5550	
ಆರ್‌ಸಿ	3000	3200	3300	1731 ಡಾಲರ್ಸ್

ಭಾರತ ಭೂಪಟ ತಿರುಚಿದ ವಿವಾದ; ಮಕ್ಕಳ ಅಶ್ಲೀಲ ಚಿತ್ರ ಪ್ರಕಟಿಸಿದ ಪ್ರಕರಣ

ಟ್ವಿಟರ್ ವಿರುದ್ಧ 3 ರಾಜ್ಯಗಳಲ್ಲಿ ದೂರು

ನೋಯ್ಡಾ/ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣ ಟ್ವಿಟರ್ ವಿರುದ್ಧ ಮಂಗಳವಾರ ವಿವಿಧ ಕಡೆಗಳಲ್ಲಿ ಎಫ್‌ಐಆರ್ ದಾಖಲಾಗಿವೆ. ಭಾರತದ ತಿರುಚಿದ ಭೂಪಟ ಪ್ರಕಟಿಸಿದ್ದಕ್ಕಾಗಿ ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶದಲ್ಲಿ ಎಫ್‌ಐಆರ್ ದಾಖಲಾಗಿದ್ದರೆ, ಮಕ್ಕಳ ಅಶ್ಲೀಲ ಚಿತ್ರಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಜಾಲತಾಣದಲ್ಲಿ ಭಾರತದ ಭೂಪಟ ತಪ್ಪಾಗಿ ತೋರಿಸಿದ್ದನ್ನು ಪ್ರಶ್ನಿಸಿ ಬಜರಂಗದಳದ ಪದಾಧಿಕಾರಿಯೊಬ್ಬರು ನೀಡಿದ ದೂರಿನ ಆಧಾರದಲ್ಲಿ ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಪೊಲೀಸರು ಟ್ವಿಟರ್ ಇಂಡಿಯಾ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಟ್ವಿಟರ್ ಸಂಸ್ಥೆಯು ಇತ್ತೀಚೆಗೆ ತನ್ನ ಜಾಲತಾಣದಲ್ಲಿ ಪ್ರಕಟಿಸಿದ್ದ ವಿಶ್ವ ಭೂಪಟದಲ್ಲಿ, ಕೇಂದ್ರಾಡಳಿತ ಪ್ರದೇಶಗಳಾದ ಲಡಾಖ್ ಮತ್ತು ಜಮ್ಮು–ಕಾಶ್ಮೀರವನ್ನು ಭಾರತದಿಂದ ಪ್ರತ್ಯೇಕಿಸಿ ತೋರಿಸಿತ್ತು. ಇದಕ್ಕೆ ಭಾರಿ ಆಕ್ರೋಶ ವ್ಯಕ್ತವಾದುದಲ್ಲದೆ ಈ ಸಂಸ್ಥೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನೆಟ್ಟಿಗರು ಒತ್ತಾಯಿಸಿದ್ದರು. ಇದಾಗುತ್ತಿದ್ದಂತೆ ಟ್ವಿಟರ್ ಆ ಭೂಪಟವನ್ನು ತನ್ನ ಜಾಲತಾಣದಿಂದ ತೆಗೆದುಹಾಕಿತ್ತು.

‘ಟ್ವಿಟರ್‌ನ ಈ ನಡೆಯು ಕಾಕತಾಳೀಯವಲ್ಲ. ಈ ಮೂಲಕ ಸಂಸ್ಥೆಯು ಭಾರತೀಯರ ಭಾವನೆಗಳನ್ನು ಗಾಸಿಗೊಳಿಸಿದೆ’ ಎಂದು ಬಜರಂಗದಳದ ಸಂಚಾಲಕ ಪ್ರವೀಣ್ ಭಟ್ಟಿ ದೂರಿನಲ್ಲಿ ಹೇಳಿದ್ದಾರೆ.

ಟ್ವಿಟರ್ ಇಂಡಿಯಾ ಕಾರ್ಯನಿರ್ವಾಹಕ ನಿರ್ದೇಶಕ (ಎಂಡಿ) ಮನೀಶ್ ಮಹೇಶ್ವರಿ ಮತ್ತು ನ್ಯೂಸ್ ಪಾರ್ಟನರ್‌ಶಿಪ್ ಮುಖ್ಯಸ್ಥ ಅಮೃತಾ ತ್ರಿಪಾಠಿ ವಿರುದ್ಧ ಐಪಿಸಿ ಕಲಂ 505 (2) (ಸಾರ್ವಜನಿಕ ಕಿಡಿಗೇಡಿತನ) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ ಕಲಂ 74 (ಮೋಸದ ಉದ್ದೇಶಕ್ಕಾಗಿ ಪ್ರಕಟಣೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ತಪ್ಪು ಭೂಪಟ ಪ್ರಕಟಿಸಿದ್ದಕ್ಕಾಗಿ ಮಧ್ಯಪ್ರದೇಶ ಸರ್ಕಾರವೂ ಟ್ವಿಟರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಂದಾಗಿದೆ.

‘ದೀರ್ಘ ಕಾಲದಿಂದ ದೇಶದ ವಿರುದ್ಧ ಸತತವಾಗಿ ಏನೋ ನಡೆಯುತ್ತಿದೆ. ಕೆಲವೊಮ್ಮೆ ಭಾರತ ಮಾತೆಯ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಲಾಗುತ್ತದೆ, ಇನ್ನೂ ಕೆಲವೊಮ್ಮೆ ತಿರುಚಿದ ನಕ್ಷೆಯನ್ನು ಟ್ವಿಟರ್‌ನಲ್ಲಿ ಪ್ರಕಟಿಸಲಾಗುತ್ತಿದೆ. ಇಂಥ ಘಟನೆಗಳನ್ನು ಲಘುವಾಗಿ ಪರಿಗಣಿಸಲಾಗದು’ ಎಂದು ಮಧ್ಯಪ್ರದೇಶದ ಗೃಹ ಸಚಿವ ನರೋತ್ತಮ ಮಿಶ್ರಾ ಟ್ವೀಟ್ ಮಾಡಿದ್ದಾರೆ.

ಘಟನೆಯ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಡಿಜಿಪಿ ವಿವೇಕ್ ಜೊಹರಿ ಅವರಿಗೆ ಸೂಚಿಸಲಾಗಿದೆ ಎಂದು ಮಿಶ್ರಾ ಹೇಳಿದ್ದಾರೆ.

ವಿಚಾರಣೆ ಮುಂದೂಡಿದ ಹೈಕೋರ್ಟ್

ಉತ್ತರ ಪ್ರದೇಶದಲ್ಲಿ ವೃದ್ಧ ಮುಸ್ಲಿಂ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ್ದು ಎನ್ನಲಾದ ವಿಡಿಯೊ ಅನ್ನು ಪ್ರಸಾರ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಾಜಿಯಾಬಾದ್ ಪೊಲೀಸ್ ಠಾಣೆಯಲ್ಲಿ ಟ್ವಿಟರ್ ಇಂಡಿಯಾ ಸಂಸ್ಥೆಯ ಆಡಳಿತ ನಿರ್ದೇಶಕ ಮನೀಶ್ ಮಹೇಶ್ವರಿ ವಿರುದ್ಧ ದಾಖಲಾಗಿರುವ ದೂರಿನ ವಿಚಾರಣೆಯನ್ನು ಕರ್ನಾಟಕ ಹೈಕೋರ್ಟ್ ಜುಲೈ 5ಕ್ಕೆ ಮುಂದೂಡಿದೆ.

ಉತ್ತರ ಪ್ರದೇಶ ಪೊಲೀಸರ ಪರವಾಗಿ ಹಾಜರಾಗಿದ್ದ ವಕೀಲ ಪಿ. ಪ್ರಸನ್ನ ಕುಮಾರ್ ಅವರು ಮಾಡಿರುವ ವಿನಂತಿಯ ಮೇರೆಗೆ, ನ್ಯಾಯಮೂರ್ತಿ ಜಿ. ನರೇಂದ್ರ ಅವರ ಪೀಠವು ವಿಚಾರಣೆಯನ್ನು ಮುಂದೂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜೂನ್ 24ರಂದು ಪೊಲೀಸ್ ಠಾಣೆಗೆ ಹಾಜರಾಗಿ ಹೇಳಿಕೆಯನ್ನು ದಾಖಲಿಸುವಂತೆ, ಬೆಂಗಳೂರು ನಿವಾಸಿಯಾಗಿರುವ ಮನೀಶ್ ಅವರಿಗೆ ಗಾಜಿಯಾಬಾದ್ ಪೊಲೀಸರು ನೋಟಿಸ್ ನೀಡಿದ್ದರು. ಇದನ್ನು ಪ್ರಶ್ನಿಸಿ ಮನೀಶ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ಆಗ ಇವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ನ್ಯಾಯಾಲಯವು ಪೊಲೀಸರಿಗೆ ಸೂಚಿಸಿತ್ತು. ಜತೆಗೆ, ಪೊಲೀಸರು ಮನೀಶ್ ಅವರನ್ನು ತನಿಖೆಗೆ ಒಳಪಡಿಸಲು ಇಚ್ಛಿಸುವುದಾದರೆ ವರ್ಚುವಲ್ ಮಾಧ್ಯಮದಲ್ಲಿ ಅದನ್ನು ನಡೆಸಬಹುದು ಎಂದಿತ್ತು.

ಸುಪ್ರೀಂಗೆ ಮೊರೆ: ಮನೀಶ್ ಅವರಿಗೆ ಬಂಧನದಿಂದ ರಕ್ಷಣೆ ನೀಡಿರುವ ಕರ್ನಾಟಕ ಹೈಕೋರ್ಟ್‌ನ ಕ್ರಮವನ್ನು ಪ್ರಶ್ನಿಸಿ ಉತ್ತರಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆಹೋಗಿದೆ. ತನಗೆ ನೋಟಿಸ್ ನೀಡದೆಯೇ ಹೈಕೋರ್ಟ್ ಈ ಆದೇಶ ನೀಡಿದೆ ಎಂದು ಉತ್ತರಪ್ರದೇಶ ಪೊಲೀಸರು ಹೇಳಿದ್ದಾರೆ.

ಇದರ ಜತೆಯಲ್ಲೇ, ಯಾವುದೇ ಆದೇಶವನ್ನು ನೀಡುವ ಮುನ್ನ ತನ್ನನ್ನೂ ವಿಚಾರಣೆಗೆ ಒಳಪಡಿಸಬೇಕು ಎಂಬ ಮನವಿಪತ್ರವನ್ನು ಮನೀಶ್ ಅವರೂ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದಾರೆ.

ಮಕ್ಕಳ ಅಶ್ಲೀಲ ಚಿತ್ರ: ದೆಹಲಿ ಪೊಲೀಸರಿಂದ ದೂರು ದಾಖಲು

ಚುಟುಕು ಸಂದೇಶ ತಾಣ ಟ್ವಿಟರ್‌ನಲ್ಲಿಮಕ್ಕಳ ಅಶ್ಲೀಲ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡಲಾಗುತ್ತಿದೆ ಎಂದು ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ಆಯೋಗ (ಎನ್‌ಸಿಪಿಸಿಆರ್) ನೀಡಿದ ದೂರಿನ ಆಧಾರದಲ್ಲಿ ದೆಹಲಿ ಪೊಲೀಸರು ಟ್ವಿಟರ್ ಇಂಡಿಯಾ ಸಂಸ್ಥೆಯ ವಿರುದ್ಧ ಮಂಗಳವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ (ಪೊಕ್ಸೊ) ಕಾಯ್ದೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಗಳ ಅಡಿಯಲ್ಲಿ ಟ್ವಿಟರ್ ಇಂಕ್ ಹಾಗೂ ಟ್ವಿಟರ್ ಇಂಡಿಯಾ ಪ್ರೈ.ಲಿ. ಸಂಸ್ಥೆಯ ವಿರುದ್ಧ ದೂರು ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟ್ವಿಟರ್‌ನಲ್ಲಿ ಅಶ್ಲೀಲ ಚಿತ್ರಗಳ ವೀಕ್ಷಣೆ ಹಾಗೂ ಪ್ರದರ್ಶನಕ್ಕೆ ಅವಕಾಶ ಲಭ್ಯವಾಗುತ್ತಿದೆ ಎಂದು ಮೇ 29ರಂದೇ ದೂರು ನೀಡಿದ್ದರೂ ಈ ಸಾಮಾಜಿಕ ಜಾಲತಾಣದ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ ಎಂದು ದೆಹಲಿ ಸೈಬರ್ ಪೊಲೀಸ್ ವಿಭಾಗದ ಡಿಸಿಪಿ ಅನೀಶ್ ರಾಯ್ ಅವರನ್ನು ಕೆಲವು ದಿನಗಳ ಹಿಂದೆ ಎನ್‌ಸಿಪಿಸಿಆರ್ ಪ್ರಶ್ನಿಸಿತ್ತು.

ಫೇಸ್‌ಬುಕ್, ಗೂಗಲ್‌ಗೆ ಸೂಚನೆ

ನ್ಯಾಯಾಲಯದ ಆದೇಶ ಸರ್ಕಾರದ ಸೂಚನೆ ಪಾಲಿಸಿ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮ ದುರುಪಯೋಗದ ಕುರಿತು ಫೇಸ್‌ಬುಕ್ ಮತ್ತು ಗೂಗಲ್ ಪ್ರತಿನಿಧಿಗಳು ಮಂಗಳವಾರ ಮಾಹಿತಿ ತಂತ್ರಜ್ಞಾನದ ಸಂಸದೀಯ ಸ್ಥಾಯಿ ಸಮಿತಿಯ ಮುಂದೆ ಹಾಜರಾಗಿದ್ದು, ಹೊಸ ಐ.ಟಿ ನಿಯಮಗಳು, ಸರ್ಕಾರದ ಸೂಚನೆಗಳು ಮತ್ತು ನ್ಯಾಯಾಲಯದ ಆದೇಶಗಳನ್ನು ಪಾಲಿಸುವಂತೆ ಈ ಸಂಸ್ಥೆಗಳಿಗೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಸಂಸದ ಶಶಿ ತರೂರ್ ಅವರ ಅಧ್ಯಕ್ಷತೆಯ ಸಂಸದೀಯ ಸಮಿತಿಯು ಫೇಸ್‌ಬುಕ್ ಮತ್ತು ಗೂಗಲ್ ಅಧಿಕಾರಿಗಳಿಗೆ ಖುದ್ದು ಹಾಜರಾಗಲು ನೋಟಿಸ್ ನೀಡಿತ್ತು.

ಫೇಸ್‌ಬುಕ್‌ನ ಭಾರತೀಯ ಸಾರ್ವಜನಿಕ ನೀತಿ ನಿರ್ದೇಶಕ ಶಿವನಾಥ್ ತುಕ್ರಲ್ ಮತ್ತು ಸಾಮಾನ್ಯ ಸಲಹೆಗಾರರಾದ ನಮ್ರತಾ ಸಿಂಗ್ ಅವರು ಮಂಗಳವಾರ ಸಮಿತಿಯ ಮುಂದೆ ಹಾಜರಾದರು.

ಫೇಸ್‌ಬುಕ್‌ನ ಭಾರತೀಯ ಸಾರ್ವಜನಿಕ ನೀತಿ ನಿರ್ದೇಶಕ ಶಿವನಾಥ್ ತುಕ್ರಲ್ ಮತ್ತು ಸಾಮಾನ್ಯ ಸಲಹೆಗಾರರಾದ ನಮ್ರತಾ ಸಿಂಗ್, ಗೂಗಲ್ ಪ್ರತಿನಿಧಿಗಳಾಗಿ ಅದರ ಭಾರತೀಯ ಮುಖ್ಯಸ್ಥ (ಸರ್ಕಾರಿ ವ್ಯವಹಾರಗಳು ಮತ್ತು ಸಾರ್ವಜನಿಕ ನೀತಿ) ಅಮನ್ ಜೈನ್ ಮತ್ತು ನಿರ್ದೇಶಕರಾದ (ಕಾನೂನು) ಗೀತಾಂಜಲಿ ದುಗ್ಗಲ್ ಸಮಿತಿ ಮುಂದೆ ಹಾಜರಾಗಿದ್ದರು.

ಅಸ್ತಿತ್ವದಲ್ಲಿರುವ ದತ್ತಾಂಶ ಸಂರಕ್ಷಣೆ ಮತ್ತು ಗೌಪ್ಯತೆ ನೀತಿಯ ಕಾರ್ಯವಿಧಾನದಲ್ಲಿ ಲೋಪದೋಷಗಳಿವೆ ಎಂದು ಈ ಸಂಸ್ಥೆಗಳ ಪ್ರತಿನಿಧಿಗಳಿಗೆ ತಿಳಿಸಲಾಗಿದೆ ಮತ್ತು ಅವರ ಬಳಕೆದಾರರ ದತ್ತಾಂಶ ಗೋಪ್ಯತೆ ಮತ್ತು ದತ್ತಾಂಶ ಸುರಕ್ಷತೆ ಕಾಪಾಡಲು ಕಟ್ಟುನಿಟ್ಟಿನ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲು ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ ಮಹಿಳಾ ಬಳಕೆದಾರರ ಗೋಪ್ಯತೆ ಬಗ್ಗೆ ಅಧ್ಯಕ್ಷ ತರೂರ್ ಕಳವಳ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಹಲವಾರು ಮಹಿಳಾ ಸಂಸದರಿಂದಲೂ ದೂರುಗಳು ಬಂದಿವೆ ಎಂದು ಅವರು ಹೇಳಿದರು ಎಂದು ಮೂಲಗಳು ತಿಳಿಸಿವೆ.

ನಾಗರಿಕರ ಹಕ್ಕುಗಳನ್ನು ಕಾಪಾಡುವುದು ಮತ್ತು ಸಾಮಾಜಿಕ ಮಾಧ್ಯಮ/ ಆನ್‌ಲೈನ್ ವೇದಿಕೆಗಳ ದುರುಪಯೋಗ ತಡೆಯುವ ಸಂಬಂಧ ಸಂಸದೀಯ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು.

ಜು. 31ರೊಳಗೆ ‘ಒಂದು ರಾಷ್ಟ್ರ, ಒಂದು ಪಡಿತರ ಚೀಟಿ’ ಯೋಜನೆ ಜಾರಿ: ಸುಪ್ರೀಂ ನಿರ್ದೇಶನ

ವಲಸೆ ಕಾರ್ಮಿಕರಿಗೆ ಉಚಿತ ಪಡಿತರ

ನವದೆಹಲಿ (ಪಿಟಿಐ): ‘ದೇಶದಲ್ಲಿ ಕೋವಿಡ್–19 ಪರಿಸ್ಥಿತಿ ಇರುವವರೆಗೂ ವಲಸೆ ಕಾರ್ಮಿಕರಿಗೆ ಉಚಿತವಾಗಿ ವಿತರಿಸಲು ಪಡಿತರವನ್ನು ಒದಗಿಸಬೇಕು’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಅಲ್ಲದೆ, ‘ಒಂದು ದೇಶ, ಒಂದು ಪಡಿತರ ಚೀಟಿ’ ಯೋಜನೆಯನ್ನು ಜುಲೈ 31ರ ಒಳಗೆ ಅನುಷ್ಠಾನಗೊಳಿಸಬೇಕು ಎಂದೂ ಇದೇ ಸಂದರ್ಭದಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ‘ಸುಪ್ರಿಂ’ ನಿರ್ದೇಶಿಸಿತು.



ವಲಸೆ ಕಾರ್ಮಿಕರ ಸಂಕಷ್ಟಗಳನ್ನು ಕುರಿತು ಮೂವರು ಕಾರ್ಯಕರ್ತರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಗೆ ಸಂಬಂಧಿಸಿ ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಮತ್ತು ಎಂ.ಆರ್. ಶಾ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿತು.

ಕೋವಿಡ್ ಎರಡನೆ ಅಲೆಯಲ್ಲಿ ದೇಶದ ವಿವಿಧೆಡೆ ಲಾಕ್‌ಡೌನ್ ಮತ್ತು ಕರ್ಫ್ಯೂ ಕಾರಣದಿಂದ ಸಂಕಷ್ಟಕ್ಕೀಡಾಗಿರುವ ವಲಸೆ ಕಾರ್ಮಿಕರಿಗೆ ಆಹಾರ ಭದ್ರತೆ, ಹಣ ವರ್ಗಾವಣೆ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳ ಜಾರಿಗೆ ಒತ್ತು ನೀಡುವಂತೆ ಕೇಂದ್ರ, ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದ್ದರು.

‘ಒಂದು ದೇಶ, ಒಂದು ಪಡಿತರ ಚೀಟಿ’ ಬಡವರ ಕಲ್ಯಾಣಕ್ಕಾಗಿ ಇರುವ ಕಾರ್ಯಕ್ರಮ. ಇದು, ವಲಸೆ ಕಾರ್ಮಿಕರಿಗೆ ತಮ್ಮ ಕೆಲಸದ ಸ್ಥಳದಲ್ಲಿಯೇ ಪಡಿತರ ಪಡೆಯಲು ನೆರವಾಗಲಿದೆ. ಅಲ್ಲದೆ, ಇದು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರು ವಿವಿಧ ಕಲ್ಯಾಣ ಯೋಜನೆಗಳ ಅನುಕೂಲ ಪಡೆಯಲು ಎನ್‌ಐಸಿ ನೆರವಿನಲ್ಲಿ ಪ್ರತ್ಯೇಕ ವೆಬ್‌ಸೈಟ್ ಅನ್ನು ಜುಲೈ 31ರ ಒಳಗೆ ಆರಂಭಿಸಬೇಕು’ ಎಂದೂ ಪೀಠ ಕೇಂದ್ರಕ್ಕೆ ಸ್ಪಷ್ಟ ಸೂಚನೆ ನೀಡಿತು.

ವಲಸೆ ಕಾರ್ಮಿಕರಿಗೆ ಉಚಿತವಾಗಿ ಪಡಿತರವನ್ನು ವಿತರಿಸಲು ಸೂಕ್ತ ಕಾರ್ಯಕ್ರಮ ರೂಪಿಸಬೇಕು. ಸಮುದಾಯ ಭೋಜನ ಶಾಲೆಗಳನ್ನು ನಡೆಸಬೇಕು. ಇವು, ಕೋವಿಡ್ ಪರಿಸ್ಥಿತಿ ಇರುವವರೆಗೂ ಮುಂದುವರಿಯಬೇಕು ಎಂದೂ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

ಎಲ್ಲ ಗುತ್ತಿಗೆದಾರರು ಮತ್ತು ಸಂಸ್ಥೆಗಳನ್ನು ಅಂತರ ರಾಜ್ಯ ವಲಸೆ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ಸ್ಥಿತಿ) ಕಾಯ್ದೆ 1979ರ ಅಡಿ ನೋಂದಣಿ ಮಾಡಬೇಕು ಎಂದು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶಿಸಿದೆ.

ಕಾರ್ಯಕರ್ತರಾದ ಅಂಜಲಿ ಭಾರಧ್ವಾಜ್, ಹರ್ಷ ಮಂದೇರ್ ಮತ್ತು ಜಗದೀಪ್ ಚೋಕರ್ ಅವರು ಅರ್ಜಿ ಸಲ್ಲಿಸಿದ್ದರು. ಪೀಠವು ಜೂನ್ 11ರಂದು ತನ್ನ ತೀರ್ಪು ಕಾಯ್ದಿರಿಸಿತ್ತು.

ಜುಲೈ 2ಕ್ಕೆ ಫೇಸ್‌ಬುಕ್ ಮಧ್ಯಂತರ ವರದಿ

ನವದೆಹಲಿ (ಪಿಟಿಐ): 'ನೂತನ ಮಾಹಿತಿ ತಂತ್ರಜ್ಞಾನ ನಿಮಗಳ ಅನ್ವಯ ಮೇ 15ರಿಂದ ಜೂನ್ 15ರವರೆಗೆ ಫೇಸ್‌ಬುಕ್‌ನಿಂದ ತೆಗೆದುಹಾಕಿರುವ ಪೋಸ್ಟ್‌ಗಳಿಗೆ ಸಂಬಂಧಿಸಿದ ಮಧ್ಯಂತರ ವರದಿಯನ್ನು ಜುಲೈ 2ರಂದು ಸಲ್ಲಿಸುತ್ತೇವೆ' ಎಂದು ಫೇಸ್‌ಬುಕ್ ಹೇಳಿದೆ.

ನೂತನ ನಿಯಮಗಳ ಅನ್ವಯ ತಿಂಗಳಿಗೊಮ್ಮೆ ಇಂತಹ ವರದಿಯಲ್ಲಿ ಎಲ್ಲಾ ಸಾಮಾಜಿಕ ಜಾಲತಾಣಗಳು ಸಲ್ಲಿಸುವುದು ಕಡ್ಡಾಯ. ಆ ಅವಧಿಯಲ್ಲಿ ಬಂದ ದೂರುಗಳು, ಆಕ್ಷೇಪಗಳು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸಬೇಕು.

'ಮೇ 15ರಿಂದ ಜೂನ್ 15ರವರೆಗೆ ಬಂದ ದೂರುಗಳು, ಆಕ್ಷೇಪಗಳು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಅಂತಿಮ ವರದಿಯಲ್ಲಿ ಜುಲೈ 15ರಂದು ಸಲ್ಲಿಸುತ್ತೇವೆ. ಪರಿಶೀಲನಾ ಸಮಿತಿ ತೆಗೆದುಕೊಂಡ ಕ್ರಮಗಳು ಮತ್ತು ಸ್ವಯಂಚಾಲಿತ ವ್ಯವಸ್ಥೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅಂತಿಮ ವರದಿಯಲ್ಲಿ ಮಾಹಿತಿ ಇರಲಿದೆ' ಎಂದು ಫೇಸ್‌ಬುಕ್ ಹೇಳಿದೆ. 'ಜುಲೈ 15ರಂದು ಸಲ್ಲಿಸಲಿರುವ ವರದಿಯಲ್ಲಿ ವಾಟ್ಸ್‌ಆ್ಯಪ್‌ಗೆ ಸಂಬಂಧಿಸಿದ ಮಾಹಿತಿಯೂ ಇರಲಿದೆ' ಎಂದು ವಾಟ್ಸ್‌ಆ್ಯಪ್‌ನ ಮಾತೃಕಂಪನಿಯಾದ ಫೇಸ್‌ಬುಕ್ ಹೇಳಿದೆ.

ಫೇಸ್‌ಬುಕ್ ಭಾರತದಲ್ಲಿ 41 ಕೋಟಿ ಮತ್ತು ವಾಟ್ಸ್‌ಆ್ಯಪ್ 53 ಕೋಟಿ ಬಳಕೆದಾರರನ್ನು ಹೊಂದಿವೆ.



ಜನಸಂದಣಿ... ಪಾಟ್ನಾದಲ್ಲಿ ಮಂಗಳವಾರ ಕೋವಿಡ್ 19 ಲಾಕ್‌ಡೌನ್ ಮಾರ್ಗಸೂಚಿ ನಿರ್ಬಂಧಗಳು ಸಡಿಲವಾಗುತ್ತಿದ್ದಂತೆ ಮಾರುಕಟ್ಟೆಯಲ್ಲಿ ಜನಸಂದಣಿ ಕಂಡುಬಂತು

ಪಿಟಿಐ ಚಿತ್ರ

ಮೋದಿ ನೇತೃತ್ವದಲ್ಲಿ ಕೇಂದ್ರ ಮಂತ್ರಿ ಪರಿಷತ್ ಸಭೆ ಇಂದು



ನರೇಂದ್ರ ಮೋದಿ

ನವದೆಹಲಿ: ‘ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಸಂಜೆ ಕೇಂದ್ರ ಮಂತ್ರಿ ಪರಿಷತ್ ಸಭೆ ಕರೆದಿದ್ದು, ಕೋವಿಡ್ ಪರಿಸ್ಥಿತಿ ಮತ್ತು ಕೆಲವು ಸಚಿವಾಲಯಗಳ ಕಾರ್ಯವೈಖರಿ ಬಗ್ಗೆ ಪರಿಶೀಲಿಸಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಈ ಸಭೆಯು ವರ್ಚುವಲ್ ರೂಪದಲ್ಲಿ ನಡೆಯಲಿದ್ದು, ಮೋದಿ ಅಧ್ಯಕ್ಷತೆ ವಹಿಸಲಿದ್ದಾರೆ. ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನಾಗರಿಕ ವಿಮಾನಯಾನ ಸಚಿವಾಲಯ, ದೂರ ಸಂಪರ್ಕ ಸಚಿವಾಲಯಗಳ ಕಾರ್ಯಗಳನ್ನು ಪರಿಶೀಲಿಸಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ಕೇಂದ್ರ ಸಂಪುಟ ವಿಸ್ತರಣೆ ಅಥವಾ ಪುನರ್‌ರಚನೆ ಬಗ್ಗೆ ಮಾತುಗಳು ಕೇಳಿ ಬರುತ್ತಿರುವ ಬೆನ್ನಲ್ಲೇ ಮಂತ್ರಿ ಪರಿಷತ್ ಸಭೆ ಕರೆದಿರುವುದು ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ.

ವಾರದ ಹಿಂದೆ ಪ್ರಧಾನಿ ನಿವಾಸದಲ್ಲಿ ನಡೆದ ಹಿರಿಯ ಸಚಿವರ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸಹ ಭಾಗವಹಿಸಿದ್ದರು. ಆಗಿನಿಂದಲೂ ಸಂಪುಟ ವಿಸ್ತರಣೆ, ಪುನರ್‌ರಚನೆಯ ಮಾತುಗಳು ಕೇಳಿ ಬರುತ್ತಿವೆ.

‘ಮತ್ತೊಂದು ಪ್ಯಾಕೇಜ್ ಅಲ್ಲ, ಸರ್ಕಾರದ ಮತ್ತೊಂದು ಸುಳ್ಳು’

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದಾಗಿ ಜರ್ಜರಿತಗೊಂಡ ಆರ್ಥಿಕತೆಯ ಪುನಶ್ಚೇತನಕ್ಕಾಗಿ ಕೇಂದ್ರ ಸರ್ಕಾರ ಪ್ರಕಟಿಸಿರುವ ಹೊಸ ಪ್ಯಾಕೇಜ್‌ನಿಂದ ಸಾರ್ವಜನಿಕರ ನಿತ್ಯ ಜೀವನಕ್ಕೆ ಯಾವುದೇ ಪ್ರಯೋಜನವಿಲ್ಲ ಎಂದು ಹೇಳಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ‘ಇದು ಪ್ಯಾಕೇಜ್ ಅಲ್ಲ, ಸರ್ಕಾರ ಜನರಿಗೆ ಹೇಳಿರುವ ಮತ್ತೊಂದು ಸುಳ್ಳು’ ಎಂದು ಆರೋಪಿಸಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರ್ಥಿಕತೆಯ ಪುನಶ್ಚೇತನಕ್ಕಾಗಿ ಸೋಮವಾರ ಮತ್ತೊಂದು ಆರ್ಥಿಕ ನೆರವಿನ ಪ್ಯಾಕೇಜ್ ಘೋಷಿಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ರಾಹುಲ್ ಗಾಂಧಿ, ‘ದೇಶದ ಯಾವುದೇ ಕುಟುಂಬವು ತಮ್ಮ ಜೀವನ ನಿರ್ವಹಣೆ, ಆಹಾರ, ಔಷಧ, ಮಗುವಿನ ಶಾಲಾ ಶುಲ್ಕಕ್ಕಾಗಿ ಹಣಕಾಸು ಸಚಿವರು ಘೋಷಿಸಿರುವ ಈ ‘ಆರ್ಥಿಕ ಪ್ಯಾಕೇಜ್’ನ ಹಣವನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.



ರಾಹುಲ್ ಗಾಂಧಿ

ಕಾಂಗ್ರೆಸ್‌ನ ಹಿರಿಯ ನಾಯಕ ಪಿ. ಚಿದಂಬರಂ ಅವರೂ ಈ ಪ್ಯಾಕೇಜ್ ಕುರಿತು ಟೀಕೆ ಮಾಡಿದ್ದಾರೆ. ‘ಪ್ರಸ್ತುತ ಉಂಟಾಗಿರುವ ಬಿಕ್ಕಟ್ಟಿಗೆ ನಿಜವಾಗಿಯೂ ಪರಿಹಾರ ಎಂದರೆ, ಜನರ ಕೈಯಲ್ಲಿ ಅದರಲ್ಲೂ ವಿಶೇಷವಾಗಿ ಬಡ ಮತ್ತು ಮಧ್ಯಮವರ್ಗದ ಜನರ ಕೈಗೆ ಹಣ ನೀಡಿ, ವಹಿವಾಟು ನಡೆಯುವಂತಾಗಬೇಕು‘ ಎಂದು ಹೇಳಿದರು.

‘ಕೆಲವು ಪ್ರಾಥಮಿಕ ಸತ್ಯಗಳೇನೆಂದರೆ, ‘ಸಾಲ ಎನ್ನುವುದೇ ಅಧಿಕ ಖರ್ಚು ಎಂದರ್ಥ. ಯಾವುದೇ ಬ್ಯಾಂಕಿನವರು ಸಾಲ ಆಧಾರಿತ ವ್ಯವಹಾರ ನಡೆಸುವವರಿಗೆ ಸಾಲ ನೀಡುವುದಿಲ್ಲ‘ ಎಂದು ಚಿದಂಬರಂ ಟ್ವೀಟ್ ಮಾಡಿದ್ದಾರೆ.

ಸಾಲದ ಹೊರೆ ಅಥವಾ ನಗದು ಕೊರತೆಯಿಂದ ಬಳಲುತ್ತಿರುವ ವ್ಯವಹಾರಗಳಿಗೆ ಹೆಚ್ಚಿನ ಸಾಲ ಬೇಡ. ಅವರಿಗೆ ಸಾಲವಲ್ಲದ ಬಂಡವಾಳ ಬೇಕು‘ ಎಂದು ಚಿದಂಬರಂ ಸರಣಿ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಯೂರೊ ಕಪ್: ಎಂಟರಘಟ್ಟಕ್ಕೆ ಇಂಗ್ಲೆಂಡ್

ಜರ್ಮನಿ ಪರಾಭವ; ಪೆನಾಲ್ಟಿ ಶೂಟೌಟ್ ಗೆದ್ದ ಸ್ವಿಟ್ಜರ್ಲೆಂಡ್ ಕ್ವಾರ್ಟರ್‌ಫೈನಲ್‌ಗೆ

ಲಂಡನ್ (ಎಪಿ): ಜರ್ಮನಿ ತಂಡದ ಸವಾಲು ಮೀರಿದ ಇಂಗ್ಲೆಂಡ್ ತಂಡವು ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು.


ಮಂಗಳವಾರ ಇಲ್ಲಿನ ವೆಂಬ್ಲಿ ಕ್ರೀಡಾಂಗಣದಲ್ಲಿ ನಡೆದ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಆತಿಥೇಯ ತಂಡಕ್ಕೆ 2–0 ಅಂತರದ ಜಯ ಒಲಿಯಿತು.

75ನೇ ನಿಮಿಷದಲ್ಲಿ ಗೋಲು ದಾಖಲಿಸಿದ ರಹೀಂ ಸ್ಟರ್ಲಿಂಗ್ ಇಂಗ್ಲೆಂಡ್ ಜಯಕ್ಕೆ ಮುನ್ನುಡಿ ಬರೆದರು. ನಾಯಕ ಹ್ಯಾರಿ ಕೇನ್ 86ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ವಿಶ್ವ ಚಾಂಪಿಯನ್ ಫ್ರಾನ್ಸ್‌ಗೆ ಆಘಾತ: ಬುಕಾರೆಸ್ಟ್‌ನಲ್ಲಿ ಸೋಮವಾರ ತಡರಾತ್ರಿ ನಡೆದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್‌ನ ಗೋಲ್‌ಕೀಪರ್ ಯಾನ್ ಸೋಮರ್ ತಮ್ಮ ತಂಡಕ್ಕೆ ಆಪದ್ಬಾಂಧವನಾದರು. ಕ್ವಾರ್ಟರ್‌ಫೈನಲ್‌ಗೆ ತಂಡವು ಪ್ರವೇಶಿಸಲು ಕಾರಣರಾದರು.

ಫ್ರಾನ್ಸ್ ತಂಡದ ಖ್ಯಾತನಾಮ ಆಟಗಾರ ಕಿಲಿಯನ್ ಬಾಪೆ ಗೋಲುಗಳಿಕೆಗೆ ಅಡ್ಡಗೋಡೆಯಾದ ಯಾನ್, ಸ್ವಿಸ್ ತಂಡಕ್ಕೆ ನಾಕೌಟ್ ಅವಕಾಶದ ಬಾಗಿಲು ತೆರೆದರು. ಪಂದ್ಯದ ಪೆನಾಲ್ಟಿ ಶೂಟೌಟ್‌ನಲ್ಲಿ ಸ್ವಿಸ್ ಬಳಗವು 5–4ರಿಂದ ವಿಶ್ವ ಚಾಂಪಿಯನ್ ಫ್ರಾನ್ಸ್ ತಂಡವನ್ನು ಮಣಿಸಿತು. ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 3–3ರ ಸಮಬಲ ಸಾಧಿಸಿದ್ದವು. ಫ್ರಾನ್ಸ್ ಪರ ಕರೀಂ ಬೆಂಜೆಮಾ (57, 59ನೇ ನಿಮಿಷ) ಎರಡು ಗೋಲು ದಾಖಲಿಸಿದ್ದರು. ಪಾಲ್ ಪೋಗ್ಬಾ (75ನೇ ನಿ.) ಒಂದು ಬಾರಿ ಕಾಲ್ಚಳಕ ತೋರಿದರು.ಹ್ಯಾರಿಸ್ ಸ್ಟೆಫೊವಿಚ್ (15, 81ನೇ ನಿಮಿಷ) ಮತ್ತು ಮಾರಿಯೊ ಗವ್ರನೊವಿಚ್ (90ನೇ ನಿಮಿಷ) ಸ್ವಿಟ್ಜರ್ಲೆಂಡ್ ತಂಡದ ಪರ ಮಿಂಚಿದ್ದರು.


ಪೆನಾಲ್ಟಿ ಶೂಟೌಟ್‌ನಲ್ಲಿ ಸ್ವಿಟ್ಜರ್ಲೆಂಡ್ 5 ಅವಕಾಶಗಳನ್ನು ಗೋಲುಗಳಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದರೆ, ಫ್ರಾನ್ಸ್ ನಾಲ್ಕು ಗೋಲುಗಳನ್ನು ಮಾತ್ರ ಗಳಿಸಿತು. ಫ್ರಾನ್ಸ್ ತಂಡದ ಐದನೇ ಅವಕಾಶದಲ್ಲಿ ಬಾಪೆ ಕಿಕ್ ಮಾಡಿದ ಚೆಂಡನ್ನು ಗೋಲ್‌ಕೀಪರ್ ಸೋಮರ್ ತಮ್ಮ ಬಲಕ್ಕೆ ನೆಗೆದು ತಡೆದಾಗ ಸ್ವಿಸ್ ಆಟಗಾರರ ಸಂಭ್ರಮ ಮುಗಿಲು ಮುಟ್ಟಿತು.



ಇಂಗ್ಲೆಂಡ್‌ನ ಹ್ಯಾರಿ ಕೇನ್ (ಬಿಳಿ ಪೋಷಾಕು) ಮತ್ತು ಜರ್ಮನಿ ಆಟಗಾರರು ಚೆಂಡಿನ ಮೇಲೆ ಹತೋಟಿ ಸಾಧಿಸಲು ಪೈಪೋಟಿ ನಡೆಸಿದರು– ರಾಯಿಟರ್ಸ್ ಚಿತ್ರ

ಮೆಸ್ಸಿ ದಾಖಲೆ: ಅರ್ಜೆಂಟೀನಾ ಜಯಭೇರಿ

ಕೂಯಾಬ, ಬ್ರೆಜಿಲ್ (ಎಪಿ): ಅರ್ಜೆಂಟೀನಾದ ಖ್ಯಾತ ಆಟಗಾರ ಲಯೊನೆಲ್ ಮೆಸ್ಸಿ ಅವರು ರಾಷ್ಟ್ರೀಯ ತಂಡದ ಪರ ಅತಿ ಹೆಚ್ಚು ಪಂದ್ಯಗಳನ್ನು ಆಡಿದ ದಾಖಲೆ ಬರೆದರು. ಕೋಪಾ ಅಮೆರಿಕ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಅರ್ಜೆಂಟೀನಾ ತಂಡವು 4–1ರಿಂದ ಬೊಲಿವಿಯಾ ಎದುರು ಗೆದ್ದಿತು.



ಲಯೊನೆಲ್ ಮೆಸ್ಸಿ

34 ವರ್ಷದ ಮೆಸ್ಸಿ ಅವರಿಗೆ ಇದು ರಾಷ್ಟ್ರೀಯ ತಂಡದ ಪರ 148ನೇ ಪಂದ್ಯವಾಗಿತ್ತು. ಎರಡು ಗೋಲು (33ನೇ ನಿಮಿಷ ಪೆನಾಲ್ಟಿ ಹಾಗೂ 42ನೇ ನಿ.) ದಾಖಲಿಸಿದ ಅವರು ಪಂದ್ಯವನ್ನು ಸ್ಮರಣೀಯವಾಗಿರಿಸಿಕೊಂಡರು. ಸದ್ಯ ಅವರು ಗಳಿಸಿದ ಗೋಲುಗಳ ಸಂಖ್ಯೆ 75ಕ್ಕೆ ತಲುಪಿದೆ.ಅರ್ಜೆಂಟೀನಾ ಪರ ಅತಿ ಹೆಚ್ಚು ಪಂದ್ಯಗಳಲ್ಲಿ ಕಣಕ್ಕಿಳಿದ ಈ ಹಿಂದಿನ ದಾಖಲೆ ಜೇವಿಯರ್ ಮಚಾರೆನೊ (147) ಅವರ ಹೆಸರಿನಲ್ಲಿತ್ತು.


ಅರ್ಜೆಂಟೀನಾ ತಂಡವು ಶನಿವಾರ ನಡೆಯುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಈಕ್ವೆಡಾರ್ ತಂಡಕ್ಕೆ ಮುಖಾಮುಖಿಯಾಗಲಿದೆ. ಇನ್ನೊಂದು ಪಂದ್ಯದಲ್ಲಿ ಉರುಗ್ವೆ 1–0ಯಿಂದ ಪರಾಗ್ವೆ ತಂಡವನ್ನು ಸೋಲಿಸಿತು.

ವಿಂಬಲ್ಡನ್: ವೀನಸ್‌ಗೆ ಜಯ

ಲಂಡನ್ (ರಾಯಿಟರ್ಸ್/ಎಎಫ್‌ಪಿ): ಐದು ಬಾರಿಯ ಚಾಂಪಿಯನ್ ವೀನಸ್ ವಿಲಿಯಮ್ಸ್ ಅವರು ವಿಂಬಲ್ಡನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಜಯದ ಆರಂಭ ಮಾಡಿದ್ದಾರೆ.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದು ಬಂದಿರುವ ಅಮೆರಿಕದ ಆಟಗಾರ್ತಿ ಮೊದಲ ಸುತ್ತಿನಲ್ಲಿ ಮಂಗಳವಾರ 7-5, 4-6, 6-3ರಿಂದ ರುಮೇನಿಯಾದ ಮಿಹಾಲಾ ಬುಜರ್ನೆಸ್ಕ್ಯು ಅವರನ್ನು ಮಣಿಸಿದರು.

ಟೂರ್ನಿಯಲ್ಲಿ ಭಾಗವಹಿಸಿರುವ ಅತ್ಯಂತ ಹಿರಿಯ ಆಟಗಾರ್ತಿ (41 ವರ್ಷ ವಯಸ್ಸು) ವೀನಸ್ 23ನೇ ಬಾರಿ ವಿಂಬಲ್ಡನ್ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಫೆಬ್ರುವರಿಯಲ್ಲಿ ನಡೆದ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಅವರು ಎರಡನೇ ಸುತ್ತು ಪ್ರವೇಶಿಸಿದ್ದರು. ಆ ಬಳಿಕ ಆಡಿದ ಎಲ್ಲ ಪಂದ್ಯಗಳಲ್ಲೂ ಅವರು ಸೋಲು ಅನುಭವಿಸಿದ್ದರು.



ವೀನಸ್ ವಿಲಿಯಮ್ಸ್

ವೀನಸ್ ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ 90ನೇ ಗ್ರ್ಯಾನ್ ಸ್ಲಾಮ್ ಟೂರ್ನಿಯಲ್ಲಿ ಆಡಿದಂತಾಗಿದೆ. ಅಲ್ಲದೆ ಇದು ವಿಂಬಲ್ಡನ್‌ನಲ್ಲಿ ಅವರಿಗೆ ಒಲಿದ 90ನೇ ಜಯ ಎಂಬುದು ವಿಶೇಷ.

ಮಹಿಳಾ ಸಿಂಗಲ್ಸ್ ವಿಭಾಗದ ಮುಂದಿನ ಪಂದ್ಯದಲ್ಲಿ ಅವರು ಟ್ಯೂನಿಷಿಯಾದ ಆನ್ಸ್ ಜಬೆವುರ್ ಅವರನ್ನು ಎದುರಿಸುವರು.ಮೊದಲ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಜಬೆವುರ್ 6-2, 6-1ರಿಂದ ಸ್ವೀಡನ್‌ನ ರೆಬೆಕಾ ಪೀಟರ್ಸನ್ ಅವರನ್ನು ಮಣಿಸಿದರು. ಇನ್ನೊಂದು ಹಣಾಹಣಿಯಲ್ಲಿ ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೊವಾ 7-5, 6-4ರಿಂದ ಸ್ಲೋವೇನಿಯಾದ ತಮಾರ ಜಿಡಾನ್ಸೆಕ್ ಅವರನ್ನು ಸೋಲಿ ಸಿದರು.

ಅಲೆಕ್ಸ್ ಡಿ ಮಿನೌರ್‌ಗೆ ಆಘಾತ: ವಿಂಬಲ್ಡನ್‌ನಲ್ಲಿ ಮೊದಲ ಬಾರಿ ಕಣಕ್ಕಿಳಿದಿರುವ ಅಮೆರಿಕದ ಯುವ ಆಟಗಾರ ಸೆಬಾಸ್ಟಿಯನ್ ಕೊರ್ಡಾ ಮೊದಲ ಸುತ್ತಿನಲ್ಲಿ 15ನೇ ಕ್ರಮಾಂಕದ, ಅಲೆಕ್ಸ್ ಡಿ ಮಿನೌರ್ ಎದುರು ಜಯಿಸಿದರು.

20 ವರ್ಷದ ಸೆಬಾಸ್ಟಿಯನ್‌ಗೆ ಆಸ್ಟ್ರೇಲಿಯಾ ಆಟಗಾರನ ಎದುರು 6-3, 6-4, 6-7, 7-6ರಿಂದ ಜಯ ಒಲಿಯಿತು.

ಪುರುಷರ ಸಿಂಗಲ್ಸ್ ವಿಭಾಗದ ಮತ್ತೊಂದು ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೆವ್ 6-3, 6-4, 6-1ರಿಂದ ನೆದರ್ಲೆಂಡ್ಸ್‌ನ ಟಾಲನ್ ಗ್ರೀಕ್‌ಸ್ಪೂರ್ ಅವರನ್ನು ಸೋಲಿಸಿದರು.

ಶೌಚಾಲಯದಲ್ಲಿ ಅಡಗಿದ್ದ ಕೈಲ್ ಜೆಮಿಸನ್!

ಲಂಡನ್ (ಪಿಟಿಐ): ಸೌತಾಂಪ್ಟನ್‌ನಲ್ಲಿ ಈಚೆಗೆ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವು ಗೆಲುವಿನ ಗುರಿ ಬೆನ್ನಟ್ಟಿದ್ದ ಇನಿಂಗ್ಸ್‌ನ ಸಂದರ್ಭದಲ್ಲಿ ಬೌಲರ್ ಕೈಲ್ ಜೆಮಿಸನ್ ಶೌಚಾಲಯದಲ್ಲಿ ಅಡಗಿಕೊಂಡಿದ್ದರಂತೆ!

ನ್ಯೂಜಿಲೆಂಡ್‌ನ ವೇಗಿ ಜೆಮಿಸನ್ ಅವರು ಫೈನಲ್‌ನಲ್ಲಿ ಪಂದ್ಯಶ್ರೇಷ್ಠ ಗೌರವ ಗಳಿಸಿದ್ದರು. ತಂಡವು 139 ರನ್‌ಗಳ ಗುರಿ ಬೆನ್ನಟ್ಟಿದ್ದಾಗ ಅತೀವ ಭಾವೋದ್ವೇಗಕ್ಕೆ ಒಳಗಾಗಿದ್ದ ಅವರು ಇನಿಂಗ್ಸ್ ನ್ನು ವೀಕ್ಷಿಸುವ ಬದಲು ಡ್ರೆಸಿಂಗ್ ಕೋಣೆಯ ಶೌಚಾಲಯದಲ್ಲಿ ಹೋಗಿ ಕುಳಿತಿದ್ದರು.



ಕೈಲ್ ಜೆಮಿಸನ್

‘ಆ ಇನಿಂಗ್ಸ್‌ನ ಅವಧಿಯು ನನ್ನ ಪಾಲಿಗೆ ಬಹಳ ಕಠಿಣವಾಗಿತ್ತು. ನಮ್ಮ ಸಹ ಆಟಗಾರರು ಪಿಚ್‌ನಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದರು. ನಾವು ಡ್ರೆಸಿಂಗ್ ರೂಮ್‌ನಲ್ಲಿದ್ದು ಟಿವಿಯಲ್ಲಿ ಪಂದ್ಯ ನೋಡುತ್ತಿದ್ದೆವು. ಆದರೆ ಎರಡು ವಿಕೆಟ್‌ಗಳು ಪತನವಾದಾಗ, ಭಾರತದ ಅಭಿಮಾನಿಗಳ ಉತ್ಸಾಹ ಕಂಡು ಒತ್ತಡ ಹೆಚ್ಚಿತ್ತು’ ಎಂದು ಗೋಲ್ಡ್ ಎಎಂ. ಕಾರ್ಯಕ್ರಮದಲ್ಲಿ ಜೆಮಿಸನ್ ಹೇಳಿದ್ದಾರೆ. ಆ ಪಂದ್ಯವನ್ನು ಜಯಿಸಿದ್ದ ನ್ಯೂಜಿಲೆಂಡ್ ತಂಡವು ವಿಶ್ವ ಟೆಸ್ಟ್ ಚಾಂಪಿಯನ್ ಆಗಿತ್ತು.

‘ಅರ್ಜುನ’ಕ್ಕೆ ಅಂಕಿತಾ, ಪ್ರಜ್ಞೇಶ್ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತರಾದ ಅಂಕಿತಾ ರೈನಾ ಮತ್ತು ಪ್ರಜ್ಞೇಶ್ ಗುಣೇಶ್ವರನ್ ಅವರನ್ನು ಅಖಿಲ ಭಾರತ ಟೆನಿಸ್ ಸಂಸ್ಥೆಯು ಪ್ರತಿಷ್ಠಿತ ಅರ್ಜುನ ಪ್ರಶಸ್ತಿಗೆ ಶಿಫಾರಸು ಮಾಡಿದೆ. ಧ್ಯಾನ್‌ಚಂದ್ ಗೌರವಕ್ಕಾಗಿ ಬಲರಾಮ್ ಸಿಂಗ್ ಮತ್ತು ಎನ್ರಿಕೊ ಪಿಪರ್ನೊ ಅವರ ಹೆಸರುಗಳನ್ನು ಅಂತಿಮಗೊಳಿಸಿದೆ.

ಜಕಾರ್ತ ಮತ್ತು ಪಾಲೆಂಬಾಂಗ್‌ನಲ್ಲಿ ನಡೆದ 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಅಂಕಿತಾ ಮತ್ತು ಪ್ರಜ್ಞೇಶ್ ಇಬ್ಬರೂ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದರು.

ಅಂಕಿತಾ ಈಗ ದೇಶದ ಉನ್ನತ ರ‍್ಯಾಂಕಿಂಗ್‌ನ ಸಿಂಗಲ್ಸ್ (182) ಮತ್ತು ಡಬಲ್ಸ್ (95) ಆಟಗಾರ್ತಿಯಾಗಿದ್ದು, ಮುಂದಿನ ತಿಂಗಳು ನಡೆಯಲಿರುವ ಟೋಕಿಯೊ ಕ್ರೀಡಾಕೂಟದಲ್ಲಿ ಒಲಿಂಪಿಕ್‌ಗೆ ಪದಾರ್ಪಣೆ ಮಾಡಲು ಸಜ್ಜಾಗಿದ್ದಾರೆ.

‘ಈ ವರ್ಷ ನಾವು ಅಂಕಿತಾ ಹಾಗೂ ಪ್ರಜ್ಞೇಶ್ ಅವರನ್ನು ಅರ್ಜುನ ಪ್ರಶಸ್ತಿಗೆ, ಬಲರಾಮ್ ಸಿಂಗ್ ಮತ್ತು ಎನ್ರಿಕೊ ಪಿಪರ್ನೊ ಅವರನ್ನು ಜೀವಮಾನ ಸಾಧನೆಗಾಗಿ ನೀಡುವ ಧ್ಯಾನ್‌ಚಂದ್ ಗೌರವಕ್ಕೆ ಶಿಫಾರಸು ಮಾಡಿದ್ದೇವೆ‘ ಎಂದು ಅಖಿಲ ಭಾರತ ಟೆನಿಸ್ ಸಂಸ್ಥೆಯ (ಎಐಟಿಎ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖೇಲ್‌ರತ್ನಕ್ಕೆ ದ್ಯುತಿ ಚಾಂದ್ ನಾಮನಿರ್ದೇಶನ: ವೇಗದ ಓಟಗಾರ್ತಿ ದ್ಯುತಿ ಚಾಂದ್ ಅವರನ್ನು ಒಡಿಶಾ ಸರ್ಕಾರವು ಪ್ರತಿಷ್ಠಿತ ರಾಜೀವ್ ಗಾಂಧಿ ಖೇಲ್‌ರತ್ನ ಪುರಸ್ಕಾರಕ್ಕೆ ಮಂಗಳವಾರ ಹೆಸರಿಸಿದೆ.

ದ್ಯುತಿ ಅಲ್ಲದೆ ಭಾರತ ಹಾಕಿ ತಂಡದ ಆಟಗಾರ ಬೀರೇಂದ್ರ ಲಾಕ್ರಾ (ಅರ್ಜುನ ಪುರಸ್ಕಾರ), ಹಾಕಿ ಕೋಚ್ ಕಾಲುಚರಣ್ ಚೌಧರಿ (ದ್ರೋಣಾಚಾರ್ಯ), ಮಾಜಿ ಅಥ್ಲೀಟ್ ಅನುರಾಧ ಬಿಸ್ವಾಲ್ (ಧ್ಯಾನ್‌ಚಂದ್) ಅವರ ಹೆಸರುಗಳನ್ನೂ ಸರ್ಕಾರ ಶಿಫಾರಸು ಮಾಡಿದೆ.

ದ್ರೋಣಾಚಾರ್ಯ: ಮೋಟರ್‌ಸ್ಪೋರ್ಟ್ಸ್ ಅಧ್ಯಕ್ಷನ ಹೆಸರು

ಭಾರತದ ಮೋಟರ್‌ಸ್ಪೋರ್ಟ್ಸ್ ಆಡಳಿತ ಮಂಡಳಿ ಎಫ್‌ಎಮ್‌ಎಸ್‌ಸಿಐ, ತನ್ನ ಅಧ್ಯಕ್ಷ ಅಕ್ಬರ್ ಇಬ್ರಾಹಿಂ ಅವರನ್ನು ದ್ರೋಣಾಚಾರ್ಯ ಪ್ರಶಸ್ತಿಗೆ ಮತ್ತು ಚಾಲಕ ಜೆಹಾನ್ ದಾರುವಾಲಾ ಅವರನ್ನು ಅರ್ಜುನ ಪ್ರಶಸ್ತಿಗೆ ಶಿಫಾರಸು ಮಾಡಿದೆ.

ಸುರಕ್ಷಿತವಾಗಿ ಆಯೋಜಿಸುವ ಗುರಿ: ಐಸಿಸಿ

ಅ. 17ರಿಂದ ಯುಎಇಯಲ್ಲಿ ಟಿ20 ವಿಶ್ವಕಪ್ ಟೂರ್ನಿ



ದುಬೈ (ಪಿಟಿಐ): ದುಬೈ (ಪಿಟಿಐ): ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಅಕ್ಟೋಬರ್ 17ರಿಂದ ನವೆಂಬರ್ 14ರವರೆಗೆ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಆಯೋಜನೆಯಾಗಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ಪ್ರಕಟಿಸಿದೆ.

ಈ ಮೊದಲಿನ ವೇಳಾಪಟ್ಟಿಯ ಪ್ರಕಾರ ಟೂರ್ನಿಯು ಭಾರತದಲ್ಲಿ ನಡೆಯಬೇಕಿತ್ತು. ಆದರೆ, ಕೋವಿಡ್ ಕಾರಣದಿಂದಾಗಿ ತಟಸ್ಥ ತಾಣವಾದ ಯುಎಇಯಲ್ಲಿ ನಡೆಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಮ್ಮತಿಸಿದೆ ಎಂದು ಐಸಿಸಿ ತಿಳಿಸಿದೆ. 2016ರಲ್ಲಿ ಭಾರತವು ಟಿ20 ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಿತ್ತು.

ಟೂರ್ನಿಯನ್ನು ಸುರಕ್ಷಿತವಾಗಿ ಆಯೋಜಿಸುವುದೇ ಪ್ರಮುಖ ಗುರಿಯಾಗಿದೆ ಎಂದು ಐಸಿಸಿ ಹೇಳಿದೆ.

'ತಟಸ್ಥ ತಾಣದಲ್ಲಿ ಬಿಸಿಸಿಐ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಲಿದೆ. ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣ, ಅಬುಧಾಬಿಯ ಶೇಖ್ ಝಯೆದ್ ಕ್ರೀಡಾಂಗಣ, ಶಾರ್ಜಾ ಕ್ರೀಡಾಂಗಣ ಹಾಗೂ ಒಮನ್ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ' ಎಂದು ಐಸಿಸಿ ತಿಳಿಸಿದೆ.


ಟೂರ್ನಿಗೆ ಪೂರ್ವಭಾವಿಯಾಗಿ ಒಮನ್ ಮತ್ತು ಯುಎಇಯಲ್ಲಿ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ಅದರಲ್ಲಿ ಎಂಟು ತಂಡಗಳು ಆಡಲಿವೆ. ಈ ಸುತ್ತಿನಲ್ಲಿ ಅರ್ಹತೆ ಪಡೆಯುವ ನಾಲ್ಕು ತಂಡಗಳು ಮುಖ್ಯಸುತ್ತಿನಲ್ಲಿ (ಸೂಪರ್ 12) ಕಣಕ್ಕಿಳಿಯಲಿವೆ. ಪ್ರಾಥಮಿಕ ಸುತ್ತಿನಲ್ಲಿ ಬಾಂಗ್ಲಾದೇಶ, ಶ್ರೀಲಂಕಾ, ಐರ್ಲೆಂಡ್, ನೆದರ್ಲೆಂಡ್ಸ್, ಸ್ಕಾಟ್ಲೆಂಡ್, ನಮಿಬಿಯಾ, ಒಮನ್ ಮತ್ತು ಪಪುವಾ ನ್ಯೂಗಿನಿ ತಂಡಗಳು ಆಡಲಿವೆ. ಭಾರತ ಸೇರಿದಂತೆ ಎಂಟು ಪ್ರಮುಖ ತಂಡಗಳು ಈಗಾಗಲೇ ಪ್ರಧಾನ ಸುತ್ತಿನಲ್ಲಿವೆ.

'ತಟಸ್ಥ ತಾಣವಾಗಿ ಟೂರ್ನಿಯನ್ನು ಉತ್ತಮವಾಗಿ ಆಯೋಜಿಸುವಲ್ಲಿ ಯುಎಇ ಕ್ರಿಕೆಟ್ ಮಂಡಳಿ ಸಿದ್ಧಹಸ್ತವಾಗಿದೆ. ಆದ್ದರಿಂದ ಟೂರ್ನಿಯನ್ನು ಸುರಕ್ಷಿತವಾಗಿ ಮುಗಿಸುವ ಭರವಸೆ ಇದೆ. ಈ ವಿಷಯದಲ್ಲಿ ಬಿಸಿಸಿಐನ ಸಂಪೂರ್ಣ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತೇವೆ' ಎಂದು ಐಸಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜೆಫ್ ಅಲಾರ್ಡಿಸ್ ತಿಳಿಸಿದ್ದಾರೆ.

2016ರಲ್ಲಿ ಭಾರತವು ಟಿ20 ವಿಶ್ವಕಪ್ ಆಯೋಜಿಸಿತ್ತು. 2020ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯಬೇಕಿದ್ದ ಟೂರ್ನಿಯನ್ನು ಕೋವಿಡ್ ಕಾರಣದಿಂದ ಮುಂದೂಡಲಾಗಿತ್ತು.

2022ರಲ್ಲಿ ಆಸ್ಟ್ರೇಲಿಯಾ ಟೂರ್ನಿಯನ್ನು ಆಯೋಜಿಸುವ ಸಾಧ್ಯತೆ ಇದೆ.

ನಾಲ್ಕನೇ ಸಲ ಒಲಿಂಪಿಕ್ಸ್‌ಗೆ ಸೀಮಾ



ಸೀಮಾ ಪೂನಿಯಾ

ಪಟಿಯಾಲ (ಪಿಟಿಐ): ಅನುಭವಿ ಡಿಸ್ಕಸ್ ಥ್ರೋ ಅಥ್ಲೀಟ್ ಸೀಮಾ ಪೂನಿಯಾ ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಥ್ಲೆಟಿಕ್ಸ್ ಕೂಟದಲ್ಲಿ ಅವರು ಮಂಗಳವಾರ ಮಹಿಳೆಯರ ವಿಭಾಗದ ಡಿಸ್ಕಸ್ ಥ್ರೋನಲ್ಲಿ ಚಿನ್ನ ಗೆದ್ದರು. ಜೊತೆಗೆ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆಯನ್ನೂ ಗಿಟ್ಟಿಸಿದರು.

37 ವರ್ಷದ ಪೂನಿಯಾ 63.72 ಮೀಟರ್ಸ್ ದೂರ ಡಿಸ್ಕಸ್ ಎಸೆದು ಅರ್ಹತೆ ಗಳಿಸಿದರು. 2004, 2012 ಮತ್ತು 2016ರ ಒಲಿಂಪಿಕ್ ಕೂಟಗಳಲ್ಲಿಯೂ ಅವರು ಸ್ಪರ್ಧಿಸಿದ್ದರು.

2018ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಮತ್ತು ಅದೇ ವರ್ಷದ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು. ಈ ವಿಭಾಗದಲ್ಲಿ ಟೋಕಿಯೊಗೆ ಅರ್ಹತೆ ಪಡೆದ ಭಾರತದ ಎರಡನೇ ಅಥ್ಲೀಟ್ ಇವರಾಗಿದ್ದಾರೆ. ಹೋದ ಸೋಮವಾರ ನಡೆದಿದ್ದ ಇಂಡಿಯನ್ ಗ್ರ್ಯಾನ್‌ಪ್ರೀ 4 ಅಥ್ಲೆಟಿಕ್ಸ್‌ನಲ್ಲಿ ಕಮಲ್‌ಪ್ರೀತ್ ಕೌರ್ 66.59 ಮೀಟರ್ಸ್ ಡಿಸ್ಕಸ್ ಎಸೆದು ಅರ್ಹತೆ ಗಳಿಸಿದ್ದರು. ಆದರೆ ಅವರು ಈ ಕೂಟದಲ್ಲಿ ತಮ್ಮ ಹೆಸರಿದ್ದರೂ ಕಣಕ್ಕಿಳಿಯಲಿಲ್ಲ.

ಗಾಲ್ಫ್: ಅದಿತಿಗೆ ಒಲಿಂಪಿಕ್ಸ್ ಟಿಕೆಟ್



ಅದಿತಿ ಅಶೋಕ್– ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಭಾರತದ ಅಗ್ರಶ್ರೇಯಾಂಕದ ಮಹಿಳಾ ಗಾಲ್ಫ್‌ಪಟು ಅದಿತಿ ಅಶೋಕ್ ಸತತ ಎರಡನೇ ಬಾರಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಕರ್ನಾಟಕದ ಅದಿತಿ ಅವರು ಮಂಗಳವಾರ ಬಿಡುಗಡೆಯಾದ ಒಲಿಂಪಿಕ್ಸ್ ಗಾಲ್ಫ್ ಅರ್ಹತಾ ಪಟ್ಟಿಯಲ್ಲಿ 45ನೇ ಸ್ಥಾನ ಪಡೆದಿದ್ದಾರೆ. ಅದಿತಿ 2016ರ ಒಲಿಂಪಿಕ್ಸ್‌ನಲ್ಲಿಯೂ ಸ್ಪರ್ಧಿಸಿದ್ದರು.

ಭಾರತದ ಅಗ್ರಮಾನ್ಯ ಗಾಲ್ಫರ್‌ಗಳಾದ ಅನಿರ್ಬನ್ ಲಹಿರಿ ಮತ್ತು ಉದಯನ್ ಮಾನೆ ಅವರೂ ಅರ್ಹತೆ ಗಳಿಸಿದ್ದಾರೆ.

'ರಿಯೊ ಒಲಿಂಪಿಕ್ಸ್ ನಿನ್ನೆ, ಮೊನ್ನೆಯಷ್ಟೇ ಆಗಿರುವಂತಿದೆ. ಈಗ ಮತ್ತೊಮ್ಮೆ ದೇಶವನ್ನು ನನ್ನ ನೆಚ್ಚಿನ ಕ್ರೀಡೆಯಲ್ಲಿ ಒಲಿಂಪಿಕ್ಸ್‌ನಲ್ಲಿ ಪ್ರತಿನಿಧಿಸುವ ಅವಕಾಶ ಒದಗಿಬಂದಿದೆ. ಇದು ನಿಜಕ್ಕೂ ಹೆಮ್ಮೆಯ ಸಂಗತಿ' ಎಂದು ಅದಿತಿ ಟ್ವೀಟ್ ಮಾಡಿದ್ದಾರೆ.



ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಬಳಿಕ ಬಿಡುವು ಪಡೆದ ಭಾರತ ತಂಡದ ಆಟಗಾರರಾದ ಅಜಿಂಕ್ಯ ರಹಾನೆ ಮತ್ತು ರೋಹಿತ್ ಶರ್ಮಾ ತಮ್ಮ ಕುಟುಂಬದೊಂದಿಗೆ ಕಾಲ ಕಳೆದರು. ಅಜಿಂಕ್ಯ ಪತ್ನಿ ರಾಧಿಕಾ, ಮಗಳು ಆರ್ಯಾ ಮತ್ತು ರೋಹಿತ್ ಪತ್ನಿ ರಿತಿಕಾ, ಮಗಳು ಸಮೈರಾ ಇದ್ದಾರೆ –ಇನ್ಸ್ಟಾಗ್ರಾಮ್ ಚಿತ್ರ

ತಿರುಗೇಟು ನೀಡುವ ತವಕದಲ್ಲಿ ಮಿಥಾಲಿ ಪಡೆ



ಮಿಥಾಲಿ ರಾಜ್

ಟಾಂಟನ್ (ಪಿಟಿಐ): ಬುಧವಾರ ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ಮಿಥಾಲಿ ರಾಜ್ ಬಳಗವು ಇಂಗ್ಲೆಂಡ್ ತಂಡಕ್ಕೆ ತಿರುಗೇಟು ನೀಡುವ ಛಲದಲ್ಲಿದೆ.

ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ 1–0 ಮುನ್ನಡೆ ಸಾಧಿಸಿದೆ. ಆದ್ದರಿಂದ ಸರಣಿ ಜಯದ ಆಸೆ ಜೀವಂತವಾಗಿರಬೇಕಾದರೆ ಭಾರತ ತಂಡವು ಈ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿದೆ. ಅದಕ್ಕಾಗಿ ಮೊದಲ ಪಂದ್ಯದಲ್ಲಿ ಕಾಡಿದ್ದ ಬ್ಯಾಟಿಂಗ್ ವೈಫಲ್ಯವನ್ನು ಮೀರಿ ನಿಲ್ಲುವ ಪ್ರಯತ್ನದಲ್ಲಿದೆ.

ತಂಡದ ಪ್ರಮುಖ ಬ್ಯಾಟರ್‌ಗಳಾದ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಅವರ ಸತತ ವೈಫಲ್ಯವು ತಂಡಕ್ಕೆ ದುಬಾರಿಯಾಗುತ್ತಿದೆ. ಮೊದಲ ಪಂದ್ಯದಲ್ಲಿ ಮಿಥಾಲಿ ರಾಜ್ ಅವರ ಆಕರ್ಷಕ ಅರ್ಧಶತಕದ ಬಲದಿಂದ ತಂಡವು ಗೌರವಾರ್ಹ ಮೊತ್ತ ಕಲೆಹಾಕಿತ್ತು. ಆದರೆ, ಜಯದ ಸಾಧನೆಗೆ ಅದು ಸಾಕಾಗಲಿಲ್ಲ.

ಪದಾರ್ಪಣೆ ಮಾಡಿದ ಕಿರಿಯ ಆಟಗಾರ್ತಿ ಶಫಾಲಿ ವರ್ಮಾ, ಚುರುಕಾಗಿ ಬ್ಯಾಟಿಂಗ್ ಮಾಡಿದ್ದರು. ಆದರೆ, ದೀರ್ಘ ಇನಿಂಗ್ಸ್ ಆಡುವಲ್ಲಿ ಎಡವಿದ್ದರು. ಅದರಿಂದಾಗಿ ಈ ಪಂದ್ಯದಲ್ಲಿ ಅವರ ಮೇಲೆ ಭರವಸೆ ಇದೆ. ಅವರು ಮತ್ತು ಸ್ಮೃತಿ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತವಾಗಿದೆ. ಈ ಜೋಡಿಯು ಉತ್ತಮ ಅಡಿಪಾಯ ಹಾಕಿದರೆ, ತಂಡಕ್ಕೆ ದೊಡ್ಡ ಮೊತ್ತ ಗಳಿಸುವುದು ಸುಲಭವಾಗಲಿದೆ.

ಆತಿಥೇಯ ತಂಡದ ನತಾಲಿ ಶಿವರ್ ಮತ್ತು ಟ್ಯಾಮಿ ಬೇಮೌಂಟ್ ಅವರು ಉತ್ತಮ ಲಯದಲ್ಲಿದ್ದಾರೆ. ಅವರನ್ನು ಕಟ್ಟಿಹಾಕುವತ್ತ ಭಾರತದ ಬೌಲಿಂಗ್ ಪಡೆ ವಿಶೇಷ ತಂತ್ರಗಾರಿಕೆ ಹೆಣೆಯುವುದು ಅನಿವಾರ್ಯ.

ಪಂದ್ಯ ಆರಂಭ: ಸಂಜೆ 6.30 (ಭಾರತೀಯ ಕಾಲಮಾನ).